UNIVERSAL LIBRARY
OU_200457
UNIVERSAL LIBRARY

ಮನೋರಂಜನ ಪ್ರಕಾಶನ; ೪

# ಶ್ರೀಕಾಂತ

(ತೃತೀಯ ಭಾಗ)

ಮೂಲ ಲೇಖಕರು :

ದಿ. ಶರಚ್ಚಂದ್ರ ಚಟ್ಟೋಪಾಧ್ಯಾಯರು

ಅನುವಾದಕರು :

ಶ್ರೀ. ಗುರುನಾಥ ಜೋಶಿ

ಥಮ ಮುದ್ರಣ ]                [ ಒಂದೂವರೆ ರೂಪಾಯಿ

ಮನೋರಂಜನ ಪ್ರಕಾಶನ ಸಮಿತಿ, ಧಾರವಾಡ.

ಮುದ್ರಕರು :
ಫಕೀರಪ್ಪಾ ಎಲ್ಲಪ್ಪಾ ಮಿಂದಗುದ್ದಿ,
ರವೀಂದ್ರ ಮುದ್ರಣಾಲಯ,
ಧಾರವಾಡ

( ಈ ಗ್ರಂಥದ ಸರ್ವಾಧಿಕಾರವು ಪ್ರಕಾಶಕರದು )

ಪ್ರಕಾಶಕರು .
ಶ್ರೀ. ಎಚ್. ಬಿ. ನವಲೂರೆ,
ಮನೋರಂಜನ ಪ್ರಕಾಶನ ಸಮಿತಿ,
ಧಾರವಾಡ

# ಶ್ರೀಕಾಂತ

ಆ ದಿನ ಅಂತಿಮ ವಿಯೋಗದ ಕಾಲದಲ್ಲಿ ರಾಜಲಕ್ಷ್ಮಿಯು ಕಂಬನಿಯಲ್ಲಿ ಮುಗಿಸಿಬಂದ ಈ ನಿರ್ಭಾಗ್ಯ ಜೀವನದ ಅಧ್ಯಾಯವನ್ನು ಪುನಃ ಪ್ರಾರಂಭಿಸಲು ಅಂತಃಕರಣದಿಂದ ಕರೆಯು ಬಂದೀತೆಂದು ನಾನು ಬಗೆದಿದ್ದಿಲ್ಲ. ಆದರೆ ಆ ಕರೆಯು ಬಂದಾಗ ಅತ್ಯಂತ ಆಶ್ಚರ್ಯವಾಯಿತು, ಸಂತೋಷವಾಯಿತು. ಆದಾಗ್ಯೂ ಆ ಕರೆಯ ಮುಂದೆ ತಲೆಬಾಗಿಸದ ಗತ್ಯಂತರವಿಲ್ಲ ಎಂಬುದನ್ನು ನಾನು ಚೆನ್ನಾಗಿ ಅರಿತೆ.

ಆದುದರಿಂದಲೇ ಈ ದಿನ ಪುನಃ ನನ್ನ ಈ ಭ್ರಷ್ಟ ಜೀವನದ ಸರಿದು ಹೋದ ಸಂಗತಿಗಳನ್ನು ಅನೇಕ ಸ್ಥಳಗಳಿಂದ ಸಂಗ್ರಹಿಸಿ ಹರಿದುಹೋದ ಗ್ರಂಥಿಗಳನ್ನು ಮತ್ತೊಂದು ಬಾರಿ ಕಟ್ಟುವುದಕ್ಕಾಗಿ ಪ್ರವೃತ್ತನಾಗಿದ್ದೇನೆ.

ನಾನು ಮನೆಗೆ ಹಿಂತಿರುಗಿ ಬಂದ ಮೇಲೆ ನನ್ನ ಸುಖದುಃಖದಿಂದ ಕೂಡಿದ ಜೀವನವನ್ನು ಯಾರೋ ಕತ್ತರಿಸಿ ಅದರಲ್ಲಿ ಎರಡು ಭಾಗಗಳನ್ನು ಮಾಡಿದರು ಎಂದು ನನಗೆ ನೆನಹು ಬರುತ್ತಿರುವುದು. ನನ್ನ ಈ ಜೀವನದ ದುಃಖದ ಭಾರವು ನನ್ನದೊಬ್ಬನದೇ ಇಲ್ಲವೆಂದು ಆಗ ವಿಚಾರಬಂದಿದ್ದಿತು. ಈ ಜೀವನವು ಯಾರಿಗೆ ಬೇಕಾಗಿದೆಯೋ ಅವರೇ ಇದರ ಭಾರವನ್ನು ಹೊತ್ತುಕೊಂಡು ತಿರುಗಲಿ ಎಂದು ಎನಿಸಿತ್ತು. ನಾನು ದಯದೋರಿ ಬದುಕಿದ್ದುದು ರಾಜಲಕ್ಷ್ಮಿಯ ಸದ್ಭಾಗ್ಯವೆಂದು ಹೇಳಬೇಕು. ಆದರೆ ಈಗ ಆಗಸದ ಬಣ್ಣವು ಬೇರೊಂದು ಬಗೆಯಾಗಿ ಕಾಣತೊಡಗಿತು, ಹವೆಯ ಸ್ಪರ್ಶವೂ ಮತ್ತೊಂದು ರೀತಿಯಾಗಿ ಹತ್ತತೊಡಗಿತು. ಈಗ ನನಗೆಲ್ಲಿಯೂ ಮನೆಯಿಲ್ಲ, ನನ್ನದು-ಪರರದು ಎಂಬುದೊಂದೂ ಇರಲಿಲ್ಲ. ಒಂದು ಅನಿರ್ವಚನೀಯವಾದ ಉಲ್ಲಾಸವು ಒಳಗೂ ಹೊರಗೂ ತುಂಬಿದ್ದಿತು—ರೋಗವು ರೋಗದ ರೂಪದಲ್ಲಿ, ವಿಪತ್ತು ವಿಪತ್ತಿನ ರೂಪದಲ್ಲಿ, ಅಭಾವವು ಅಭಾವದ ರೂಪದಲ್ಲಿ ಮನದೊಳಗೆ ಸ್ಥಳವನ್ನು ಪಡೆಯುವಂತಿರಲಿಲ್ಲ. ಪ್ರಪಂಚದಲ್ಲಿ ಎಲ್ಲಿಗಾದರೂ ಸರಿಯೆ ಹೋಗಲು, ಎಲ್ಲಾದರೂ ಏನನ್ನಾದರೂ ಮಾಡಲು ಅಡಚಣೆ ಆತಂಕ ಸ್ವಲ್ಪಾದರೂ ಇರಲಿಲ್ಲ.

ಇವು ಬಹಳ ಹಿಂದಿನ ಮಾತುಗಳು. ಆ ಆನಂದವು ಈಗಿಲ್ಲ; ಆದರೆ ಆ ದಿನ ಜೀವನದಲ್ಲಿ ಒಂದು ಆಂತರಿಕ ವಿಶ್ವಾಸದ ಸ್ವಾದವು ಒಂದು ದಿನವಾದರೂ ದೊರೆಯಿತೆಂಬುದು ನನಗೆ ಸೌಭಾಗ್ಯದ ಮಾತು. ಆದರೆ ಅದನ್ನು ನಾನು ಅಂದೇ ಕಳೆದುಕೊಂಡು ಬಿಟ್ಟೆ ಅದಕ್ಕಾಗಿ ನನಗೆ ಒಂದು ದಿನವೂ ದುಃಖವಾಗಿಲ್ಲ ಆದರೆ ನನಗೆ ಒಂದು ಮಾತು ಬಾರಿ ಬಾರಿ ಮನದಲ್ಲಿ ಏಳುತ್ತಿದೆ—ಯಾವ ಶಕ್ತಿಯು ಆ ದಿನ ಹೃದಯದ ಅಂತರಾಳದಲ್ಲಿ ಜಾಗ್ರತವಾಗಿ ಪ್ರಪಂಚದ ನಿರಾನಂದವನ್ನೆಲ್ಲ ಇಷ್ಟು ಬೇಗ ಹರಣಮಾಡಿಬಿಟ್ಟಿತೋ ಅದು ಎಷ್ಟು ವಿರಾಟವಾದ ಶಕ್ತಿಯಿರುವುದು ! ಆ ದಿನ ನನ್ನಂತೆಯೆ ಇರುವ ದುರ್ಬಲ ಕರಗಳಿಗೆ ಇಷ್ಟು ದೊಡ್ಡ ಭಾರವನ್ನು ಒಪ್ಪಿಸದೆ ನಾನು ಸಮಸ್ತ ಬ್ರಹ್ಮಾಂಡದ ಭಾರವನ್ನು ಹೊರುವ ಕೈಗಳಿಗೆ ಆ ದಿನದ ಅಖಂಡ ವಿಶ್ವಾಸ ಒಪ್ಪಿಸುವುದನ್ನು ಕಲಿತಿದ್ದರೆ ಈ ದಿನ ಪುನಃ ನಾನೇಕೆ ಇಷ್ಟು ಚಿಂತೆ ಪಡಬೇಕಾಗುತ್ತಿತ್ತು? ಈಗ ಇರಲಿ ಆ ಮಾತು.

ರಾಜಲಕ್ಷ್ಮಿಗೆ ನಾನು ತಲ್ಪಿದ ಬಗ್ಗೆ ಕಾಗದವನ್ನು ಬರೆದಿದ್ದೆ ಅದಕ್ಕೆ ಉತ್ತರವು ಬಹಳ ದಿನಗಳ ನಂತರ ಬಂದಿತು ನನ್ನ ಅಸ್ವಸ್ಥ ಶರೀರದ ಬಗೆಗೆ ದುಃಖವನ್ನು ವ್ಯಕ್ತಗೊಳಿಸುತ್ತ ಗೃಹಸ್ಥನಾಗುವುದಕ್ಕೆ ನಾನಾಬಗೆಯ ದೊಡ್ಡದೊಡ್ಡ ಉಪದೇಶಗಳನ್ನು ಕೊಟ್ಟಿದ್ದಳು. ಅಲ್ಲದೆ ತನ್ನ ಚಿಕ್ಕ ಪತ್ರದಲ್ಲಿ ತನಗೆ ಕಾರ್ಯಬಾಹುಲ್ಯದ ಮೂಲಕ ಪತ್ರವನ್ನು ಬರೆಯಲಿಕ್ಕೆ ಬಿಡುವು ದೊರೆಯದಿದ್ದರೂ ನಾನು ಮಾತ್ರ ಆಗಾಗ್ಗೆ ಆಕೆಗೆ ಪತ್ರವನ್ನು ಬರೆಯಬೇಕು ಮತ್ತು ಆಕೆಯನ್ನು ನನ್ನವಳನ್ನಾಗಿಯೇ ತಿಳಿದುಕೊಳ್ಳಬೇಕು ಎಂದು ಬರೆದಿದ್ದಳು !

ತಥಾಸ್ತು ! ಇಷ್ಟು ದಿವಸಗಳ ನಂತರ ಅದೇ ರಾಜಲಕ್ಷ್ಮಿಯ ಪತ್ರ !

ಆಕಾಶ ಕುಸುಮಗಳು ಆಕಾಶದಲ್ಲಿಯೆ ಕಮರಿದುವು. ಒಂದೆರಡು ಉದುರಿಬಿದ್ದ ಪಕಳಿಗಳನ್ನು ಆರಿಸಿಕೊಂಡು ಅವನ್ನು ಮನೆಗೆ ಒಯ್ಯಲು ನಾನು ಭೂಮಿಗೆ ಬಾಗಲಿಲ್ಲ ನನ್ನ ನಯನಗಳಿಂದ ಒಂದೆರಡು ಹನಿಗಳು ಬಿದ್ದಿರಬಹುದು, ಆದರೆ ಅದು ನನಗೆ ನೆನಪಿಲ್ಲ ಆದಾಗ್ಯೂ ನಾನು ಮತ್ತೆ ಸ್ವಪ್ನವನ್ನು ನೋಡುವಲ್ಲಿ ಕೆಲವು ದಿನಗಳನ್ನು ಕಳೆಯಲಿಲ್ಲವೆಂಬುದು ನೆನಪಿದೆ. ಆದರೂ ಅದೇ ರೀತಿಯಲ್ಲಿ ಐದಾರು ತಿಂಗಳುಗಳು ಕಳೆದುವು.

ಒಂದು ದಿನ ಬೆಳಿಗ್ಗೆ ನಾನು ಹೊರಗೆ ಹೋಗುವ ಸಿದ್ಧತೆಯಲ್ಲಿ ಇದ್ದೆ. ಅಷ್ಟರಲ್ಲಿ ಒಂದು ಅದ್ಭುತ ಪತ್ರವು ಬಂದಿತು; ಮೇಲೆ ಹೆಣ್ಣುಮಕ್ಕಳು ವಿಳಾಸವನ್ನು ಬರೆದಂತೆ ಇದ್ದಿತು. ಅದನ್ನು ತೆರೆಯುತ್ತಲೆ ಅದರೊಳಗಿಂದ ಒಂದು ಚಿಕ್ಕ ಪತ್ರವು ಕೆಳಗೆ ಬಿದ್ದುಬಿಟ್ಟಿತು. ಅದರಲ್ಲಿನ ಅಕ್ಷರಗಳನ್ನೂ ಸಹಿಯನ್ನೂ ಕಂಡು ನನ್ನ ಕಣ್ಣುಗಳ ಮೇಲೆ ನನ್ನ ವಿಶ್ವಾಸವುಂಟಾಗಲಿಲ್ಲ. ಹತ್ತು ವರ್ಷಗಳ ಹಿಂದೆ ತೀರಿಹೋದ ನನ್ನ ತಾಯಿಯ ಶ್ರೀಹಸ್ತದ ಸಹಿ ಇದ್ದಿತು! ಹೆಸರು ಆಕೆಯದೇ, ಸಹಿಯೂ ಆಕೆಯದೇ! ಅದನ್ನು ಓದಿನೋಡಿದೆ. ನನ್ನ ತಾಯಿ ತನ್ನ 'ಗಂಗಾಜಲ*' ಎಂದು ಹೆಸರಿಟ್ಟ ತನ್ನ ಸಖಿಗೆ ಸಾಧ್ಯವಿದ್ದಷ್ಟು ಅಭಯ ವಚನವನ್ನು ಕೊಟ್ಟಿದ್ದಳು ಹದಿಮೂರು ಹದಿನಾಲ್ಕು ವರ್ಷಗಳ ಹಿಂದೆ ಈ 'ಗಂಗಾಜಲ' ಎಂಬಾಕೆಗೆ ಬಹಳ ವಯಸ್ಸು ಆದ ಮೇಲೆ ಒಂದು ಕನ್ಯಾರತ್ನವು ಹುಟ್ಟಿತು. ಆಗ ಆಕೆಯು ತನ್ನ ಭಾವೀ ಜೀವನವು ದುಃಖಮಯವಾಗುವುದೆಂದು ಎಣಿಸಿಯೊ ಏನೊ ದೈನ್ಯದಿಂದ ನನ್ನ ತಾಯಿಗೆ ಒಂದು ಕಾಗದವನ್ನು ಬರೆದಿರಬಹುದು ಅದಕ್ಕೆ ಉತ್ತರವಾಗಿ ನನ್ನ ಸ್ವರ್ಗವಾಸಿನೀ ತಾಯಿಯು ಗಂಗಾಜಲಳ ಮಗಳ ಮದುವೆಯ ಸಂಪೂರ್ಣ ಹೊಣೆಯನ್ನು ಹೊರುವೆನೆಂದು ಬರೆದಿದ್ದಳು. ಆ ಕಾಗದವೇ ಇದು, ಬೆಲೆಯುಳ್ಳ ಪ್ರಮಾಣ ಪತ್ರ. ಆಗಿನ ಗಂಗಾಜಲಳ ದುಃಸ್ಥಿತಿಯ ಕರುಣಕತೆಯನ್ನು ಓದಿ ತಾಯಿಯ ಅಂತಃಕರಣವು ಕರಗಿರಬಹುದು. ಅದಕ್ಕೋಸ್ಕರ ನನ್ನ ತಾಯಿಯು ಎಲ್ಲಾದರೂ ಕನ್ಯಾರತ್ನಕ್ಕೆ ಯೋಗ್ಯ ವರನು ದೊರೆಯದಿದ್ದರೆ ತನ್ನ ಮಗನಂತೂ ಇದ್ದೇ ಇರುವನು ಎಂದು ಬರೆದಿದ್ದಳು! ಸರಿ! ಪ್ರಪಂಚದಲ್ಲಿ ಎಲ್ಲಾದರೂ ಸುಪಾತ್ರ ಸಿಗದಿದ್ದರೆ ನಾನು ಇರುವೆ! ಇಡಿ ಕಾಗದವನ್ನು ನಾನು ಮೊದಲಿನಿಂದ ಕೊನೆಯ ವರೆಗೆ ಎರಡು ಬಾರಿ ಓದಿದೆ. ಅದು ವಕೀಲರ ಕಾರಕೂನರು ಬರೆದ ರೀತಿಯಲ್ಲಿದ್ದಿತು. ನನ್ನ ತಾಯಿಯು ವಕೀಲಳಾಗಬೇಕಿತ್ತು, ಏಕೆಂದರೆ ಮಾಡಬೇಕಾದ ಕಲ್ಪನೆಗಳೆಲ್ಲವನ್ನೂ ಮಾಡಿ ತನ್ನನ್ನೂ ವಂಶೀಯರನ್ನೂ ಕಟ್ಟಿ ಹೋಗಿರುವಳು. ಆ ಪತ್ರದಲ್ಲಿ— ಆ ಪ್ರಮಾಣ ಪತ್ರದಲ್ಲಿ-ಸ್ವಲ್ಪವೂ ತ್ರುಟಿಯಿಲ್ಲ, ಉಳಿದುಕೊಳ್ಳಲು ಬರುವಂತೆ ಇನಿತು ಮಾರ್ಗವೂ ಬಿಡಲ್ಪಟ್ಟಿಲ್ಲ

*· ಬಂಗಾಲದಲ್ಲಿ ಹೆಣ್ಣುಮಕ್ಕಳು ತಮ್ಮ ಪ್ರೀತಿಯ ಸಖಿಗೆ 'ಗಂಗಾಜಲ' ಎಂದು ಹೆಸರು ಇಡುವರು ಮತ್ತು ಅದೇ ಪ್ರೀತಿಯ ಹೆಸರಿನಿಂದ ಅವರನ್ನು ಕೂಗುವರು.

ಅದು ಏನೇ ಇರಲಿ, ಈ ಕಾಗದದ ಮೇಲೆಯೆ ಅವಲಂಬಿಸಿಕೊಂಡು ಗಂಗಾಜಲಳು ಹದಿಮೂರು ಹದಿನಾಲ್ಕು ವರ್ಷಗಳಿಂದ ಕುಳಿತುಕೊಂಡಿರುವಳೆಂದು ನನಗೆನಿಸಲಿಲ್ಲ ಆದರೆ, ಮರು ಕ್ಷಣವೇ ಬಹಳ ಪ್ರಯತ್ನ ಮಾಡಿದಾಗ್ಯೂ ಯೋಗ್ಯ ವರನು ದೊರೆಯದಿದ್ದುದರಿಂದಲೂ ರೂಪಾಯಿಗಳು ಸಿಗದ್ದರಿಂದಲೂ ತನ್ನ ಮಗಳ ಮೈಯ ಬೆಳವಣಿಗೆಯನ್ನು ಕಂಡು ಎದೆಯ ನೆತ್ತರವು ತಲೆಗೆ ಏರತೊಡಗಿದ್ದರಿಂದಲೂ ಆಕೆಯು ಈ ದುರ್ಭಾಗ್ಯ ಸುಪಾತ್ರನ ಮೇಲೆ ತನ್ನ ಬ್ರಹ್ಮಾಸ್ತ್ರವನ್ನು ಬಿಟ್ಟಿರಬಹುದೆಂದು ನನಗೆನಿಸಿತು.

ತಾಯಿಯು ಈ ದಿನ ಜೀವಿಸಿದ್ದರೆ ಈ ಕಾಗದಕ್ಕಾಗಿ ನಾನು ಆಕೆಯ ತಲೆಯನ್ನೇ ತಿಂದು ಬಿಡುತ್ತಿದ್ದೆ ಆದರೆ ಈ ದಿನ— ಆಕೆ ನಗುತ್ತ ಕುಳಿರುವಲ್ಲಿಗೆ ಹಾರಿ ಆಕೆಯ ಪಾದಗಳಿಗೆ ನನ್ನ ಹಣೆಯನ್ನು ಗಟ್ಟಿಸಿಕೊಂಡು ನನ್ನ ಹೃದಯಜ್ವಾಲೆಯನ್ನು ತಣ್ಣಗೆ ಮಾಡಿಕೊಳ್ಳಬೇಕೆಂದರೆ, ಆ ಮಾರ್ಗವು ನನಗಾಗಿ ಈ ದಿನ ಮುಚ್ಚಿಹೋಗಿರುವುದು

ಆದುದರಿಂದ ನಾನು ತಾಯಿಗೇನನ್ನೂ ಮಾಡದಾದೆ ಇನ್ನು ಗಂಗಾಜಲಳಿಗಾದರೂ ಏನಾದರೊಂದನ್ನು ಮಾಡಲು ಸಮರ್ಥನಿರುವೆನೊ ಇಲ್ಲವೊ ಎಂಬುದನ್ನು ಪರೀಕ್ಷಿಸುವುದಕ್ಕಾಗಿ ಸ್ಟೇಶನ್ನಿಗೆ ಹೋದೆ ರಾತ್ರಿಯಲ್ಲೇ ಹೊರಟುಬಿಟ್ಟೆ ಇಡಿ ರಾತ್ರಿಯನ್ನು ರೈಲುಗಾಡಿಯಲ್ಲಿ ಕಳೆದು ಮರುದಿನ ಆಕೆಯ ಊರನ್ನು ತಲ್ಪಿ ಆಕೆಯ ಮನೆಯನ್ನು ಮುಟ್ಟಿದಾಗ ಇಳಿಹೊತ್ತಾಗಿದ್ದಿತು ಗಂಗಾಜಲಳಮ್ಮಳಿಗೆ ಮೊದಲು ನನ್ನ ಗುರುತು ಸಿಕ್ಕಲಿಲ್ಲ ನಂತರ ಪರಿಚಯವನ್ನು ಮಾಡಿಕೊಂಡ ಬಳಿಕ ತಾಯಿಯು ತೀರಿಕೊಂಡಾಗ ಆತ್ಮೀಯರು ಅಳುವಂತೆ ಹದಿಮೂರು ವರುಷಗಳ ನಂತರ ಸಹ ಗಂಗಾಜಲಮ್ಮಳು ಅತ್ತು ಬಿಟ್ಟಳು.

ಲೋಕದ ದೃಷ್ಟಿಯಿಂದ ಮತ್ತು ಧರ್ಮದ ದೃಷ್ಟಿಯಿಂದ ಈಗ ನಾನು ನಿನ್ನ ತಾಯಿಯಂತೆ ಇರುವೆ ಎಂದು ಆಕೆಯು ನನ್ನ ಹೊಣೆಯ ಪ್ರಥಮ ಸೋಪಾನದಿಂದ ಮೊದಲುಗೊಂಡು ನನ್ನ ಸಾಂಸಾರಿಕ ಪರಿಸ್ಥಿತಿಯನ್ನು ಕುರಿತು ಸೂಕ್ಷ್ಮ ವಿಮರ್ಶೆಯನ್ನು ಮಾಡತೊಡಗಿದಳು— ತಂದೆಯವರು ಏನನ್ನು ಮತ್ತು ಎಷ್ಟು ಬಿಟ್ಟು ಹೋಗಿದ್ದಾರೆ, ತಾಯಿಯ ಆಭರಣಗಳು ಯಾವುಯಾವುವುಂಟು, ಅವು ಯಾರ ಬಳಿಯಲ್ಲುಂಟು, ನಾನು ನೌಕರಿಯನ್ನೇಕೆ ಮಾಡುವುದಿಲ್ಲ, ಒಂದು ವೇಳೆ ಮಾಡಿದರೆ ತಿಂಗಳೊಂದಕ್ಕೆ ಸುಮಾರು

ನನಗೆಷ್ಟು ಸಂಬಳ ದೊರಕೀತು ಇತ್ಯಾದಿ ಇತ್ಯಾದಿ. ಆದರೆ ಆಕೆಯ ಮುಖವನ್ನು ನೋಡಲಾಗಿ ಈ ವಿಮರ್ಶೆಯ ಫಲವು ಅಷ್ಟು ಸಂತೋಷಜನಕವಾಗಿ ಆಕೆಗೆ ದೊರೆಯಲಿಲ್ಲ ಎಂಬುದು ತಿಳಿದು ಬಂದಿತು. ಆಕೆಯೆಂದಳು— ಆಕೆಯ ಒಬ್ಬ ನೆಂಟರು ಬರ್ಮಾಕ್ಕೆ ನೌಕರಿ ಮಾಡಲು ಹೋಗಿದ್ದರು. ಈಗ ನೌಕರಿಯಿಂದ ಬಹಳ ದೊಡ್ಡ ಶ್ರೀಮಂತರಾಗಿರುವರು ಅಲ್ಲಿ ಬೀದಿ ಬೀದಿಗಳಲ್ಲಿ ರೂಪಾಯಿಗಳು ಸೂರೆಯಾಗಿರುವುವು, ಅವನ್ನು ಆರಿಸಿಕೊಳ್ಳುವುದಕ್ಕೇ ವೇಳೆ ಬೇಕು! ಅಲ್ಲಿಗೆ ಹೋಗಿ ಹಡಗದಿಂದ ಇಳಿಯುತ್ತಲೇ ಸಾಹೇಬರು ಬಂಗಾಲಿಗಳನ್ನು ಹೆಗಲ ಮೇಲೆ ಕುಳ್ಳಿರಿಸಿಕೊಂಡು ಹೋಗುವರು. ಮತ್ತು ನೌಕರಿಯನ್ನು ಕೊಡುವರು. ಇದೇ ರೀತಿಯ ಬಹಳ ಮಾತುಗಳನ್ನು ಹೇಳಿದಳು ಗಂಗಾಜಲಮ್ಮ. ಆದರೆ ಈ ಬಗೆಯ ಕಲ್ಪನೆ ಕೇವಲ ಆಕೆಗೆ ಮಾತ್ರವೇ ಇರಲಿಲ್ಲ, ಇನ್ನೂ ಅನೇಕ ಜನ ಬಂಗಾಲಿಗಳಿಗೆ ಇದ್ದಿತು. ಆದುದರಿಂದ ಅವರು ಉನ್ಮತ್ತರಾಗಿ ನಿಸ್ಸಹಾಯ ಅವಸ್ಥೆಯಲ್ಲಿ ಅಲ್ಲಿಗೆ ಓಡಿ ಬಂದಿದ್ದರು ಅವರನ್ನು ಆ ಬಿಳಿಗುದುರೆಯ ಮೋಹದಿಂದ ಮುಕ್ತ ಮಾಡಬೇಕಾದರೆ ಬಹಳ ಕಷ್ಟವನ್ನು ನಾವು ಅನುಭವಿಸಬೇಕಾಯಿತು — ಈಗ ಇದಿರಲಿ ಗಂಗಾಜಲಮ್ಮಳು ಮಾಡಿದ ಬರ್ಮಾ ವರ್ಣನೆಯು ನನಗೆ ಬಾಣದಂತೆ ನಟ್ಟಿತು. ಶ್ರೀಮಂತನಾಗಬೇಕೆಂಬ ಆಸೆಯಿಂದಲ್ಲ— ಇಷ್ಟು ದಿನ ನನ್ನಲ್ಲಿ ಮಲಗಿಕೊಂಡಿದ್ದ ಅಲೆದಾಟದ ಹುಚ್ಚು ಎಚ್ಚತ್ತು ಕುಣಿಯತೊಡಗಿತು ಕೇವಲ ದೂರದಿಂದಲೇ ಸಮುದ್ರದ ಅನಂತ ಜಲರಾಶಿಯನ್ನು ನೋಡಿ ನಾನು ಮುಗ್ಧನಾಗುತ್ತಿದ್ದೆ, ಅದನ್ನು ಈಗ ನಾನು ದಾಟಿ ಹೋಗಬೇಕೆಂಬ ಬಯಕೆಯು ನನ್ನಲ್ಲುಂಟಾಗಿ ನನ್ನನ್ನು ಒದ್ದಾಡಿಸತೊಡಗಿತು. ಆಗ ಹೇಗಾದರೂ ಮಾಡಿ ಈ ಮದುವೆಯ ಪರಲು ಹರಿದುಕೊಂಡು ಅಲ್ಲಿಗೆ ಹೋಗಲೇಬೇಕೆಂಬ ಇಚ್ಛೆಯು ಪ್ರಬಲವಾಯಿತು.

ಮನುಷ್ಯನು ಮನುಷ್ಯನೊಡನೆ ಹೇಳಬೇಕಾದುದನ್ನೆಲ್ಲ ಗಂಗಾಜಲಮ್ಮ ಹೇಳಿಯೇ ಬಿಟ್ಟಳು, ಆಗ್ರಹ ಮಾಡಿದಳು ಆಕೆಯಿಂದ ಬಿಡುಗಡೆ ಹೊಂದುವದೇ ಕಷ್ಟವಾಯಿತು ಆದಾಗ್ಯೂ, ನನ್ನ ಮಗಳಿಗೆ ಯೋಗ್ಯ ವರನನ್ನು ತಾನು ಹುಡುಕುವೆನೆಂದು ಹೇಳಿ, ನನ್ನನ್ನು ಒಂದರಿಂದ ಮುಕ್ತ ಮಾಡಿದಳು. ನನಗೆ ಬಹಳ ಸಂತೋಷವಾಯಿತು ಆದರೆ ರಾತ್ರಿಯಲ್ಲಿ ಆಕೆಯು ಮುಖವನ್ನು ಕೆಳಗೇ ಮಾಡಿಕೊಂಡು ಊಟಕ್ಕೆ ಕುಳಿತುದನ್ನು ಕಂಡು ಮತ್ತೆ

ನಾನು ಉದ್ವಿಗ್ನನಾದೆ, ತನ್ನ ಕೈಯಿಂದ ನನ್ನನ್ನು ಪಾರುಮಾಡಿಗೊಡಬಾರದೆಂಬ ಇಚ್ಛೆ ಆಕೆಯಲ್ಲಿದೆಯೆಂದು ನನಗೆನಿಸಿತು. ಆಕೆಯು ಅನೇಕ ಪ್ರಮಾಣಗಳನ್ನು ಕೊಟ್ಟು, ಅನೇಕ ಜನರ ಹೆಸರನ್ನು ತೆಗೆದುಕೊಂಡು, ಅನೇಕ ಪ್ರಮಾಣಗಳನ್ನು ಕೊಡುತ್ತ ತನ್ನ ಹುಡುಗಿಯನ್ನು ಮದುಯಾದವರ ಭಾಗ್ಯ ತೆರೆಯುವುದು ಎಂಬಾಶಯದ ಮಾತುಗಳನ್ನು ಹೇಳಿದಳು. ಹೆಂಡತಿಯ ಸೌಭಾಗ್ಯದ ಫಲದಿಂದ ಚಿನ್ನದ ಕಣಿಯ ಮೇಲೆ ಕುಳಿತ ಎಷ್ಟೋ ಮೂರ್ಖ ಮಹಾನುಭಾವರ ಕತೆಯನ್ನು ವಿವರಿಸಿದಳು.

ಇದಕ್ಕೆ ಉತ್ತರವಾಗಿ ನಾನು ವಿನಯಪೂರ್ವಕ ಹೇಳಿದೆ— ನನಗೆ ದುಡ್ಡಿನ ಕಡೆಗೆ ಆಸಕ್ತಿಯೇನೊ ಇದೆ, ಆದರೆ ಇಪ್ಪತ್ನಾಲ್ಕು ಗಂಟೆಗಳ ವರೆಗೆ ಆ ರೂಪಾಯಿಗಳ ರಾಶಿಯ ಮೇಲೆಯೆ ಕುಳಿತುಕೊಂಡಿರಬೇಕೆಂಬ ವಿಷಯ ನನಗೆ ಸೇರುವುದಿಲ್ಲ; ಮೇಲಾಗಿ ಇದಕ್ಕೋಸ್ಕರ ಹೆಂಡತಿಯ ಸೌಭಾಗ್ಯವನ್ನು ಕಾಣುವ ಇಚ್ಛೆಯೂ ಕುತುಹಲವೂ ನನಗಿಲ್ಲ. ನನ್ನೀ ಮಾತುಗಳ ಪರಿಣಾಮವು ಆಕೆಯ ಮೇಲೆ ಆಗಲಿಲ್ಲ ಆಕೆಯನ್ನು ಮಾತಿನಲ್ಲಿ ಸೋಲಿಸುವುದು ನನ್ನಿಂದಾಗಲಿಲ್ಲ ಯಾವ ಹೆಂಗಸು ಹದಿಮೂರು ವರ್ಷಗಳಿಂದ ತನ್ನ ಬಳಿಯಲ್ಲಿ ಒಂದು ದಸ್ತಾವೀಜನ್ನು ಇಟ್ಟುಕೊಂಡು ಇಷ್ಟು ದೀರ್ಘ ಅವಧಿಯ ನಂತರ ಅದನ್ನು ನಮ್ಮ ಮುಂದೆ ಇಟ್ಟಳೊ ಆಕೆಯನ್ನು ಸಹಜವಾಗಿ ಸೋಲಿಸುವುದು ಆಗದ ಮಾತು ಆಕೆಯು ಬಾರಿ ಬಾರಿ ತನ್ನ ಮಗಳನ್ನು ಮಾತೃ ಋಣದ ರೂಪದಲ್ಲಾದರೂ ಗ್ರಹಿಸಬೇಕು ಮತ್ತು ಸಮರ್ಥವಾಗಿದ್ದರೂ ಮಾತೃ ಋಣವನ್ನು ತೀರಿಸಲಾರದ ಮಕ್ಕಳು—ಇತ್ಯಾದಿ, ಇತ್ಯಾದಿ ಮಾತುಗಳನ್ನು ಹೇಳತೊಡಗಿದಳು.

ಆಗ ನನಗೆ ಬಹಳ ಸಂದೇಹ ಬರತೊಡಗಿತು, ನನ್ನನ್ನು ಈ ಹೆಣ್ಣುಮಗಳು ಬಿಡುವ ಹಾಗೆ ಕಾಣುವುದಿಲ್ಲ ಎಂದು ತೋರತೊಡಗಿತು ಆಗ ಮಾತು ಮಾತಿನಲ್ಲಿ ಆ ಊರಲ್ಲಿ ಒಬ್ಬ ಯೋಗ್ಯ ವರನಿರುವ, ಐದು ನೂರು ರೂಪಾಯಿ ವರದಕ್ಷಿಣೆಯನ್ನು ಕೊಡದ ಹೊರತು ಅವನು ಸಿಗುವ ಸಂಭವವಿಲ್ಲ ಎಂಬುದು ತಿಳಿದು ಬಂದಿತು ಆಗ ಕ್ಷೀಣ ಆಶಾ ಕಿರಣವೊಂದು ಕಾಣಿಸಿತು ಒಂದು ತಿಂಗಳಲ್ಲಿ ಹೇಗಾದರೂ ಮಾಡಿ ರೂಪಾಯಿಗಳ ವ್ಯವಸ್ಥೆ ಮಾಡುವೆನೆಂದು ಹೇಳಿ ಮರುದಿನ ಮುಂಜಾನೆ ನಾನು ಹೊರಟುಬಿಟ್ಟೆ.

ಆದರೆ ಈ ರೂಪಾಯಿಗಳನ್ನು ಹೇಗೆ ಕೂಡಿಸಬೇಕೆಂಬುದು ನನಗೆ ತೋಚ ದಾಯಿತು.

ನನ್ನ ಮೇಲೆ ಹೇರಿದ ಈ ಹೊಣೆಗೆ ನಾನು ನಿಜವಾಗಿಯೂ ಹೊಣೆ ಗಾರನಿರುವುದಿಲ್ಲ ಎಂದು ಮನಕ್ಕೆ ತಿಳಿಸಿಕೊಳ್ಳತೊಡಗಿದೆ, ಆದಾಗ್ಯೂ ತಾಯಿಯ ಈ ಪ್ರತಿಜ್ಞಾ ಪಾಶದಿಂದ ಮುಕ್ತಿಯನ್ನು ಪಡೆಯಬೇಕೆಂಬ ವಿಚಾರವು ಇನಿತೂ ನನ್ನ ಮನದಲ್ಲಿ ಬರಲಿಲ್ಲ.

ಒಂದು ಉಪಾಯವಿತ್ತು—ಈ ವಿಷಯವನ್ನು ಪ್ಯಾರಿಗೆ ಹೇಳುವುದು. ಇದರ ಬಗ್ಗೆಯೂ ನಾನು ಯೋಚನೆ ಮಾಡಿದೆ. ಈ ವಿಷಯುವನ್ನು ಪ್ಯಾರಿಗೆ ಹೇಳುವುದು ಉಚಿತವೆ? ಎಂಬುದನ್ನು ಕುರಿತು ವಿಚಾರ ಮಾಡಿಯೆ ಮಾಡಿದೆನು. ಒಂದೂ ನಿರ್ಧಾರಕ್ಕೆ ಬರಲಿಲ್ಲ ಮೇಲಾಗಿ ಇತ್ತ 'ಬಹಳ ದಿನ ಗಳಿಂದ ಆಕೆಯ ಸುದ್ದಿಯೆ ಬರಲಿಲ್ಲ ನಾನು ಊರಿಗೆ ಬಂದು ಮುಟ್ಟಿದ ಬಗ್ಗೆ ಒಂದೇ ಕಾಗದವನ್ನು ಬರೆದಿದ್ದೆ, ಅದಕ್ಕೆ ಉತ್ತರವಾಗಿ ಆಕೆಯಿಂದಲೂ ಒಂದೇ ಕಾಗದವು ಬಂದಿತ್ತು ಪತ್ರಮುಖೇನ ಇರ್ವರಲ್ಲಿ ಮಿಲನದ ಒಂದು ಸೂತ್ರ ವಿರುವುದೆಂಬ ಮಾತನ್ನು ಬಹುಶಃ ಆಕೆಯು ಒಪ್ಪುತ್ತಿರಲಿಕ್ಕಿಲ್ಲ. ಆದಾಗ್ಯೂ ನಾನು ಒಂದು ದಿನ ಬೇರೊಬ್ಬರ ಹುಡುಗೆಯ ಸಲುವಾಗಿ ಭಿಕ್ಷೆಯನ್ನು ಬೇಡಲು ಪಾಟಣಾಕ್ಕೆ ಹೋದೆ; ಇದು ನಿಜವಾಗಿಯೂ ನನ್ನ ದೃಷ್ಟಿಯಿಂದ ಆಶ್ಚರ್ಯಕರವಾದುದು.

ಮನೆಯಲ್ಲ ಹೊಕ್ಕಕೂಡಲೆ ಒಳಂಗಳದಲ್ಲಿ ಕುಳಿತುಕೊಳ್ಳುವ ಕೋಣೆಯ ಬಳಿ ಇರ್ವರು ತಮ್ಮ ವಿಶಿಷ್ಟ ಪೋಷಾಕನ್ನು ಹಾಕಿಕೊಂಡು ಕುಳಿತಿರುವುದನ್ನು ಕಂಡೆ. ಒಮ್ಮಿಂದೊಮ್ಮೆಗೆ ಒರ್ವ ಅಪರಿಚಿತ ಮನುಷ್ಯನು ಹೀಗೆ ಅಂಗಳದಲ್ಲಿ ಬಂದುದನ್ನು ಕಂಡು ಅವರು ಒಂದು ವಿಚಿತ್ರನೋಟದಿಂದ ನನ್ನ ಕಡೆಗೆ ನೋಡತೊಡಗಿದರು. ಆಗ ನನಗೂ ಒಳಕ್ಕೆ ಹೋಗುವ ಸಾಹಸವಾಗಲಿಲ್ಲ ಪ್ಯಾರಿಯು ಆ ಮುದಿ ಆಳುಮಗನನ್ನು ಬಿಟ್ಟು ಈ ಇಬ್ಬರು ಆಳುಮಕ್ಕಳ ಅಗತ್ಯವೇನು ಪ್ಯಾರಿಗೆ ? ಎಂಬುದನ್ನು ನಾನು ಅರಿಯದಾದೆ. ಈ ಆಳುಮಕ್ಕಳನ್ನು ಬಿನ್ನವಿಸಿ ನಾನು ಒಳಗೆ ಹೋಗಬೇಕೊ, ಇವರ ಕಡೆಗೆ ಗಮನವೀಯದಲೆ ಒಳಗೆ ಹೋಗಿಬಿಡಬೇಕೋ ಎಂಬುದನ್ನು ನಿರ್ಧರಿಸದಾ ಗಿದ್ದೆ ಇಷ್ಟರಲ್ಲಿ ರತನ ಸ್ವಲ್ಪ ಸೆಡುವಿನಿಂದ ಕೆಳಗಿಳಿದು ಬರುತ್ತಿದ್ದ. ಅವನು

ಆಕಸ್ಮಾತ್ ನನ್ನನ್ನು ಕಂಡು ಅವಾಕ್ಕಾದ; ಬಳಿಕ ತಲೆಬಾಗಿಸಿ ನಮಸ್ಕರಿಸಿ "ತಾವು ಯಾವಾಗ ಬಂದಿರಿ? ಇಲ್ಲಿ ಹೀಗೇಕೆ ನಿಂತಿರುವಿರಿ?" ಎಂದ.

"ಇನ್ನೂ ಇದೇ ಈಗ. ಎಲ್ಲವೂ ಕುಶಲವೆ?"

ರತನ ತಲೆಯಲ್ಲಾಡಿಸುತ್ತ "ಎಲ್ಲವೂ ಕುಶಲ ಮೇಲಕ್ಕೆ ನಡೆಯಿರಿ ಬಾಬೂ—ನಾನು ಬರಫ ತೆಗೆದುಕೊಂಡು ಈಗ ಬರುವೆ" ಎಂದು ಹೊರಟ.

"ನಿಮ್ಮ ಯಜಮಾನಿ ಮೇಲಿರುವಳೇನು?"

"ಹೂಂ" ಎಂದು ಅವನು ಲಗುಬಗೆಯಿಂದ ಹೊರಟುಹೋದ.

ಮೇಲೆ ಹೋದ ಕೂಡಲೆ ಸಿಕ್ಕುವ ಕೋಣೆ ಕುಳಿತುಕೊಳ್ಳುವ ಕೋಣೆ ಒಳಗಿಂದ ಉಚ್ಚ ಸ್ವರದ ನಗುವಿನ ದನಿ ಮತ್ತು ಬಹಳ ಜನರ ಮಾತಿನ ದನಿಗಳು ಕೇಳಿ ಬಂದುವು. ನಾನು ಸ್ವಲ್ಪ ಅಚ್ಚರಿಗೊಂಡೆ ಮರುಕ್ಷಣ ಇನ್ನಿಷ್ಟು ಅಚ್ಚರಿಯು ಕೋಣೆಯ ಬಾಗಿಲ ಬಳಿಗೆ ಹೋದಾಗ ಆಯಿತು. ಮೊದಲ ಬಾರಿ ನಾನಿಲ್ಲಿಗೆ ಬಂದಾಗ ಈ ಕೋಣೆಯು ಉಪಯೋಗವಾಗುತ್ತಿಲ್ಲವೆಂದು ತಿಳಿದಿದ್ದೆ ಇದೇ ಕೋಣೆಯಲ್ಲಿ ಮೇಜು, ಕುರ್ಚಿ, ತರತರದ ಸಾಮಾನುಗಳು ರಾಶಿರಾಶಿಯಾಗಿ ಬಿದ್ದಿದ್ದುವು. ಈ ಕೋಣೆಗೆ ಆಗ ಯಾರೂ ಬರುತ್ತಿರಲಿಲ್ಲ ಈ ದಿನ ಕೋಣೆಯು ತುಂಬ ಹಾಸುಗೆಗಳಿವೆ ಕಾರ್ಪೆಟು ಹಾಸಿದೆ, ಮೇಲೆ ಬಿಳಿಯ ಬಟ್ಟೆ ಲಕಲಕ ಹೊಳೆಯುತ್ತಿದೆ, ದಿಂಬುಗಳು ಸುಂದರವಾಗಿ ಇಟ್ಟಿವೆ, ಅವುಗಳಿಗೆ ಆತುಕೊಂಡು ಕೆಲವರು ಸಭ್ಯಪುರುಷರು ಕುಳಿತಿರುವರು. ಅವರೆಲ್ಲರೂ ನನ್ನನ್ನು ಅಚ್ಚರಿಯಿಂದ ನೋಡುತ್ತಿರುವರು. ಅವರ ಪೋಷಾಕು ಬಂಗಾಲಿ ಜನರಂತೆ ಇದ್ದರೂ ತಲೆಯ ಮೇಲಿನ ಟೊಪ್ಪಿಗೆಯು ಅವರು ಬಿಹಾರಿಗಳೆಂದು ಹೇಳುತ್ತಿದ್ದಿತು. ತಬಲಗಳ ಬಳಿಯಲ್ಲಿ ಒಬ್ಬ ಹಿಂದುಸ್ತಾನೀ ತಬಲಚಿ ಇದ್ದ, ಅವನ ಹತ್ತಿರವೇ ಪ್ಯಾರೀ ಬಾಯಿಯೂ ಇದ್ದಳು ಒಂದು ಕಡೆಗೆ ಚಿಕ್ಕ ಹಾರ್ಮೋನಿಯಂ ಇದ್ದಿತು. ಪ್ಯಾರಿಯ ದೇಹದ ಮೇಲೆ ಸಂಗೀತ ಕಚೇರಿಯ ಉಡುಪು ಇಲ್ಲದಿದ್ದರೂ ಸಾಕಷ್ಟು ಶೃಂಗಾರದ ವಸ್ತುಗಳು ಆಕೆಯ ಮೈಮೇಲೆ ಇದ್ದುವು. ಸಂಗೀತ ಕಚೇರಿಯು ನಡೆದಿದೆ, ನಡುವೆ ವಿಶ್ರಾಂತಿಯು ಕೊಡಲ್ಪಟ್ಟಿದೆ ಎಂಬುದನ್ನು ಅರಿತೆ.

ನನ್ನನ್ನು ನೋಡುತ್ತಲೆ ಪ್ಯಾರಿಯ ಮುಖದ ಮೇಲಿನ ಕಾಂತಿಯು ಎಲ್ಲಿಗೊ ಹೋಗಿಬಿಟ್ಟಿತು. ಬಳಿಕ ಆಕೆಯು ಪ್ರಯತ್ನಪೂರ್ವಕವಾಗಿ ನಕ್ಕು "ಇದೇನು, ಶ್ರೀಕಾಂತ ಬಾಬುಗಳು! ಯಾವಾಗ ಬಂದಿರಿ?" ಎಂದಳು.

" ಈ ದಿನವೇ. "

" ಈ ದಿನವೇ? ಯಾವಾಗ? ಎಲ್ಲಿ ಇಳಿದುಕೊಂಡಿರುವಿರಿ?"

ಕ್ಷಣಮಾತ್ರ ನನಗೆ ಒಂದೂ ತಿಳಿಯದಾಯಿತು, ಇಲ್ಲದಿದ್ದರೆ ಉತ್ತರ ನೀಯಲು ತಡವಾಗುತ್ತಿರಲಿಲ್ಲ ನನ್ನನ್ನು ಸಂಬಾಳಿಸಿಕೊಳ್ಳಲು ಬಹಳ ವೇಳೆ ತಗಲಲಿಲ್ಲ. ನಾನೆಂದೆ:

" ಇಲ್ಲಿಯವರನ್ನೆಲ್ಲ ನೀನು ಗುರುತಿಸಲಾರೆ, ಹೆಸರು ಕೇಳಿಯೂ ಗುರುತಿಸಲಾರೆ '

ಈಗ ಇಲ್ಲಿ ಹೆಚ್ಚು ದರ್ಪದಿಂದ ಕುಳಿತವರು ಈ ಸಂಗೀತ ಯಜ್ಞದ ಯಜಮಾನರು ಅವರೆಂದರು "ಬನ್ನಿರಿ, ಕುಳಿತುಕೊಳ್ಳಿರಿ" ಬಳಿಕ ಅವರು ತಮ್ಮ ತುಟಿಗಳನ್ನು ಕಚ್ಚಿಕೊಂಡರು ಅವರು ತಮ್ಮ ಭಾವ-ಭಂಗಿಗಳಿಂದ ನಮ್ಮಿಬ್ಬರ ಸಂಬಂಧಗಳನ್ನು ತಾವು ಅರಿತಿರುವುವೆಂಬದನ್ನು ತೋರಿಸಿದರು. ಅವರಿಗೆ ಆದರದಿಂದ ನಮಸ್ಕರಿಸಿ ಊಟನ ದಾರಗನ್ನು ಬಿಚ್ಚುವುದಕ್ಕಾಗಿ ಬಾಗಿದೆ ಅಲ್ಲಿಯ ಪರಿಸ್ಥಿತಿಯನ್ನು ಪರೀಕ್ಷಿಸಬೇಕೆಂಬ ನೆವದಿಂದ ಹಾಗೆ ಮಾಡಿದೆ ವಿಚಾರಮಾಡಲು ಸಮಯವಿರಲಿಲ್ಲ ಹೃದಯದಲ್ಲಿ ಏನೇ ಇದ್ದರೂ ಅದನ್ನು ಈಗ ಹೊರಗೆ ತೋರಗೊಡಬಾರದು, ಪರಿಸ್ಥಿತಿಗೆ ತಕ್ಕಂತೆ ವ್ಯವಹರಿಸಬೇಕೆಂಬುದನ್ನು ನಿರ್ಧರಿಸಿದೆ ನನ್ನ ಬಾಯಿಂದ ಹೊರಬೀಳುವ ಮಾತಿನಿಂದ, ಕಣ್ಣಿನ ಕುಡಿನೋಟದಿಂದ, ನನ್ನ ಸಮಸ್ತ ನಡೆಯ ಇಸಿತಾದರೂ ಸಂದಿಯಿಂದ ಅಂತ:ಕರಣದೊಳಗಿನ ಕ್ಷೋಭೆ ಅಥವಾ ಅಭಿಮಾನವು ಹೊರಬೀಳಬಾರದೆಂಬ ಬಗ್ಗೆ ಯತ್ನಮಾಡಬೇಕೆಂದು ನಿಶ್ಚಯಿಸಿದೆ ಕ್ಷಣ ಹೊತ್ತಿನ ಬಳಿಕ ನಾನು ಅವರ ಮಧ್ಯದಲ್ಲಿ ಹೋಗಿ ಕುಳಿತೆ, ನನ್ನ ಮುಖ ಭಾವವನ್ನು ನಾನು ನೋಡಲು ಅಸಮರ್ಥನಾದೆನೆಂಬುದು ನಿಜವಾಗಿದ್ದರೂ ನನ್ನ ಮುಖದ ಮೇಲೆ ಪ್ರಸನ್ನತೆಯು ಈಗ ಇಲ್ಲವೆಂಬುದನ್ನು ನಾನು ಅಂತಃಕರುಣದಲ್ಲಿಯೆ ಅನುಭವಿಸಿದೆ. ರಾಜಲಕ್ಷ್ಮಿಯ ಕಡೆಗೆ ನೋಡಿ

ನಾನು ನಗುತ್ತ " ಬಾಯೀಜೀ, ಶುಕಮುನಿಗಳ ವಿಳಾಸ ಗೊತ್ತಿದ್ದರೆ ಈ ದಿನ ಅವರನ್ನು ಇಲ್ಲಿಗೆ ಕರೆತಂದು ನಿಮ್ಮ ಮುಂದೆ ಕುಳ್ಳಿರಿಸಿ ಒಂದು ಬಾರಿ ಅವರ ಮನದ ಶಕ್ತಿಯ ಪರೀಕ್ಷೆಯನ್ನು ಮಾಡಿಬಿಡುತ್ತಿದ್ದೆ! ಓಹೋ, ಇದನ್ನೇನು ಮಾಡಿರುವಿರಿ? ರೂಪದ ಸಮುದ್ರವನ್ನೇ ಹರಿಸಿರುವಿರಲ್ಲ!" ಎಂದೆ.

ಹೊಗಳಿಕೆಯನ್ನು ಕೇಳಿ ಈ ಸಂಗೀತ ಕಚೇರಿಯ ಯಜಮಾನರು ಆಹ್ಲಾದಿತರಾಗಿ ತಲೆಯಲ್ಲಾಡಿಸ ತೊಡಗಿದರು. ಅವರು ಪೂರ್ನಿಯಾ ಜಿಲ್ಲೆಯ ನಿವಾಸಿಗಳು, ಅವರಿಗೆ ಮಾತಾಡುವಷ್ಟು ಬಂಗಲಾ ಭಾಷೆಯು ಬರದಿದ್ದರೂ ಚೆನ್ನಾಗಿ ತಿಳಿದುಕೊಳ್ಳಬಲ್ಲರೆಂಬುದನ್ನು ನಾನು ಅರಿತುಕೊಂಡೆ. ಆದರ ಪ್ಯಾರಿಯು ಕಣ್ಣುಗಳೂ ಕಿಡಿಕಿಡಿಯಾದುವು, ನಾಚಿಕೆಯಿಂದಲ್ಲ, ಕೋಪ ದಿಂದ. ಇದನ್ನು ನಾನು ಅರಿತುಕೊಂಡೆ. ಆಕೆಯ ಕಡೆಗೆ ಕುಡಿಗಣ್ಣಿನಿಂದ ಕೂಡ ನೋಡದೆ ನಾನು ಆ ಯಜಮಾನರ ಕಡೆಗೆ ನೋಡುತ್ತ ನಗುತ್ತ "ನಾನು ಬಂದುದರಿಂದ ನಿಮ್ಮ ಆನಂದದಲ್ಲಿ ಸ್ವಲ್ಪಾದರೂ ವಿಘ್ನವಾದರೆ ನನಗೆ ಖೇದವಾಗುವುದು. ಹಾಡುವುದು ಬಾರಿಸುವುದು ಸಾಗಲಿ ಎಂದೆ.

ಯಜಮಾನರು ಪ್ರಸನ್ನವದನರಾಗಿ ಆವೇಶದಿಂದ ನನ್ನನ್ನು ಗುದ್ದಿ "ಬಹಳ ಒಳ್ಳೇದು ಬಾಬೂಜಿ. ಪ್ಯಾರೀ ಬೀಬಿ, ಒಂದು ಉತ್ತಮ ಹಾಡಾಗಲಿ' ಎಂದರು

"ಸಾಯಂಕಾಲವಾದ ಬಳಿಕ ಆಗಲಿ, ಈಗ ಇನ್ನು ಬೇಡ" ಎಂದು ಪ್ಯಾರಿಯು ಹಾರ್ಮೋನಿಯಂ ಸರಿಸಿ ಒಮ್ಮೆಗೆ ಎದ್ದುನಿಂತಳು.

ಇದೇ ವೇಳೆಗೆ ಯಜಮಾನರು ನನ್ನ ಪರಿಚಯ ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ತಮ್ಮ ಪರಿಚಯವನ್ನು ಮಾಡಿಕೊಡ ತೊಡಗಿದರು—ಅವರ ಹೆಸರು ರಾಮಚಂದ್ರಸಿಂಹ, ಪೂರ್ನಿಯಾ ಜಿಲ್ಲೆಯ ಜಮೀನುದಾರರು, ದರಭಂಗಾ ಮಹಾರಾಜರ ವಂಶದವರು. ಪ್ಯಾರೀಬಾಯಿಯ ಪರಿಚಯ ಎಂಟುವರ್ಷಗಳಿಂದ ತಮಗಿದೆ ಆಕೆಯು ಮೂರುನಾಲ್ಕು ಬಾರಿ ಅವರಲ್ಲಿಗೆ ಸಂಗೀತ ಕಚೇರಿಗಾಗಿ ಹೋಗಿರುವಳು ಆಕೆಯ ಸಂಗೀತವನ್ನು ಆಲಿಸಲು ಅವರೂ ಇಲ್ಲಿಗೆ ಅನೇಕ ಬಾರಿ ಬಂದಿರುವರು ಒಮ್ಮೊಮ್ಮೆ ಹತ್ತುಹನ್ನೆರಡು ದಿನಗಳ ವರೆಗೆ ಇಲ್ಲಿಯೇ ಉಳಿಯುವರು; ಈಗ ಮೂರು ತಿಂಗಳ ಹಿಂದೆ ಒಂದು ವಾರದ ವರೆಗೆ ಇಲ್ಲಿ ಇದ್ದರು. ಈ ರೀತಿ ತಮ್ಮ ಪರಿಚಯ ಮಾಡಿಕೊಟ್ಟ ಬಳಿಕ ನಾನು ಇಲ್ಲಿಗೆ ಏಕೆ ಬಂದಿರುವೆ ? ಎಂದು ಕೇಳಿದರು. ನಾನು ಉತ್ತರವೀಯುವ ಮೊದಲೇ ಪ್ಯಾರಿಯು ಅಲ್ಲಿಗೆ ಬಂದಳು ನಾನು ಆಕೆಯ ಕಡೆಗೆ ನೋಡಿ "ನಾನು ಇಲ್ಲಿಗೆ ಏಕೆ ಬಂದಿರುವೆನೆಂಬುದನ್ನು ಪ್ಯಾರೀ ಬಾಯಿಯನ್ನೇ ಕೇಳಿಬಿಡಿರಿ" ಎಂದೆ.

ಪ್ಯಾರಿಯು ನನ್ನ ಕಡೆಗೆ ಕೆಂಗಣ್ಣಿನಿಂದ ನೋಡಿ ಶಾಂತ ಹಾಗೂ ಸ್ವಾಭಾವಿಕ ಸ್ವರದಲ್ಲಿ ಉತ್ತರವಿತ್ತಳು "ಇವರು ನಮ್ಮ ದೇಶದವರು."

ನಾನು ನಕ್ಕು ಹೇಳಿದೆ "ಮಹಾಶಯರೆ, ಜೇನು ಇದ್ದಲ್ಲಿ ಜೋನ್ನೊಣಗಳು ಬಂದು ಸೇರುವುವು, ದೇಶವಿದೇಶದ ವಿಚಾರ ಮಾಡುವುದಿಲ್ಲ ಅವು." ಆದರೆ ಈ ಮಾತಿನ ಅರ್ಥವನ್ನು ಆ ಪೂರ್ನಿಯಾ ಜಿಲ್ಲೆಯ ಜಮೀನದಾರರು ಅರಿಯದೆ ಹೋದುದರಿಂದ ಮುಖವನ್ನು ಗಂಭೀರ ಮಾಡಿಕೊಂಡು ಕುಳಿತರು. ಪೂಜಾಪಾಠ, ಸಂಧ್ಯಾವಂದನೆಯ ಸಮಯವಾಗಿದೆಯೆಂದು ಅವರ ಆಳುಮಗನು ಬಂದು ಹೇಳುತ್ತಲೇ ಅವರು ಅಲ್ಲಿಂದ ಎದ್ದುಬಿಟ್ಟರು. ತಬಲಚಿ ಮತ್ತು ಇನ್ನಿಬ್ಬರು ಮಹಾಶಯರೂ ಅವರ ಕೂಡ ಹೊರಟರು. ಅವರ ಮನಸ್ಸು ಇಷ್ಟು ಬೇಗ ಅದೇಕೆ ವ್ಯಗ್ರವಾಯಿತೊ ಎಂಬುದನ್ನು ತಿಲ ಮಾತ್ರವಾದರೂ ನಾನು ಅರಿಯದಾದೆ

ರತನ ಬಂದು ಎಂದ "ಅಮ್ಮಾ, ಬಾಬೂಗಳ ಹಾಸಿಗೆಯನ್ನು ಎಲ್ಲಿ ಹಾಸಲಿ?"

ಪ್ಯಾರಿಯು ಸ್ವಲ್ಪ ಸಿಡಿಮಿಡಿಗೊಂಡು "ಮತ್ತಾವ ಕೋಣೆಗಳೂ ಇಲ್ಲವೇನು ರತನ? ನನ್ನ ಕೇಳದೆ ಕೆಲಸಮಾಡುವಷ್ಟು ಬುದ್ಧಿಯೂ ಇಲ್ಲವೇನು ನಿನಗೆ? ಹೋಗಿಲ್ಲಿಂದ" ಎಂದಳು. ಬಳಿಕ ಆಕೆಯೂ ರತನನ ಕೂಡ ಹೊರಗೆ ಹೋದಳು. ನಾನು ಅಕಸ್ಮಾತ್ ಬಂದುದರಿಂದ ಮನೆಯ ವ್ಯವಸ್ಥೆಯಲ್ಲಿ ಸ್ವಲ್ಪ ಅಲೆಯೆದ್ದಿದೆ. ಸ್ವಲ್ಪ ಹೊತ್ತಿನ ನಂತರ ಪ್ಯಾರಿಯು ಹಿಂತಿರುಗಿ ಬಂದು ನನ್ನ ಮುಖವನ್ನೇ ನೋಡುತ್ತ ನಿಂತಳು. ಬಳಿಕ "ಅಕಸ್ಮಾತ್ ಅದೇಕೆ ಬಂದಿರಿ?" ಎಂದಳು.

"ನಾನು ನಿಮ್ಮ ದೇಶದವ; ಬಹಳ ದಿನಗಳಿಂದ ನಿಮ್ಮನ್ನು ನೋಡಲಿಕ್ಕೆ ಆಗದ್ದರಿಂದ ವ್ಯಾಕುಲನಾಗಿ ಬಂದು ಬಿಟ್ಟೆ ಬಾಯಿಯವರೆ!"

ಪ್ಯಾರಿಯ ಮುಖವು ಇನ್ನಿಷ್ಟು ಕಂದಿತು. ನನ್ನ ತಮಾಷೆಗೆ ತಾನೂ ದನಿಗೂಡದೆ ಆಕೆಯು "ಈ ದಿನ ರಾತ್ರಿ ಇಲ್ಲಿಯೆ ಇರುವಿರಲ್ಲವೇ?" ಎಂದು ಕೇಳಿದಳು.

"ಇರಹೇಳಿದರೆ ಇರುವೆ."

"ನಾನು ಹೇಳಿದರೇನು, ಬಿಟ್ಟರೇನು! ಬಹುಶಃ ನಿಮಗೆ ಇಲ್ಲಿ ಅನುಕೂಲವಾಗಬಹುದು ನೀವು ಮಲಗುತ್ತಿದ್ದ ಕೋಣೆಯಲ್ಲಿ—"

"ಯಜಮಾನರು ಮಲಗುವರು? ಸರಿ! ನಾನು ಕೆಳಗೆ ಮಲಗುವೆ, ನಿನ್ನ ಕೆಳಗಿನ ಕೋಣೆ ಅತ್ಯುತ್ತಮವಾಗಿದೆಯಲ್ಲ?"

"ಕೆಳಗೆ ಮಲಗುವಿರಾ? ನೀವು ಇದನ್ನೇನು ಹೇಳುತ್ತಿರುವಿರಿ? ನಿಮ್ಮ ಮನದಲ್ಲಿ ಇನಿತೂ ಪಿಕಾರವಿಲ್ಲ—ಎರಡೇ ದಿನಗಳಲ್ಲಿ ಇಷ್ಟು ದೊಡ್ಡ ಪರಮಹಂಸರು ಹೇಗಾದಿರಿ?"

ನಾನು ಮನದಲ್ಲಿಯೆ ಎಂದುಕೊಂಡೆ 'ಪ್ಯಾರೀ ನೀನಿನ್ನೂ ನನ್ನನ್ನು ಸರಿಯಾಗಿ ತಿಳಿದಿಲ್ಲ' ಬಳಿಕ ನಾನು "ಇದರಲ್ಲಿ ನನಗೆ ಮಾನಾಪಮಾನದ ವಿಚಾರವೇನಿಲ್ಲೂ ಇಲ್ಲ. ನನಗೆ ಕಷ್ಟವಾಗುವುದೆಂದು ನೀನು ಬಗೆಯುವುದೂ ವ್ಯರ್ಥವೇ ನಾನು ಮನೆಯಿಂದ ಹೊರಡುವಾಗ ಊಟಉಡುಗೆಯ ಚಿಂತೆಯನ್ನು ದೂರ ಸರಿಸಿ ಬರುವೆನು ಇದು ನಿನಗೂ ಗೊತ್ತುಂಟು ಹಾಸುಗೆಗಳು ಹೆಚ್ಚು ಇದ್ದರೆ, ಒಂದನ್ನು ತರಲು ಹೇಳು ಇಲ್ಲದಿದ್ದರೆ ಅದೂ ಬೇಡ ನನಗೆ ನನ್ನ ಕಂಬಳಿಯೇ ಗತಿ" ಎಂದೆ

ಬಳಿಕ ಪ್ಯಾರಿಯು ತಲೆಯಲ್ಲಾಡಿಸಿ "ಅದು ನನಗೆ ಗೊತ್ತು ಇದರಿಂದ ನೀವು ಮನದಲ್ಲಿಯೇ ದುಃಖಪಡಲಿಕ್ಕಿಲ್ಲವೆ?" ಎಂದಳು

ನಾನು ನಕ್ಕು "ಇಲ್ಲ, ಏಕೆಂದರೆ ಸ್ಟೇಶನ್ನಿನಲ್ಲಿ ಬಿದ್ದುಕೊಂಡಿರುವುದಕ್ಕಿಂತ ಇಲ್ಲಿ ಮಲಗಿರುವುದು ಸಾವಿರಪಾಲು ಒಳ್ಳೆಯದು" ಎಂದೆ

ಪ್ಯಾರಿಯು ಸ್ವಲ್ಪ ಹೊತ್ತು ಸುಮ್ಮಗಿದ್ದು "ನಾನಾಗಿದ್ದರೆ ಗಿಡದ ಬುಡದಲ್ಲಾದರೂ ಮಲಗಿಬಿಡುತ್ತಿದ್ದೆ, ಇಷ್ಟು ಅಪಮಾನವನ್ನು ಸಹಿಸುತ್ತಿರಲಿಲ್ಲ" ಎಂದಳು

ಆಕೆಯ ಮಾತುಗಳನ್ನು ಕೇಳಿ, ಉತ್ತೇಜನವನ್ನು ಕಂಡು ನನಗೆ ನಗು ಬಂದಿತು ಆಕೆಯು ನನ್ನ ಬಾಯಿಂದ ಯಾವ ಮಾತುಗಳನ್ನು ಆಡಿಸಬೇಕೆನ್ನುತ್ತಿದ್ದಳೆಂಬುದನ್ನು ನಾನು ಚೆನ್ನಾಗಿ ತಿಳಿದಿದ್ದೆ ಆದರೆ ನಾನು ಶಾಂತ ಹಾಗೂ ಸ್ವಾಭಾವಿಕ ದನಿಯಿಂದ "ನೀನು ತಿಳಿದೂ ತಿಳಿದೂ ನನ್ನನ್ನು ಕೆಳಗಿನ ಕೋಣೆಗೆ ಕಳಿಸಿ ಅಪಮಾನಗೊಳಿಸುತ್ತಿರುವೆಯೆಂಬ ಮಾತನ್ನು ಮನದಲ್ಲಿ ಬರಗೊಡುವಷ್ಟು ಮೂರ್ಖನು ನಾನಿಲ್ಲ ಸಂಭವನೀಯವಿದ್ದಿದ್ದರೆ ಆಗ ಮಾಡಿದಂತೆಯೆ ಈಗಲೂ ನನ್ನ ಮಲಗುವ ವ್ಯವಸ್ಥೆಯನ್ನು ಮಾಡುತ್ತಿದ್ದೆ ಇರಲಿ ಬಿಡು, ಈ ಕೀಳು ನುಡಿಗಳನ್ನು ಎತ್ತಿಕೊಂಡು ವಾದಿಸುತ್ತ

ಹೋಗುವುದು ಒಳ್ಳೆಯದಲ್ಲ, ರತನನಿಗೆ ಕೆಳಗಿನ ಕೋಣೆಯನ್ನು ನನಗೆ ತೋರಿಸಲು ಹೇಳಿಬಿಡು ನಾನು ಕಂಬಳಿ ಹಾಸಿಕೊಂಡು ಮಲಗುವೆ. ನಾನು ಬಹಳ ದಣಿದಿರುವೆ" ಎಂದೆ

"ನೀವು ಜ್ಞಾನಿಗಳು, ನನ್ನ ಅವಸ್ಥೆಯನ್ನು ನೀವು ಸರಿಯಾಗಿ ತಿಳಿದು ಕೊಳ್ಳದಿದ್ದರೆ ಇನ್ನಾರು ತಿಳಿದುಕೊಳ್ಳುವರು? ಸರಿ, ಬದುಕಿಕೊಂಡೆ" ಎಂದು ಆಕೆಯು ಒಂದು ದೀರ್ಘವಾದ ಉಸಿರನ್ನು ಒಳಗೆಳೆದುಕೊಂಡು "ನೀವು ಅಕಸ್ಮಾತ್ ಬಂದುದರ ಕಾರಣವು ತಿಳಿಯಲಿಲ್ಲ ಏನು ಹೇಳಿರಿ?" ಎಂದಳು

"ಮೊದಲಿನ ಕಾರಣವನ್ನು ನಾನು ಹೇಳಲಾರೆ ಎರಡನೆಯ ಕಾರಣವನ್ನು ಹೇಳುವೆ"

"ಮೊದಲನೆಯದನ್ನು ಏಕೆ ಹೇಳುವುದಿಲ್ಲ?"

"ಅನಾವಶ್ಯಕ, ಆದುದರಿಂದ"

"ಒಳ್ಳೇದು, ಎರಡನೆಯದನ್ನೇ ಹೇಳಿರಿ."

"ನಾನು ಬರಮಾಕ್ಕೆ ಹೊರಟಿದ್ದೇನೆ ಇನ್ನು ಪುನಃ ಭೇಟಿಯಾಗಲಿಕ್ಕಿಲ್ಲ ಕನಿಷ್ಟಪಕ್ಷ ಬಹಳ ದಿನಗಳ ಮಟ್ಟಿಗಾದರೂ ನಮ್ಮಿಬ್ಬರ ಭೇಟಿಯಾಗದು ಹೋಗುವ ಮೊದಲು ಒಂದು ಬಾರಿ ನಿನ್ನನ್ನು ಕಾಣಲು ಬಂದಿರುವೆ"

ರತನ ಕೋಣೆಗೆ ಬಂದು "ಬಾಬೂಜೀ, ತಮ್ಮ ಹಾಸುಗೆ ಸಿದ್ಧವಾಗಿದೆ ಬನ್ನಿರಿ" ಎಂದು ಹೇಳಿದ

ನಾನು ಸಂತುಷ್ಟನಾಗಿ "ನಡೆ" ಎಂದೆ ಪ್ಯಾರಿಗೆ "ನನಗೆ ಬಹಳ ನಿದ್ರೆ ಬರುತ್ತಿದೆ ಒಂದು ಗಂಟೆಯ ಬಳಿಕ ಸಮಯ ಸಿಕ್ಕರೆ ಒಂದು ಬಾರಿ ಕೆಳಗೆ ಬಾ ನಾನು ಇನ್ನೂ ಬಹಳ ಮಾತಾಡಬೇಕಾಗಿದೆ" ಎಂದು ಹೇಳಿ ನಾನು ರತನನ ಸಂಗಡ ಹೊರಗೆ ಹೋದೆ.

ಪ್ಯಾರಿಯು ಮಲಗುವ ಕೋಣೆಗೆ ನನ್ನನ್ನು ಕರೆದುಕೊಂಡು ಹೋಗಿ ರತನ ಹಾಸುಗೆಯನ್ನು ನನಗೆ ತೋರಿಸಿದ ನನ್ನ ಅಚ್ಚರಿಗೆ ಎಲ್ಲೆಯೆ ಉಳಿಯದಂತಾಯಿತು. ನಾನೆಂದೆ "ನನ್ನ ಹಾಸುಗೆಯನ್ನು ಕೆಳಗಿನ ಕೋಣೆಯಲ್ಲಿ ಹಾಸದೆ ಇಲ್ಲೇಕೆ ಹಾಸಿದೆ?"

ರತನ ಆಶ್ಚರ್ಯದಿಂದ "ಕೆಳಗಿನ ಕೋಣೆಯಲ್ಲಿ?" ಎಂದ

"ಇದೇ ರೀತಿಯಾಗಬೇಕೆಂದು ಮಾತಾಡಿದ್ದೆವು."

ಸ್ವಲ್ಪ ಹೊತ್ತು ದಿಙ್ಮೂಢನಾಗಿ ನಿಂತು ನನ್ನನ್ನು ರತನ ನೋಡಿ ಬಳಿಕ ಅವನು "ನಿಮ್ಮ ಹಾಸಿಗೆ ಕೆಳಗಿನ ಕೋಣೆಯಲ್ಲಿ ಹಾಸಬೇಕೆ? ತಾ ತಮಾಷೆಮಾಡುತ್ತಿದ್ದೀರಿ!" ಎಂದು ನಗುತ್ತ ಹೋಗತೊಡಗಿದ. ನಾ ಅವನನ್ನು ಕರೆದು "ನಿನ್ನ ಯಜಮಾನಿ ಎಲ್ಲಿ ಮಲಗುವಳು?" ಎಂದ ಕೇಳಿದೆ.

"ಬಂಕೂ ಬಾಬೂಗಳ ಕೋಣೆಯಲ್ಲಿ ಅವರ ಹಾಸುಗೆ ಹಾ ಬಂದಿರುವೆ"

ನಾನು ಹಾಸುಗೆಯ ಬಳಿಗೆ ಹೋಗಿ ನೋಡಿದೆ—ಇದು ರಾಜಲಕ್ಷ್ಮಿಯು ಒಂದೂವರೆ ಮೊಳ ಅಗಲವಿದ್ದ ಮಂಚದ ಮೇಲೆ ಹಾಸಿದ ಹಾಸುಗೆಯಲ್ಲ. ಒಂದು ದೊಡ್ಡ ಮಂಚದ ಮೇಲೆ ಅರಸು ಮಕ್ಕಳ ಹಾಸುಗೆಯ ರೀತಿಯಲ್ಲಿ ದಪ್ಪಗಿನ ಗಾದಿಯನ್ನು ಹಾಸಲಾಗಿದೆ. ಕನ್ನಡಿಯ ಬಳಿಯಲ್ಲಿ ಒಂದು ಚಿಕ್ಕ ಮೇಜು ಇದೆ ಅದರ ಮೇಲೊಂದು ದೀಪವು ಉರಿಯುತ್ತಿದೆ. ಒಂದು ಕಡೆಗೆ ಬಂಗಲಾ ಭಾಷೆಯಲ್ಲಿ ಅನೇಕ ಪುಸ್ತಕಗಳಿವೆ, ಇನ್ನೊಂದು ಕಡೆಯಲ್ಲಿ ಪುಷ್ಪ ಪಾತ್ರೆಯಲ್ಲಿ ಹೂಗೊಂಚಲೊಂದು ಇಟ್ಟಿದೆ. ಇವುಗಳಲ್ಲಿ ಒಂದೂ ಆಳು ಮಕ್ಕಳಿಂದ ಇರಿಸಲ್ಪಟ್ಟಿಲ್ಲವೆಂದು ತೋರಿತು ಇಲ್ಲಿಯ ವಸ್ತುಗಳೂ ಇವನ್ನು ಅತ್ಯಂತ ಪ್ರೀತಿಸುವವಳಿಂದ ತಯಾರಿಸಲ್ಪಟ್ಟಿವೆ. ಹಾಸುಗೆಯ ಮೇಲಿನ ಹೊದಿಕೆಯನ್ನೂ ಸ್ವತಃ ರಾಜಲಕ್ಷ್ಮಿಯೇ ಹಾಸಿ ಹೋಗಿರುವಳೆಂಬುದನ್ನು ನಾನು ಮನದಲ್ಲಿಯೇ ಅನುಭವಿಸಿದೆ.

ಈ ದಿನ ಆ ಜನರ ಎದುರಿಗೆ ನಾನು ಅಕಸ್ಮಾತ್ ಬಂದು ನಿಂತುದರಿಂದ ರಾಜಲಕ್ಷ್ಮಿಯು ತೋಚದವಳಾಗಿ ನನ್ನೊಡನೆ ಈ ಮೊದಲು ವಿಚಿತ್ರ ರೀತಿಯಲ್ಲಿ ವ್ಯವಹಾರ ಮಾಡಿದ್ದರೂ ನನ್ನ ನಿರ್ವಿಕಾರ ಉದಾಸೀನತೆಯಿಂದ ಆಕೆಯು ಮನದಲ್ಲಿಯೇ ಮಿಡುಕುತ್ತಿದ್ದಳೆಂಬ ಮಾತು ನನಗೆ ತಿಳಿಯದಿರಲಿಲ್ಲ ನನ್ನಲ್ಲಿ ಹೊಟ್ಟೆಕಿಚ್ಚಿನ ಪ್ರಕಾಶವನ್ನು ನೋಡಲು ಉತ್ಸುಕಳಾಗಿ ಆಕೆಯು ಇಷ್ಟು ಹೊತ್ತಿನ ವರೆಗೆ ಇಷ್ಟು ರೀತಿಯಿಂದ ಮಾತಿನ ಏಟುಗಳನ್ನು ಏಕೆ ಕೊಡುತಿದ್ದಳೆಂಬುದರ ಕಾರಣವೂ ನನಗೆ ಗೊತ್ತಾಗಿದ್ದಿತು ಆದರೆ ಇದೆಲ್ಲವನ್ನು ನಾನು ಬಲ್ಲಿದವನಾಗಿದ್ದರೂ ನನ್ನ ಈ ನಿಷ್ಠುರ ಸ್ವಭಾವವೇ ಗಂಡುಸುತನವೆಂದು ತಿಳಿದು, ನಾನು ಆಕೆಯ ಮರ್ಯಾದೆಯನ್ನು ಉಳಿಸ

ಲಿಲ್ಲ ಆಕೆಯ ಪ್ರತಿಯೊಂದು ಮಾತಿನ ಏಟನ್ನೂ ನೂರ್ಮಡಿಮಾಡಿ ತಿರುಗಿ ಕೊಟ್ಟೆ. ಆಕೆಯ ಪ್ರತಿಯಾಗಿ ನಾನು ಮಾಡಿದ ಆ ಅನ್ಯಾಯವು ಈಗ ನನ್ನನ್ನು ಸೂಜಿಯಂತೆ ಚುಚ್ಚತೊಡಗಿತು ನಾನು ಹಾಸುಗೆಯ ಮೇಲೆ ಮಲಗಿದೆ, ಆದರೆ ನಿದ್ರೆ ಬರಲಿಲ್ಲ ಆಕೆಯು ನಿಶ್ಚಯವಾಗಿಯೂ ಒಂದು ಬಾರಿ ಬರುವ ಳೆಂದು ಅರಿತಿದ್ದೆ ಆದುದರಿಂದ ಅತ್ಯಂತ ಉತ್ಸುಕನಾಗಿ ಆಕೆಯು ಬರುವ ದಾರಿಯನ್ನು ಕಾಯತೊಡಗಿದೆ

ದಣಿವಿನಿಂದ ಸ್ವಲ್ಪ ನನಗೆ ನಿದ್ರೆ ಹತ್ತಿರಬಹುದು. ಕೂಡಲೆ ನನಗೆ ಎಚ್ಚರವಾಯಿತು ಕಣ್ದೆರೆದು ನೋಡಿದೆ ಪ್ಯಾರಿಯು ನನ್ನ ಶರೀರದ ಮೇಲೆ ಕೈಯಿಟ್ಟು ಕುಳಿತಿದ್ದಳು ನಾನು ಎದ್ದು ಕುಳಿತುಕೊಂಡೆ. ಆಕ ಯೆಂದಳು "ಬರಮಾಕ್ಕೆ ಹೋದ ಮನುಷ್ಯನು ಹಿಂತಿರುಗಿ ಬರುವದಿಲ್ಲ ಎಂಬುದು ನಿಮಗೆ ಗೊತ್ತಿದೆಯೆ?"

"ಇಲ್ಲ, ನನಗೆ ಗೊತ್ತಿಲ್ಲ "

"ಹಾಗಾದರೆ?"

"ನಾನು ಹಿಂತಿರುಗಿ ಬಂದೇ ತೀರಬೇಕೆಂದು ನನಗೆ ಯಾರೂ ಆಣೆ ಯನ್ನಿಟ್ಟಿಲ್ಲವಲ್ಲ?"

"ಇಟ್ಟಿಲ್ಲವೆ? ಪೃಥ್ವಿಯ ಮೇಲಿರುವ ಜನರೆಲ್ಲರ ಮನದೊಳಗಿನ ಮಾತನ್ನು ಅರಿತಿರುವಿರೇನು?"

ಮಾತು ತೀರ ಸಾಮಾನ್ಯವಾದುದು ಆದರೆ ಈ ಪ್ರಪಂಚದಲ್ಲಿ ಒಂದು ಬಹು ದೊಡ್ಡ ಆಶ್ಚರ್ಯದ ಮಾತಿರುವುದು ಅದಾವುದೆಂದರೆ ಮಾನವನ ದುರ್ಬಲತೆ ಅದು ಯಾವಾಗ ಯಾವ ಕಿಂಡಿಯಿಂದ ಹೊರಬಿದ್ದೀತೆಂಬು ದನ್ನು ಹೇಳಲಿಕ್ಕಾಗುವುದಿಲ್ಲ ಇದಕ್ಕೂ ಮೊದಲು ಇನ್ನೂ ಎಷ್ಟೊ ಈ ಬಗೆಯ ಸನ್ನಿವೇಶಗಳು ಒದಗಿವೆ ಆದರೆ ಈ ಬಾರಿಯಂತೆ ನಾನೆಂದಿಗೂ ಅವುಗಳಲ್ಲಿ ಸಿಕ್ಕಿಲ್ಲ ಆದರೆ ಆಕೆಯ ಬಾಯಿಂದ ಇಷ್ಟು ಸಾಧಾರಣವಾಗಿ ಬಂದ ಮಾತನ್ನು ನಾನು ಸಹಿಸಲಾರದವನಾದೆ. ನನ್ನ ಬಾಯಿಂದ ಒಮ್ಮೆಗೆ ಮಾತು ಹೊರಬಿದ್ದಿತು "ಎಲ್ಲರ ಮನದೊಳಗಿನ ಮಾತನ್ನು ಅರಿಯೆ ರಾಜಲಕ್ಷ್ಮೀ, ಆದರೆ ಪ್ರಪಂಚದಲ್ಲಿ ಒಬ್ಬರಿದ್ದಾರೆ ಅವರ ಮನದ ಮಾತನ್ನು ಬಲ್ಲೆ. ಎಂದಾದರೂ ನಾನು ತಿರುಗಿ ಬಂದರೆ ನಿನಗಾಗಿಯೇ ಬರುವೆ.

ನೀನಿಟ್ಟುಕೊಂಡ ಆಣೆಯ ಅಪಮಾನವನ್ನು ಎಂದಿಗೂ ಮಾಡಲ
ರಾಜಲಕ್ಷ್ಮೀ"

ಪ್ಯಾರಿಯು ಒಮ್ಮೆಗೆ ನನ್ನ ಪಾದಗಳ ಮೇಲೆ ಬಿದ್ದಳು. ನಾನು ನ ಪಾದಗಳನ್ನು ಇಚ್ಛೆಯಾದರೂ ಹಿಂತಿರುಗಿ ತೆಗೆದುಕೊಳ್ಳಲಿಲ್ಲ. ಹತ್ತು ಹ ನೈದು ನಿಮಿಷಗಳು ಕಳೆದರೂ ಆಕೆಯು ತನ್ನ ತಲೆಯನ್ನು ಮೇಲಕ್ಕೆತ್ತಲಿ ನಾನು ಮೆಲ್ಲಗೆ ಆಕೆಯ ತಲೆಯ ಮೇಲೆ ಕೈಯಿಟ್ಟೆ. ಆಕೆಯು ಒಂದು ಬಾ ನಡುಗಿದಳು. ಆದರೂ ಹಾಗೆಯೆ ತಲೆಯಿಟ್ಟುಕೊಂಡು ಬಿದ್ದಿದ್ದಳು, ತ ಯನ್ನು ಮೇಲಕ್ಕೆತ್ತಲಿಲ್ಲ ಮಾತನಾಡಲಿಲ್ಲ ಆಗ ನಾನೆಂದೆ "ಎದ ಕುಳಿತುಕೊ ಈ ಸ್ಥಿತಿಯಲ್ಲಿ ನಮ್ಮನ್ನು ಯಾರಾದರೂ ಕಂಡರೆ ಅವರಿ ಆಶ್ಚರ್ಯವಾದೀತು"

ಪ್ಯಾರಿಯು ಉತ್ತರವನ್ನೇ ಕೊಡಲಿಲ್ಲ ನಾನು ಆ ಮೇಲೆ ಆಕೆಯನ್ನ ಕಸುವಿನಿಂದ ಎತ್ತಿ ಎಬ್ಬಿಸಿ ಕುಳ್ಳಿರಿಸಿದೆ. ಆಗ ನನ್ನ ಚಾದರವೆಲ್ಲ ಆಕೆಯ ಕಂಬನಿಗಳಿಂದ ತೊಯ್ದು ತಪ್ಪಡಿಯಾಗಿರುವುದೆಂಬದನ್ನು ಕಂಡೆ ಆ ಯನ್ನು ಜಗ್ಗಿ ಎಳೆದಾಡಿ ಕೂಡಿಸುತ್ತಿರುವಾಗ ಸ್ವಲ್ಪ ಕೋಪಗೊಂಡ "ಮೊದಲು ನನ್ನ ಎರಡು ಮೂರು ಮಾತಿಗೆ ಉತ್ತರ ಕೊಟ್ಟರೆ ಏಳುವೆನು ಎಂದಳು.

"ಹೇಳು, ಏನವು?"

"ಅವರು ಇಲ್ಲಿ ಇರುವುದರಿಂದ ನಿಮಗೆ ತಪ್ಪು ಕಲ್ಪನೆಯಾಗಿಲ್ಲವೆ ನನ ಬಗೆಗೆ?"

"ಇಲ್ಲ"

ಪ್ಯಾರಿಯು ಇನ್ನೂ ಸ್ವಲ್ಪ ಹೊತ್ತು ಸುಮ್ಮಗಿದ್ದು "ಆದರೆ, ನಾನ ಒಳ್ಳೆಯ ಹೆಂಗಸಲ್ಲ ಎಂಬುದು ನಿಮಗೆ ಗೊತ್ತೆ? ಗೊತ್ತಿದ್ದರೂ ನೀವು ಏ ಸಂದೇಹ ಪಡುವುದಿಲ್ಲ?' ಎಂದು ಕೇಳಿದಳು.

ಪ್ರಶ್ನೆಯು ಬಹಳ ಬಿಗಿಯಾಗಿತ್ತು ಆಕೆಯು ಒಳ್ಳೆಯ ಹೆಂಗಸ ಎಂಬುದನ್ನು ನಾನು ಚೆನ್ನಾಗಿ ಬಲ್ಲೆ ಆದಾಗ್ಯೂ ಆಕೆಯು ಒಳ್ಳೆಯವಳೆ ಕೆಟ್ಟವಳೊ ಎಂಬ ವಿಚಾರವನ್ನು ನಾನು ಮಾಡಲಾರೆ, ಮಾಡದಾ ಸುಮ್ಮಗಿದ್ದೆ.

ಆಕೆಯು ಒಮ್ಮೆಗೆ ಎದ್ದು ಕುಳಿತು ಕಂಬನಿಗಳನ್ನು ಒರೆಸಿಕೊಂಡು "ಒಳ್ಳೇದು, ಗಂಡುಸು ಎಷ್ಟೇ ಕೆಟ್ಟಿದ್ದರೂ ಅವನು ಒಳ್ಳೇಯವನಾಗಲು ಬಯಸಿದರೆ ಅವನಿಗೆ ಹಾಗೆ ಆಗಲು ಮಾರ್ಗವಿದೆ ನಾವೂ ಹಾಗೇ ಮಾಡ ಬೇಕೆಂದು ಎನಿಸಿದರೆ ನಮಗೆ ಯಾವ ಮಾರ್ಗವೂ ಇಲ್ಲ ಏಕೆ? ಅಜ್ಞಾನ ದಿಂದ, ಧನಾಭಾವದಿಂದ ನಾನು ಮಾಡಿದ ಒಂದು ಕರ್ಮದ ಫಲವನ್ನು ಏಕೆ ಅನುಭವಿಸುತ್ತ ಇರಬೇಕು? ಒಳ್ಳೆಯವರಾಗಲು ನೀವು ನಮಗೇಕೆ ಮಾರ್ಗ ವನ್ನು, ಅನುವನ್ನು ಕೊಡುವುದಿಲ್ಲ?" ಎಂದು ಕೇಳಿದಳು

"ನಾವು ಎಂದೂ ನಿಮ್ಮನ್ನು ತಡೆಯುವುದಿಲ್ಲ, ನಿಮ್ಮ ಮಾರ್ಗದಲ್ಲಿ ಅಡ್ಡಿ ಮಾಡಿಲ್ಲ ನಾವು ಒಂದು ವೇಳೆ ತಡೆದರೂ ಪ್ರಪಂಚದಲ್ಲಿ ಸನ್ಮಾರ್ಗಕ್ಕೆ ಹತ್ತಬೇಕೆನ್ನುವುದನ್ನು ಯಾರೂ ಎಂದಿಗೂ ಬಂಧಿಸಿ ಇಡಲಾರರು"

ಪ್ಯಾರಿಯು ಬಹಳ ಹೊತ್ತು ನನ್ನ ಮುಖದ ಕಡೆಗೆ ನೋಡುತ್ತ ಕೊನೆಗೆ ಮೆಲ್ಲ ಮೆಲ್ಲಗೆ ನುಡಿದಳು "ಬಹಳ ಒಳ್ಳೇದು ಹಾಗಾದರೆ, ನೀವು ನನ್ನನ್ನು ತಡೆಯಲಾರಿರಾ?"

ನಾನು ಉತ್ತರವೀಯುವ ಮೊದಲೇ ರತನನು ಕೆಮ್ಮುವುದು ಕೇಳಿ ಬಂದಿತು

ಪ್ಯಾರಿಯು ಕೂಗಿ "ಏನೋ ರತನ?" ಎಂದು ಕೇಳಿದಳು.

ರತನ ತನ್ನ ಮುಖವನ್ನು ಮುನ್ನೀಡಿ "ರಾತ್ರಿ ಬಹಳವಾಗಿದೆ — ಬಾಬೂಜೀಯವರಿಗೆ ಊಟ ತೆಗೆದುಕೊಂಡು ಬರಲೆ? ಅಡುಗೆಯವ ಅಡುಗೆ ಮನೆಯಲ್ಲೇ ಮಲಗಿಬಿಟ್ಟಿರುವ" ಎಂದ.

"ನೀವಾರೂ ಊಟಮಾಡಿಲ್ಲವೇನೊ!" ಎಂದು ಪ್ಯಾರಿಯು ಗಡ ಬಡಿಸಿಕೊಂಡು ನಾಚಿಕೆಪಟ್ಟು ಎದ್ದಳು ಆಕೆಯು ನನ್ನ ಊಟವನ್ನು ಯಾವಾಗಲೂ ತಾನೇ ತರುತ್ತಿದ್ದಳು, ಈ ದಿನವೂ ತರಲು ಲಗುಬಗೆಯಿಂದ ಹೊರಟು ಹೋದಳು

ಊಟವಾದ ನಂತರ ನಾನು ಹಾಸುಗೆಯ ಮೇಲೆ ಮಲಗಿದಾಗ ರಾತ್ರಿ ಒಂದು ಬಾರಿಸಿತ್ತು ಪ್ಯಾರಿಯು ಪುನಃ ಬಂದು ನನ್ನ ಕಾಲಬಳಿ ಕುಳಿತಳು. ಆಕೆಯು "ನಿಮಗಾಗಿ ಅನೇಕ ರಾತ್ರಿಗಳನ್ನು ಎಚ್ಚೆತ್ತು ಕಳೆದಿರುವೆ ಈದಿನ ನಿಮ್ಮನ್ನು ನಾನು ನಿದ್ರಿಸಗೊಡುವುದಿಲ್ಲ" ಎಂದು ಆಕೆಯು ನನ್ನ ಕಾಲ

ಬಳಿಯ ದಿಂಬೊಂದನ್ನು ಎಳೆದುಕೊಂಡು ಎಡಗೈ ಮೇಲೆ ಒರಗಿಕೊಂಡು ಮಾತನಾಡತೊಡಗಿದಳು "ನೀವು ಇಷ್ಟು ದೂರ ದೇಶಕ್ಕೆ ಹೋಗುವುದು ಎಳ್ಳಷ್ಟೂ ಒಳಿತಲ್ಲ ಎಂದು ನನಗೆನಿಸುವುದು. ನಾನು ಇದನ್ನು ಕುರಿತು ಬಹಳ ವಿಚಾರ ಮಾಡಿದೆ ಕೊನೆಗೆ ಈ ನಿಷ್ಕರ್ಷೆಗೆ ಬಂದೆ"

"ಹಾಗಾದರೆ, ನಾನು ಅಲ್ಲಿ ಇಲ್ಲಿ ಹೀಗೆಯೇ ಅಲೆದಾಡುತ್ತಿರಲೇನು ?"

ಇದಕ್ಕೆ ಉತ್ತರವೀಯದೆ ಆಕೆಯು ಕೇಳಿದಳು "ಬರಮಾಕ್ಕೆ ನೀವು ಹೋಗುವುದಾದರೂ ಏತಕ್ಕಾಗಿ ?"

"ನೌಕರಿ ಮಾಡುವುದಕ್ಕೆ. ಅಲ್ಲಿ ಇಲ್ಲಿ ತಿರುಗುವುದಕ್ಕಲ್ಲ"

ನನ್ನ ಮಾತು ಕೇಳಿ ಪ್ಯಾರಿಯು ಉತ್ತೇಜಿತಳಾಗಿ ಎದ್ದು ಕುಳಿತು 'ನೀವು ಬೇರೆಯವರಿಗೆ ಬೇಕಾದುದನ್ನು ಹೇಳಿರಿ,ಆದರೆ ನನಗೆ ಹೀಗೆ ಹೇಳಿ ಮೋಸಮಾಡಲಾರಿರಿ ; ಮೋಸಮಾಡಬೇಡಿರಿ ನನಗೆ ಮೋಸಮಾಡಿದರೆ ನಿಮಗೆ ಇಹದಲ್ಲಿಯೂ ಪರದಲ್ಲಿಯೂ ಒಳ್ಳೆಯದಾಗಲಿಕ್ಕಿಲ್ಲ, ಎಂಬುದನ್ನು ನೀವು ಬಲ್ಲಿರಾ ?"

"ಚೆನ್ನಾಗಿ ಬಲ್ಲೆ ಈಗೇನು ಮಾಡಬೇಕು ನೀನೇ ಹೇಳು!"

ನನ್ನ ಉತ್ತರದಿಂದ ಪ್ಯಾರಿಗೆ ಸಂತೋಷವಾಯಿತು ನಕ್ಕು ಆಕೆಯು ಅಂದಳು "ಹಿಂಗಸರು ಚಿರಕಾಲದಿಂದ ಯಾವುದನ್ನು ಹೇಳುತ್ತ ಬಂದಿರುವರೊ ಅದನ್ನೇ ಹೇಳುವೆನು. ಮದುವೆ ಮಾಡಿಕೊಂಡು ಸಂಸಾರಿಗಳಾಗಿರಿ. ಗೃಹಸ್ಥ-ಧರ್ಮವನ್ನು ಪಾಲಿಸಿರಿ."

"ಅದರಿಂದ ನನಗೆ ನಿಜವಾಗಿಯೂ ಸುಖ ದೊರೆಯುವುದೆ ?"

ಆಕೆಯು ತಲೆಯಲ್ಲಾಡಿಸಿ ಲೋಲಕಗಳ ಬೆಳಕನ್ನು ಬೀರುತ್ತ ಉತ್ಸಾಹದಿಂದ "ನಿಶ್ಚಯವಾಗಿ. ನೂರಾರು ಬಾರಿ, ಸಾವಿರಾರು ಬಾರಿ ಹೇಳುವೆ ಇದರಿಂದ ನಾನು ಸುಖಿಯಾಗದಿದ್ದರೆ ಮತ್ತಾರು ಆಗುವರು ಹೇಳಿರಿ ?"ಎಂದಳು.

"ಅದು ನನಗೆ ಗೊತ್ತಿಲ್ಲ ಇದರಿಂದ ನನ್ನ ಮನದೊಳಗಿನ ಒಂದು ಸಂಭಾವನೆಯು ಹೊರಟು ಹೋಯಿತು. ನಿಜವಾಗಿಯೂ ನಾನು ಇದನ್ನೇ ಹೇಳಲು ಬಂದಿದ್ದೆ—ಇನ್ನು ನಾನು ಮದುವೆಮಾಡಿಕೊಳ್ಳದಿದ್ದರೆ ಕೆಲಸ—ಜೀವನ ಸಾಗುವಂತಿಲ್ಲ."

ಪುನಃ ಪ್ಯಾರಿಯು ತನ್ನ ಕರ್ಣಕುಂಡಲಗಳನ್ನು ಅಲುಗಾಡಿಸಿ ಅತ್ಯಂತ ಆನಂದದಿಂದ "ಹೀಗಾದರೆ ನಾನು ಕಾಲಿಘಾಟಕ್ಕೆ ಹೋಗಿ ಕಾಳಿಯ ಪೂಜೆ ಮಾಡಿ ಬರುವೆ. ಆದರೆ, ಹುಡುಗಿಯನ್ನು ಆರಿಸಿಕೊಡುವಾಕೆ ನಾನು,. ಈಗಲೇ ಹೇಳಿಬಿಡುತ್ತೇನೆ ಅಂ!" ಎಂಡಳು.

"ಅದಕ್ಕೆ ವೇಳೆಯಿಲ್ಲ. ಹುಡುಗಿಯನ್ನು ನಿಶ್ಚಯಿಸಲಾಗಿದೆ"

ನನ್ನ ಗಂಭೀರ ದನಿಯನ್ನು ಪ್ಯಾರಿಯು ಗುರುತಿಸಿದಳು ಆಕೆಯ ನಗುಮೊಗದ ಮೇಲೆ ಕಾರ್ಮೋಡಗಳ ನೆರಳು ಬಿದ್ದಿತು ಆಕೆಯು ಎಂದಳು "ಸರಿ, ಒಳ್ಳೇಯದೇ ಆಯಿತು! ನಿಶ್ಚಯವಾಗಿದ್ದರೆ, ಅತ್ಯಂತ ಸುಖದಾಯಕ ಸಂಗತಿ-ಸಮಾಚಾರವೇ ಸರಿ!"

"ಸುಖ-ದುಃಖ ನನಗೆ ತಿಳಿಯುವುದಿಲ್ಲ ರಾಜಲಕ್ಷ್ಮೀ, ನಿಶ್ಚಯವಾದ ಸಂಗತಿಯನ್ನೇ ನಾನು ನಿನಗೆ ಹೇಳುವೆ"

ಪ್ಯಾರಿಯು ಒಮ್ಮೆಲೇ ಕೋಪಗೊಂಡು "ಹೋಗಿ, ಜಾಣತನ ತೋರಿಸಬೇಡಿರಿ ಎಲ್ಲವೂ ಸುಳ್ಳು" ಎಂದಳು

"ಒಂದೂ ಮಾತು ಸುಳ್ಳಿಲ್ಲ ಪತ್ರವನ್ನು ನೋಡಿದರೆ ತಿಳಿಯುವುದು" ಎಂದು ನಾನು ಜೇಬಿನೊಳಗಿಂದ ಎರಡು ಪತ್ರಗಳನ್ನು ಹೊರಗೆ ತೆಗೆದೆ.

"ಎಲ್ಲಿವೆ ಪತ್ರ ನೋಡೋಣ' ಎಂದು ಪ್ಯಾರಿಯು ಕೈಯನ್ನು ಮುನ್ನೀಡಿ ಎರಡೂ ಪತ್ರಗಳನ್ನು ಕೈಯಲ್ಲಿ ತೆಗೆದುಕೊಂಡಳು. ಅವನ್ನು ಕೈಯಲ್ಲಿ ತೆಗೆದುಕೊಳ್ಳುತ್ತಲೇ ಮುಖವು ಕಪ್ಪಾಗಿಹೋಯಿತು! ಅವನ್ನು ಕೈಯಲ್ಲಿ ತೆಗೆದುಕೊಂಡಾಗ್ಯೂ ಅವನ್ನು ಓದುವ ಇಚ್ಛೆ ಆಕೆಗೆ ಆಗಲಿಲ್ಲ ಆಕೆ ಎಂದಳು "ಪರರ ಪತ್ರವನ್ನು ಓದುವ ಅಗತ್ಯವಿಲ್ಲ ನನಗೆ! ಅದೆಲ್ಲ ನಿಶ್ಚಯವಾಗಿದೆ?"

"ಓದಿ ನೋಡು"

"ನಾನು ಬೇರೆಯವರ ಪತ್ರ ಓದುವುದಿಲ್ಲ"

"ಹಾಗಾದರೆ ಬೇರೊಬ್ಬರ ಸಮಾಚಾರವನ್ನು ನೀನು ತಿಳಿದುಕೊಳ್ಳಬೇಕಾಗಿಲ್ಲ!"

"ನಾನು ತಿಳಿಯಬಯಸುವುದಿಲ್ಲ" ಎಂದು ಆಕೆಯು ಕಣ್ಣು ಮುಚ್ಚಿಕೊಂಡು ಮಲಗಿದಳು. ಆದರೆ ಎರಡೂ ಪತ್ರಗಳು ಆಕೆಯ ಕೈಯಲ್ಲಿಯೇ

ಉಳಿದುವು. ಬಹಳ ಹೊತ್ತಿನ ವರೆಗೆ ಆಕೆಯು ಹಾಗೇ ಮಲಗಿದ್ದಳು. ಒಂದು ಮಾತನ್ನೂ ಆಡಲಿಲ್ಲ. ಬಳಿಕ ಎದ್ದು ಮೇಜಿನ ಮೇಲೆ ಅವೆರಡನ್ನೂ ಇಟ್ಟು ದೀಪವನ್ನು ಏರಿಸಿ ಸುಮ್ಮನೆ ಕುಳಿತಳು. ಆಮೇಲೆ ಅವುಗಳಲ್ಲಿ ಬರೆದುದನ್ನು ಬಹುಶಃ ಆಕೆಯು ಒಂದೆರಡು ಬಾರಿ ಓದಿರಬಹುದು. ಪುನಃ ಹಾಸಿಗೆಯ ಮೇಲೆ ಬಂದು ಮಲಗಿದಳು. ಬಹಳ ಹೊತ್ತು ಸುಮ್ಮಗಿದ್ದು "ನಿದ್ರೆ ಬಂದಿತೇನು ? ಮಲಗಿದಿರಾ ?" ಎಂದಳು ನಾನು "ಇಲ್ಲ" ಎಂದೆ.

"ಈ ಹುಡುಗೆಯೊಡನೆ ಮದುವೆ ಮಾಡಗೊಡುವುದಿಲ್ಲ ನಾನು ಈ ಹುಡುಗೆ ಚೆನ್ನಾಗಿಲ್ಲ, ಆಕೆಯನ್ನು ನಾನು ಚಿಕ್ಕಂದಿನಲ್ಲಿ ನೋಡಿರುವೆ."

"ತಾಯಿಯ ಪತ್ರ ಓದಿವೆಯಾ ?"

"ಹೂಂ, ಕಕ್ಕಿಯ ಪತ್ರದಲ್ಲಿ ಆ ಹುಡುಗೆಯನ್ನು ಕೊರಳಿಗೆ ಕಟ್ಟಿ ಕೊಳ್ಳಬೇಕೆಂದು ಒತ್ತಾಯ ಪಡಿಸಿ ಏನನ್ನೂ ಬರೆದಿಲ್ಲ ಆ ಹುಡುಗೆ ಚೆನ್ನಾಗಿರಲಿ, ಇಲ್ಲದಿರಲಿ, ಆಕೆಯನ್ನು ನಾನು ಮನೆಗೆ ಬರಗೊಡಲಿಕ್ಕಿಲ್ಲ."

"ಎಂತಹ ಹುಡುಗೆಯನ್ನು ಮನೆಗೆ ತರುವೆ ಹೇಳು ?"

"ಅದನ್ನು ನಾನು ಈಗ ಹೇಗೆ ಹೇಳಲಿ? ವಿಚಾರಮಾಡಿ ನೋಡ ಬೇಕಾಗುವುದು ಅಲ್ಲವೆ ?'

ಸ್ವಲ್ಪ ಹೊತ್ತು ಸುಮ್ಮಗಿದ್ದು, ನಕ್ಕು ನಾನೆಂದೆ "ನಿನ್ನ ಒಪ್ಪಿಗೆ ಮತ್ತು ವಿವೇಚನೆಯನ್ನು ಅವಲಂಬಿಸಿ ಕುಳಿತರೆ ನಾನು ನನ್ನ ಕೌಮಾರ್ಯ ವನ್ನು ತ್ಯಜಿಸಲು ಮತ್ತೊಮ್ಮೆ ಹುಟ್ಟಿ ಬರಬೇಕಾದೀತು. ಆ ಜನ್ಮದಲ್ಲಿಯೂ ಬಹುಶಃ ಕೌಮಾರ್ಯ ತ್ಯಜಸಲಾಗಲಿಕ್ಕಿಲ್ಲ. ಹೋಗಲಿ ಬಿಡು, ಸಮಯಕ್ಕೆ ಸರಿಯಾಗಿ ಮದುವೆಯಾಗದಿದ್ದರೆ ಇನ್ನೊಂದು ಜನ್ಮತಾಳುವೆ. ಈಗ ನನ ಗೇನೂ ಮದುವೆಯ ಅಗತ್ಯ ಅಷ್ಟಿಲ್ಲ ಆದರೆ ನೀನು ಆ ಹುಡುಗೆಯ ಉದ್ಧಾರವನ್ನು ಮಾಡಿಬಿಡು. ಐದುನೂರು ರೂಪಾಯಿಗಳನ್ನು ಕೊಟ್ಟರೆ ಕೆಲಸವಾಗಿ ಬಿಡುವುದು. ನಾನು ಅವರ ಬಾಯಿಂದಲೇ ಕೇಳಿಬಂದಿರುವೆ."

ಪ್ಯಾರಿಯು ಉತ್ಸಾಹದಿಂದ ಚಟಕ್ಕನೆ ಎದ್ದು ಕುಳಿತಳು ಬಳಿಕ ಆಕೆಯ ಎಂದಳು "ನಾಳೆಯೆ ನಾನು ರೂಪಾಯಿಗಳನ್ನು ಕಳಿಸುವೆ. ಕಕ್ಕಿಯ ಮಾತನ್ನು ಸುಳ್ಳಾಗಗೊಡೆನು." ಸ್ವಲ್ಪ ಸಮಯ ಸುಮ್ಮಗಿದ್ದು ಪುನಃ

ಆಕೆಯೆಂದಳು "ನಾನು ನಿಮಗೆ ನಿಜವಾದ ಮಾತನ್ನು ಹೇಳುವೆ—ಈ ಹುಡುಗೆ ಚೆನ್ನಾಗಿಲ್ಲ, ಅದಕಾಗಿ ನನ್ನ ಅಡ್ಡಿ ಇಲ್ಲದಿದ್ದರೆ—''

"ಇಲ್ಲದಿದ್ದರೆ ?"

"ಇಲ್ಲದಿದ್ದರೆ ಏನು? ನಿಮಗೆ ಯೋಗ್ಯ ಕನ್ಯೆಯನ್ನು ಹುಡುಕಿದ ಬಳಿಕ ನಿಮ್ಮ ಮಾತಿಗೆ ಉತ್ತರ ಕೊಡುವೆ, ಈಗ ಕೊಡುವುದಿಲ್ಲ''

ನಾನು ತಲೆಯಲ್ಲಾಡಿಸಿ "ನೀನು ವ್ಯರ್ಥವಾಗಿ ಪ್ರಯತ್ನಿಸಬೇಡ ರಾಜ ಲಕ್ಷ್ಮೀ, ನನಗೆ ಅನುರೂಪಳಾದ ಕನ್ಯೆಯನ್ನು ನೀನೆಂದಿಗೂ ಹುಡುಕಲಾರೆ" ಎಂದೆ

ಆಕೆಯು ಬಹಳ ಹೊತ್ತು ಸುಮ್ಮಗಿದ್ದು ಒಮ್ಮೆಗೇ "ಒಳ್ಳೇದು, ಹುಡುಕಲಿಕ್ಕಾಗಲಿಕ್ಕಿಲ್ಲ, ಆದರೆ ನೀವು ಬರಮಾಕ್ಕೆ ಹೋಗುವಿರಿ ಅಲ್ಲವೆ? ನನ್ನನ್ನು ಜೊತೆಗೆ ಕರೆದುಕೊಂಡು ಹೋಗುವಿರಾ?" ಎಂದು ಕೇಳಿದಳು.

ಆಕೆಯ ಮಾತನ್ನು ಕೇಳಿ ನಾನು ನಕ್ಕೆ "ನನ್ನ ಕೂಡ ಬರುವ ಸಾಹಸವು ನೀನಗಾಗುವುದೆ!'' ಎಂದು ನಾನು ಮರುಸವಾಲು ಹಾಕಿದೆ.

ಪ್ಯಾರಿಯು ನನ್ನ ಕಡೆಗೆ ತೀಕ್ಷ್ಣ ದೃಷ್ಟಿಯಿಂದ ನೋಡಿ "ಸಾಹಸ! ಇದನ್ನು ನೀವು ಕಠಿನವಾದ ಮಾತೆಂದು ತಿಳಿದಿರುವಿರೇನು?" ಎಂದು ತಿರುಗಿ ಕೇಳಿದಳು.

"ನನಗೆ ತಿಳಿದಿರಲಿ ಬಿಡಲಿ; ಆದರೆ ಈ ಎಲ್ಲ ಸಾಮಾನುಗಳ ಗತಿ ಏನು ?''

"ಏನಾದರೂ ಆಗಲಿ ನೀವು ನೌಕರಿಯನ್ನು ಮಾಡಲು ಇಷ್ಟು ದೂರ ಹೋಗುವಂತಹ ಪ್ರಸಂಗ ಬಂದಿತು ಈ ಎಲ್ಲ ವಸ್ತು-ಆಸ್ತಿ-ಸಾಮಾನು ನಿಮ್ಮ ಉಪಯೋಗಕ್ಕೆ ಬರಲಿಲ್ಲ ಎಂದ ಬಳಿಕ ಇವನ್ನು ತೆಗೆದುಕೊಂಡು ನಾನೇನು ಮಾಡಲಿ ? ಎಲ್ಲವನ್ನೂ ಬಂಕೂನಿಗೆ ಕೊಟ್ಟುಬಿಡುವೆ.''

ಈ ಮಾತಿಗೆ ಉತ್ತರವನ್ನು ಕೊಡುವುದು ನನ್ನಿಂದಾಗಲಿಲ್ಲ. ತೆರೆದ ಕಿಡಿಕಿಯೊಳಗಿಂದ ಹೊರಗಿನ ಕತ್ತಲನ್ನು ನೋಡುತ್ತ ಕುಳಿತೆ.

ಆಕೆಯು ಪುನಃ "ಇಷ್ಟು ದೂರ ಹೋಗದಿದ್ದರೆ ಆಗದೇನು ? ಇದೆಲ್ಲವೂ ಎಂದಾದರೂ ಯಾವುದಕ್ಕಾದರೂ ನಿಮಗೆ ಉಪಯೋಗವಾಗದೇನು?" ಎಂದು ಕೇಳಿದಳು

" ಇಲ್ಲ ಎಂದಿಗೂ ಇಲ್ಲ "

" ಹೌದು, ಇದು ನನಗೆ ಗೊತ್ತು ಆದರೆ ನೀವು ನನ್ನನ್ನು ನಿಮ್ಮ ಸಂಗಡ ಕರೆದುಕೊಂಡು ಹೋಗುವಿರೇನು? " ಎಂದು ಆಕೆಯು ನನ್ನ ಪಾದಗಳನ್ನು ಹಿಡಿದಳು. ಇದೇ ಪ್ಯಾರಿಯು ಒಂದು ದಿನ ನನ್ನನ್ನು ತನ್ನ ಮನೆಯಿಂದ ಬಲವಂತ ಮಾಡಿ ಹೊರಗೆ ಕಳಿಸಿದ್ದಳು. ಆ ದಿನ ಆಕೆಯ ಮನಸ್ಸಿನ ಸ್ಥೈರ್ಯವನ್ನು ನೋಡಿ ನಾನು ಬೆರಗಾಗಿದ್ದೆ. ಆದರೆ ಈ ದಿನ ಆಕೆಯೇ ಇಷ್ಟು ದುರ್ಬಲತೆಯನ್ನು ತೋರಿಸುತ್ತಿರುವಳು, ಕರುಣ ಕಂಠದಿಂದ ಪ್ರಾರ್ಥಿಸುತ್ತಿರುವಳು! ಇದೆಲ್ಲವನ್ನು ನೆನಿಸಿಕೊಂಡು ನನ್ನ ಎದೆಯು ಬಿರಿಯತೊಡಗಿತು ಆದಾಗ್ಯೂ ನಾನು ಒಪ್ಪಿಗೆಯನ್ನು ಯಾವ ರೀತಿಯಿಂದಾದರೂ ವ್ಯಕ್ತಗೊಳಿಸಲಿಲ್ಲ ನಾನೆಂದೆ " ನಾನು ನಿನ್ನನ್ನು ನನ್ನ ಸಂಗಡ ಕರೆದುಕೊಂಡು ಹೋಗಲಾರೆ, ಆದರೆ ನೀನು ಎಂದು ಹಿಂತಿರುಗಿ ಕರೆಯಿಸಿಕೊಳ್ಳುವೆಯೊ ಆ ದಿನ ಬರುವೆ ನಾನು ಎಲ್ಲಿಯೇ ಇದ್ದರೂ ಯಾವಾಗಲೂ ನಿನ್ನವನಾಗಿಯೇ ಇರುವೆ ರಾಜಲಕ್ಷ್ಮೀ ! "

" ನೀವು ಚಿರಕಾಲದ ವರೆಗೆ ಈ ಪಾಪಿಷ್ಠೆಯುವರೇ ಆಗಿರುವಿರಾ? "

" ಹೌದು, ಚಿರಕಾಲದ ವರೆಗೆ "

" ಹಾಗಾದರೆ ನಿಮ್ಮ ವಿವಾಹವು ಎಂದಿಗೂ ಆಗುವುದಿಲ್ಲವೆ? "

"ಹೌದು, ಇದಕ್ಕೊಂದು ಕಾರಣವುಂಟು — ನಿನ್ನ ಸಮ್ಮತಿ ಇಲ್ಲದೆ, ನಿನಗೆ ದುಃಖವನ್ನಿತ್ತು ಈ ವಿವಾಹ ಕಾರ್ಯಕ್ಕೆ ನಾನೆಂದಿಗೂ ಪ್ರವೃತ್ತನಾಗುವಂತಹ ಸ್ವಭಾವದವನು ಇಲ್ಲ "

ಪ್ಯಾರಿಯು ಎವೆಯಿಕ್ಕದೆ ನನ್ನ ಮೊಗವನ್ನು ಸ್ವಲ್ಪ ಹೊತ್ತಿನ ವರೆಗೆ ನೋಡುತ್ತಿದ್ದಳು. ಬಳಿಕ ಆಕೆಯ ಎರಡೂ ನಯನಗಳಿಂದ ಜಲ ಬಿಂದುಗಳು ದೊಡ್ಡ ದೊಡ್ಡವಾಗಿ ' ಟಪ್ ಟಪ್ ' ಎಂದು ಉದುರಿ ಬೀಳತೊಡಗಿದುವು. ಕಣ್ಣುಗಳನ್ನೊರಸಿಕೊಂಡು ಆಕೆಯು ಗಡಸು ದನಿಯಿಂದ " ಈ ನಿರ್ಭಾಗ್ಯಳ ಸಲುವಾಗಿ ನೀವು ಆಜನ್ಮ ಸನ್ಯಾಸಿಯಾಗಿರುವಿರಾ?" ಎಂದಳು.

"ಹೌದು, ಇರುವೆ. ನಿನ್ನ ಬಳಿಯಲ್ಲಿ ನಾನು ಪಡೆದ ವಸ್ತುವಿನ ಬದಲಾಗಿ ನಾನು ಸನ್ಯಾಸಿಯಾಗಿ ಉಳಿದರೆ ನನಗಾವ ಹಾನಿಯೂ ಇಲ್ಲ ನಾನು ಎಲ್ಲಾದರೂ ಇರಲಿ, ನೀನು ಮಾತ್ರ ನನ್ನ ಈ ಮಾತಿನ ಮೇಲೆ ಎಂದೂ ಅಪನಂಬಿಕೆಯನ್ನಿಡಬೇಡ "

ಕ್ಷಣ ಮಾತ್ರದಲ್ಲಿ ಇಬ್ಬರ ನಯನಗಳೂ ಒಂದುಗೂಡಿದುವು ಮರು ಕ್ಷಣದಲ್ಲಿ ಆಕೆಯು ದಿಂಬಿನ ಮೇಲೆ ಮುಖ ಕೆಳಗೆ ಮಾಡಿಕೊಂಡು ಮಲಗಿ ಬಿಟ್ಟಳು, ಉದ್ವೇಗದ ಅಳುವಿನಿಂದ ಆಕೆಯ ಶರೀರವು ನಡುಗಿ ನಡುಗಿ ಹಾರಿ ಹಾರಿ ಬೀಳತೊಡಗಿತು.

ನಾನು ಮುಖವೆತ್ತಿ ನೋಡಿದೆ ಇಡೀ ಮನೆಯಲ್ಲಿ ನಿದ್ರಾದೇವಿಯ ಗಾಢಾಲಿಂಗನೆಯಲ್ಲಿ ಎಲ್ಲರೂ ವೈಮರೆತಿದ್ದರು; ಯಾರೂ ಎಚ್ಚತ್ತಿರಲಿಲ್ಲ. ಒಮ್ಮೆಗೆ ನನಗೆ ವಿಚಾರವೊಂದು ಬಂದಿತು— ಈ ಕಿಡಿಕಿಯ ಹೊರಗಿರುವ ಕತ್ತಲು ರಾತ್ರಿಯು ತನ್ನ ಉತ್ಸವಪ್ರಿಯ ಸಖಿಯಾದ ಪ್ಯಾರಿಯ ಈ ಎದೆಯನ್ನು ಕರಗಿಸುವಂತಹ ಅಭಿನಯವನ್ನು ಸುಮ್ಮಗೆ ಕಣ್ದೆರೆದು ಅತ್ಯಂತ ಪರಿತೃಪ್ತಿಯಿಂದ ನೋಡುತ್ತಿರುವುದು.

— ೨ —

ಇಡಿ ಜೀವಮಾನ ಮರೆಯದಂತಹ ಇಂಥ ಅನೇಕ ಸಂಗತಿಗಳನ್ನು ನಾನು ಕಂಡಿರುವೆ ಅವು ನೆನಪಿಗೆ ಬಂದಾಗ ಆಗ ಆಡಿದ ಮಾತುಗಳು ಕಿವಿಯಲ್ಲಿ ನಿನದಿಸುವುವು. ಪ್ಯಾರಿಯ ಕೊನೆಯ ನುಡಿಗಳೂ ಹೀಗೆ ಇದ್ದುವು. ಇಂದಿಗೂ ಆ ನುಡಿಗಳು ನನ್ನ ಕಿವಿಯಲ್ಲಿ ಇನಿದನಿ ಮಾಡುತ್ತಿವೆ ಅವನ್ನು ನಾನು ಆಲಿಸುವೆ. ಆಕೆಯು ತನ್ನ ಸಂಯಮನದ ಪರಿಚಯವನ್ನು ನನಗೆ ತನ್ನ ಬಾಲ್ಯದಲ್ಲಿಯೆ ಅನೇಕ ಬಾರಿ ಮಾಡಿಕೊಟ್ಟಿರುವಳು ಈಗಂತೂ ಆಕೆಗೆ ಪ್ರಪಂಚದ ಜ್ಞಾನವು ಆಗಿರುವುದು! ಅನುಭವವು ಆಗಿರುವುದು! ಆ ಬಾರಿ ಹೇಗಾದರೂ ಮಾಡಿ ನನ್ನನ್ನು ಕಳುಹಿಸಿ ತನ್ನ ಆತ್ಮ ರಕ್ಷಣೆಯನ್ನು ಮಾಡಿಕೊಂಡಳು ಆದರೆ ಈ ಬಾರಿ ಯಾವ ರೀತಿಯಿಂದಲೂ ತನ್ನನ್ನು ಸಂಬಾಳಿಸಿಕೊಳ್ಳುವುದಕ್ಕೆ ಆಕೆಯು ಸಮರ್ಥಳಾಗಲಿಲ್ಲ. ಅಳುಮಕ್ಕಳ ಎದುರಿಗೇ ಅತ್ತುಬಿಟ್ಟಳು ಗದ್ಗದ ಸ್ವರದಿಂದ ಆಕೆಯೆಂದಳು "ನೋಡಿರಿ, ನಾನು ಅಜ್ಞಾನಿಯಿಲ್ಲ. ನನ್ನ ಪಾಪಗಳಿಗೆ ಸಿಕ್ಕುವ ಮಹಾದಂಡವನ್ನು ನಾನು ಅನುಭವಿಸಲೇ ಬೇಕಾಗುವುದು ಆದಾಗ್ಯೂ ನಾನು ಇಷ್ಟು ಹೇಳಬಲ್ಲೆ— ನಮ್ಮ ಸಮಾಜ ನಿಷ್ಠುರವಿದೆ, ನಿರ್ದಯವಿದೆ! ಇದಕ್ಕೂ ಒಂದಿಲ್ಲೊಂದು ದಿನ ಮಹಾದಂಡವನ್ನು ತೆತ್ತಲೇಬೇಕಾಗುವುದು! ದೇವರು ಈ ಪಾಪಕ್ಕೆ ತಕ್ಕ ಶಿಕ್ಷೆಯನ್ನು ವಿಧಿಸಿಯೇ ವಿಧಿಸುವನು!"

ಸಮಾಜಕ್ಕೆ ಆಕೆ ಇಷ್ಟೇಕೆ ಮಹಾ ಶಾಪವನ್ನಿತ್ತಳೊ ದೇವರೇ ಬಲ್ಲ! ಆಕೆಯ ಅಂತರ್ಯಾಮಿಯೆ ತಿಳಿಯಬಲ್ಲ! ನಾನು ಅರಿಯಲಾರೆ ಎಂದು ಹೇಳಿ. ಆದರೆ ನಾನು ಸುಮ್ಮಗಿದ್ದೆ ಮುದುಕ ಆಳುಮಗನು ಗಾಡಿಯ ಬಾಗಿಲನ್ನು ತೆರೆದು ನನ್ನ ಮುಖವನ್ನು ನೋಡಿದ ನಾನು ಮುಂದಕ್ಕೆ ಹೆಜ್ಜೆಯನ್ನು ಇಕ್ಕುವಾಗ ಆಕೆಯು ತನ್ನ ಕಂಬನಿದುಂಬಿದ ಕಣ್ಣುಗಳಿಂದ ನನ್ನನ್ನು ನೋಡಿ ನಕ್ಕಳು ಬಳಿಕ 'ಎಲ್ಲಿಗೆ ಹೋಗುತ್ತಿರುವಿರಿ? ಇನ್ನು ಪುನಃ ಬಹುಶಃ ಭೇಟಿಯಾಗಲಿಕ್ಕಿಲ್ಲ. ಒಂದು ಭಿಕ್ಷೆಯನ್ನಾದರೂ ಕೊಟ್ಟು ಹೋಗಿರಿ!" ಎಂದಳು

"ಕೊಡುವೆ ಏನದು ಹೇಳು."

"ದೇವರು ಅಂತಹ ಪ್ರಸಂಗ ತರದಿರಲಿ— ನಿಮ್ಮ ಯಾತ್ರೆಯ ರೀತಿಯನ್ನು ನೋಡಿದರೆ—, ಒಳ್ಳೇದು, ನೀವು ಎಲ್ಲಿಯೋ ಇದ್ದರೂ ಇಂತಹ ವೇಳೆಯಲ್ಲಿ ನನಗೆ ಸಮಾಚಾರ ತಿಳಿಸುವಿರಾ? ನಾಚಿಕೆಪಟ್ಟುಕೊಳ್ಳಲಿಕ್ಕಿಲ್ಲ ತಾನೆ?"

"ಇಲ್ಲ ನಾಚಿಕೆ ಪಟ್ಟುಕೊಳ್ಳುವುದಿಲ್ಲ ಅವಶ್ಯವಾಗಿ ತಿಳಿಸುವೆ" ಎಂದು ನಾನು ಮೆಲ್ಲಗೆ ಹೋಗಿ ಗಾಡಿಯಲ್ಲಿ ಕುಳಿತೆ ಪ್ಯಾರಿಯು ಹಿಂದೆ ಹಿಂದೆಯೇ ಬಂದು ತನ್ನ ಸೆರಗಿನಲ್ಲಿ ನನ್ನ ಪಾದಧೂಳಿಯನ್ನು ಎತ್ತಿ ಹಾಕಿಕೊಂಡಳು

"ಕೇಳುವಿರೇನು?"

ನಾನು ಕತ್ತೆತ್ತಿ ನೋಡಿದೆ ಆಕೆಯು ತನ್ನ ನಡುಗುತ್ತಿರುವ ತುಟಿಗಳನ್ನು ಅತ್ಯಂತ ಪ್ರಯತ್ನಪೂರ್ವಕವಾಗಿ ತಡೆಹಿಡಿದು ಮಾತನಾಡಲು ಯತ್ನಿಸುತ್ತಿರುವಳು ದೃಷ್ಟಿಗಳು ಸೇರಿದೊಡನೆಯೇ ಆಕೆಯ ನಯನಗಳಿಂದ ನೀರು ಬಳಬಳನೆ ಹರಿದುಬಂದುವು ಆಕೆಯು ಅಸ್ಪಷ್ಟ, ಗದ್ಗದ ದನಿಯಿಂದ ನುಡಿದಳು "ಇಷ್ಟು ದೂರ ಹೋಗದಿದ್ದರೆ ಆಗದೆ? ಹೋಗಬೇಡಿರಿ!"

ನಾನು ಸುಮ್ಮಗೆ ನನ್ನ ನೋಟವನ್ನು ಬೇರೆ ಕಡೆಗೆ ತಿರುಗಿಸಿದೆ ಗಾಡಿಯವನು ಮುಂದೆ ಸಾಗಿದನು ಬಾರಕೋಲಿನ ಕಟುಯಿಸುವಿಕೆಯು ಮತ್ತು ಚಕ್ಕಡಿಯ ಗಡ ಗಡ ಶಬ್ದದಿಂದ ಸಂಧ್ಯಾಸಮಯವು ಅದ್ಭುತ ರಸದಿಂದ ತುಂಬಿಹೋಯಿತು. ಆದರೆ ಇದೆಲ್ಲವನ್ನು ಮರೆಯಿಸಿ, ಕೇವಲ ಆ ಗದ್ಗದ ದನಿಯ ಹತ್ತಿಕ್ಕಿದ ಅಳುವು ನನ್ನ ಕಿವಿಯಲ್ಲಿ ಮಿಡಿಯತೊಡಗಿತು

— ೩ —

ಆರೇಳು ದಿನಗಳ ನಂತರ ನಾನು ಒಂದು ಟ್ರಂಕು ಮತ್ತು ಹಾಸಿಗೆಯ ಸುರುಳಿಯನ್ನು ತೆಗೆದುಕೊಂಡು ಒಂದು ದಿನ ಮುಂಜಾನೆ ಕಲಕತ್ತೆಯ ಕೋಯಲಾ ಘಾಟವನ್ನು ತಲ್ಪಿದೆ. ಗಾಡಿಯಿಂದ ಇಳಿಯುತ್ತಲೇ ಖಾಕಿ ಬಟ್ಟೆಯನ್ನು ತೊಟ್ಟ ಒರ್ವ ಕೂಲಿಕಾರನು ನನ್ನ ಸಾಮಾನುಗಳನ್ನು ಎತ್ತಿಕೊಂಡನು ಕಣ್ಣು ಮುಚ್ಚಿ ಕಣ್ಣು ತೆರೆಯುವಷ್ಟರಲ್ಲಿ ಎಲ್ಲಿಗೆ ಅವನ್ನು ಹೊತ್ತುಕೊಂಡು ಹೋದನೊ ತಿಳಿಯಲಿಲ್ಲ ಅವನನ್ನು ಹುಡುಕಿ ಹುಡುಕಿ ಬೇಸತ್ತು ನಾನು ಕಂಬನಿಗರೆಯುವ ವರೆಗೆ ಅವನು ನನಗೆ ಸಿಕ್ಕಲಿಲ್ಲ

ಗಾಡಿಯಿಂದ ಇಳಿದು ಬರುತ್ತಲೇ ಹಡಗುಗಳು ನಿಲ್ಲುವ ಮತ್ತು ರಾಜಮಾರ್ಗದ ನಡುವಿನ ಸ್ಥಾನದಲ್ಲಿ ನಾನಾಬಣ್ಣದ ಸಾಮಾನುಗಳು ಇರಿಸಲ್ಪಟ್ಟಿದ್ದವು. ಸ್ವಲ್ಪ ಇಬ್ಬನ್ನಿಯೂ ಬಿದ್ದಿತ್ತು ಕರುಗಳ ಗುಂಪೊಂದು ಮಾರಾಟಕ್ಕೆ ನಿಂತಿದೆಯೋ ಎಂಬಂತೆ ಕಾಣುತ್ತಿದ್ದಿತು ಹತ್ತಿರ ಹೋಗಿ ನೋಡಿದೆ. ಮನುಷ್ಯರ ಗುಂಪು ಅದು ಅವರು ತಮ್ಮ ಹೆಂಡಿರುಮಕ್ಕಳೊಡನೆ ದೊಡ್ಡ ದೊಡ್ಡ ಗಂಟುಮೂಟೆಗಳನ್ನು ಕಟ್ಟಿಕೊಂಡು ಹಡಗದಲ್ಲಿ ಒಳ್ಳೆಯ ಸ್ಥಳವನ್ನು ಪಡೆಯುವುದಕ್ಕಾಗಿ ನಸುಕಿನಲ್ಲಿಯೆ ಬಂದು ಕುಳಿತಿದ್ದರು ಇಷ್ಟು ಜನರನ್ನು ದಾಟಿ ಮುಂದೆ ಹೋಗುವ ಸಾಹಸ ಯಾರಿಗೆ ಇದ್ದಿತು? ಸ್ವಲ್ಪ ಹೊತ್ತಿನ ನಂತರ ಈ ಜನರೆಲ್ಲರೂ ಎದ್ದು ನಿಂತರು, ನಾನೂ ಎದ್ದು ನಿಂತು ನೋಡಿದೆ. ಆಗ ಕಾಬುಲದ ಉತ್ತರ ಪ್ರಾಂತದಿಂದ ಕನ್ಯಾಕುಮಾರಿಯ ವರೆಗೆ ಇರುವ ಪ್ರದೇಶದವರೆಲ್ಲ ತಮ್ಮ ತಮ್ಮ ಪ್ರತಿನಿಧಿಗಳನ್ನು ಈ ಕೋಯಲಾ ಘಾಟಕ್ಕೆ ಕಳುಹಿಸಲು ಮರೆತಿಲ್ಲ ಎಂದು ಎನಿಸಿತು.

ಎಲ್ಲರೂ ಇರುವರು. ಕಪ್ಪು ಶರ್ಟುಗಳನ್ನು ಧರಿಸಿದ ಚೀನಿ ಜನರ ದಳವೂ ಇದ್ದಿತು ಅವರೂ ಹಿಂದುಳಿಯಬಾರದೆಂದು ಮೊದಲೇ ಬಂದಿದ್ದರು ನಾನೂ 'ಡೆಕ್'ದ ಯಾತ್ರಿಕನಾಗಿದ್ದೆ. ಡೆಕ್ಕದಕಿಂತ ಕೆಳಗಿನ ತರಗತಿಯು ಹಡಗದಲ್ಲಿ ಇಲ್ಲ. ಈ ಜನರನ್ನೆಲ್ಲ ಸೋಲಿಸಿ ಉತ್ತಮವಾದ ಸ್ಥಳವನ್ನು ಸಂಪಾದಿಸಲು ನಾನೂ ಪ್ರಯತ್ನ-ಪ್ರಯಾಸ ಪಡಬೇಕಾಗಿತ್ತು. ಈ ಪ್ರಯತ್ನದ ನೆನಹು ಬಂದೊಡನೆ ನನ್ನ ಕೈಕಾಲುಗಳೇ ಹೋದುವು. ನಾನಂತೂ ಹೋಗಲೇಬೇಕು, ಹಡಗದ ಮಾರ್ಗವನ್ನು ಬಿಟ್ಟರೆ ಬೇರೊಂದು ಮಾರ್ಗವೇ ಇಲ್ಲ, ನಾನಾದರೂ ಈ ಜನರನ್ನೇ 'ಅನುಸರಿಸಬೇಕು ಎಂದು

ವಿಚಾರ ಮಾಡಿ ಮನಸ್ಸಿಗೆ ಧೈರ್ಯ ಕೊಡತೊಡಗಿದೆ. ನಾನು ಧೈರ್ಯ ಕೊಟ್ಟಷ್ಟೂ ಅದು ಧೈರ್ಯವನ್ನು ಬಿಡತೊಡಗಿತು ಹಡಗ ಯಾವಾಗ ಬಂದು ದಂಡೆಗೆ ಹತ್ತುತ್ತುವುದೊ ಅದಕ್ಕೇ ಗೊತ್ತು ಒಮ್ಮೆಗೆ ಕಣ್ತೆತ್ತಿ ನೋಡಿದೆ. ಈ ಹದಿನಾಲ್ಕು ಹದಿನೈದು ನೂರು ಜನರು ಸಾಲಾಗಿ ಎದ್ದು ನಿಂತಿರುವರು ಒಬ್ಬ ಹಿಂದುಸ್ತಾನೀ ಮನುಷ್ಯನನ್ನು ನಾನು ಕೇಳಿದೆ "ಅಣ್ಣಾ, ಇವರೆಲ್ಲರೂ ಚೆನ್ನಾಗಿ ಕುಳಿತಿದ್ದರು, ಒಮ್ಮೆಗೇ ಹೀಗೆ ಸಾಲಾಗಿ ಏಕೆ ನಿಂತರು?"

"ಡಾಕ್ಟರರು ತಪಾಸಣೆ ಮಾಡುವರು."

"ಡಾಕ್ಟರರ ತಪಾಸಣೆ ಎಂದರೇನು?"

ಆ ಮನುಷ್ಯ ಹಿಂದಿನಿಂದ ನುಗ್ಗುತ್ತಿರುವವರನ್ನು ತಡೆಯುತ್ತ ಸ್ವಲ್ಪ ರೇಗಿ "ಪ್ಲೇಗಿನ ತಪಾಸಣೆ!" ಎಂದ.

ಅವನ ಮಾತನ್ನು ತಿಳಿಯುವುದೇ ಕಷ್ಟವಾಯಿತು. ತಿಳಿಯಲಿ, ತಿಳಿಯದಿರಲಿ, ಎಲ್ಲರಿಗೂ ಆಗಬೇಕಾದುದು ನನಗೂ ಆಗುವುದು ಈ ಗುಂಪಿನಲ್ಲಿ ನನ್ನನ್ನು ನಾನು ಹೇಗೆ ಸೇರ್ಪಡಿಸಿಕೊಳ್ಳಬೇಕೆಂಬುದೇ ನನಗೆ ದೊಡ್ಡದೊಂದು ಸಮಸ್ಯೆಯಾಯಿತು ಎಲ್ಲಾದರೂ ನುಗ್ಗಲಿಕ್ಕೆ ಸ್ಥಳವು ಇದೆಯೊ ಇಲ್ಲವೊ ಎಂಬುದನ್ನು ಹುಡುಕತೊಡಗಿದ. ಆಗ ಸ್ವಲ್ಪ ದೂರದಲ್ಲಿ ಖಿದಿರ-ಪುರದ ಕೆಲವರು ಮುಸಲ್ಮಾನರು ಸಂಕೋಚದಿಂದ ನಿಂತಿರುವುದನ್ನು ನೋಡಿದೆ. ಸ್ವದೇಶ-ವಿದೇಶಗಳಲ್ಲಿ ಎಲ್ಲ ಕಡೆಗೂ ನಾನು ನೋಡಿರುವೆ—ನಾಚಿಕೆ ಪಡುವಂಥ ಕಾರ್ಯದಲ್ಲಿ ಎಲ್ಲ ಬಂಗಾಲೀ ಜನರು ನಾಚಿಕೆ ಪಡುವರು ಅವರು ಭಾರತದ ಇತರ ಭಾಗಗಳ ಜನರಂತೆ ಸಂಕೋಚ-ಭಾವವನ್ನು ಬಿಟ್ಟು ಹೊಡೆದಾಡುವುದಿಲ್ಲ-ಗುದ್ದಾಡುವುದಿಲ್ಲ. ಈ ರೀತಿ ನಿಲ್ಲುವಲ್ಲಿ ಒಂದು ಬಗೆಯ ನಾಚಿಕೆಯಿದೆ, ಆದಕ್ಕಾಗಿ ಅವರು ತಲೆಬಾಗಿಸಿಕೊಂಡು ನಿಂತಿರುವರು ರಂಗೂನದಲ್ಲಿ ಅವರು ದರ್ಜಿಯ ಕೆಲಸವನ್ನು ಮಾಡುವರು. ಎಷ್ಟೋ ಸಲ ಅಲ್ಲಿಗೆ ಹೋಗಿರುವರು ಮತ್ತು ಬಂದಿರುವರು ಅವರನ್ನೂ ನಾನು ಕೇಳಿದೆ ಅವರು 'ಈ ಪ್ಲೇಗು ಬರಮಾದಲ್ಲಿಯೂ ಹರಡಬಾರದೆಂದು ಎಚ್ಚರಿಕೆ ತೆಗೆದುಕೊಳ್ಳುವುದಕ್ಕಾಗಿ ಡಾಕ್ಟರರಿಂದ ಆರೋಗ್ಯ ಪರೀಕ್ಷೆ ಮಾಡಿಸುವರು' ಎಂದು ಹೇಳಿದರು ಡಾಕ್ಟರರು ಪರೀಕ್ಷೆಮಾಡಿ ಸರ್ಟಿ-ಫಿಕೇಟು ಕೊಟ್ಟ ಬಳಿಕ ಮಾತ್ರ ಹಡಗ ಹತ್ತಬಹುದು. ಆದುದರಿಂದ

ವಿಚಾರ ಮಾಡಿ ಮನಸ್ಸಿಗೆ ಧೈರ್ಯ ಕೊಡತೊಡಗಿದೆ. ನಾನು ಧೈರ್ಯ ಕೊಟ್ಟಷ್ಟೂ ಅದು ಧೈರ್ಯವನ್ನು ಬಿಡತೊಡಗಿತು. ಹಡಗ ಯಾವಾಗ ಬಂದು ದಂಡೆಗೆ ಹತ್ತುತ್ತದೊ ಅದಕ್ಕೇ ಗೊತ್ತು. ಒಮ್ಮೆಗೆ ಕಣ್ಣೆತ್ತಿ ನೋಡಿದೆ. ಈ ಹದಿನಾಲ್ಕು ಹದಿನೈದು ನೂರು ಜನರು ಸಾಲಾಗಿ ಎದ್ದು ನಿಂತಿರುವರು. ಒಬ್ಬ ಹಿಂದುಸ್ತಾನೀ ಮನುಷ್ಯನನ್ನು ನಾನು ಕೇಳಿದೆ "ಅಣ್ಣಾ, ಇವರೆಲ್ಲರೂ ಚೆನ್ನಾಗಿ ಕುಳಿತಿದ್ದರು, ಒಮ್ಮೆಗೇ ಹೀಗೆ ಸಾಲಾಗಿ ಏಕೆ ನಿಂತರು?"

"ಡಾಕ್ಟರರು ತಪಾಸಣೆ ಮಾಡುವರು."

"ಡಾಕ್ಟರರ ತಪಾಸಣೆ ಎಂದರೇನು?"

ಆ ಮನುಷ್ಯ ಹಿಂದಿನಿಂದ ನುಗ್ಗುತ್ತಿರುವವರನ್ನು ತಡೆಯುತ್ತ ಸ್ವಲ್ಪ ರೇಗಿ "ಪ್ಲೇಗಿನ ತಪಾಸಣೆ!" ಎಂದ.

ಅವನ ಮಾತನ್ನು ತಿಳಿಯುವುದೇ ಕಷ್ಟವಾಯಿತು. ತಿಳಿಯಲಿ, ತಿಳಿಯದಿರಲಿ, ಎಲ್ಲರಿಗೂ ಆಗಬೇಕಾದುದು ನನಗೂ ಆಗುವುದು. ಈ ಗುಂಪಿನಲ್ಲಿ ನನ್ನನ್ನು ನಾನು ಹೇಗೆ ಸೇರ್ಪಡಿಸಿಕೊಳ್ಳಬೇಕೆಂಬುದೇ ನನಗೆ ದೊಡ್ಡದೊಂದು ಸಮಸ್ಯೆಯಾಯಿತು. ಎಲ್ಲಾದರೂ ನುಗ್ಗಲಿಕ್ಕೆ ಸ್ಥಳವು ಇದೆಯೊ ಇಲ್ಲವೊ ಎಂಬುದನ್ನು ಹುಡುಕತೊಡಗಿದೆ. ಆಗ ಸ್ವಲ್ಪ ದೂರದಲ್ಲಿ ಖಿದಿರ-ಪುರದ ಕೆಲವರು ಮುಸಲ್ಮಾನರು ಸಂಕೋಚದಿಂದ ನಿಂತಿರುವುದನ್ನು ನೋಡಿದೆ. ಸ್ವದೇಶ-ವಿದೇಶಗಳಲ್ಲಿ ಎಲ್ಲ ಕಡೆಗೂ ನಾನು ನೋಡಿರುವೆ—ನಾಚಿಕೆ ಪಡುವಂಥ ಕಾರ್ಯದಲ್ಲಿ ಎಲ್ಲ ಬಂಗಾಲೀ ಜನರು ನಾಚಿಕೆ ಪಡುವರು. ಅವರು ಭಾರತದ ಇತರ ಭಾಗಗಳ ಜನರಂತೆ ಸಂಕೋಚ-ಭಾವವನ್ನು ಬಿಟ್ಟು ಹೊಡೆದಾಡುವುದಿಲ್ಲ-ಗುದ್ದಾಡುವುದಿಲ್ಲ. ಈ ರೀತಿ ನಿಲ್ಲುವಲ್ಲಿ ಒಂದು ಬಗೆಯ ನಾಚಿಕೆಯಿದೆ, ಆದಕ್ಕಾಗಿ ಅವರು ತಲೆಬಾಗಿಸಿಕೊಂಡು ನಿಂತಿರುವರು. ರಂಗೂನದಲ್ಲಿ ಅವರು ದರ್ಜಿಯ ಕೆಲಸವನ್ನು ಮಾಡುವರು. ಎಷ್ಟೋ ಸಲ ಅಲ್ಲಿಗೆ ಹೋಗಿರುವರು ಮತ್ತು ಬಂದಿರುವರು. ಅವರನ್ನೂ ನಾನು ಕೇಳಿದೆ. ಅವರು 'ಈ ಪ್ಲೇಗು ಬರಮಾದಲ್ಲಿಯೂ ಹರಡಬಾರದೆಂದು ಎಚ್ಚರಿಕೆ ತೆಗೆದುಕೊಳ್ಳುವುದಕ್ಕಾಗಿ ಡಾಕ್ಟರರಿಂದ ಆರೋಗ್ಯ ಪರೀಕ್ಷೆ ಮಾಡಿಸುವರು' ಎಂದು ಹೇಳಿದರು. ಡಾಕ್ಟರರು ಪರೀಕ್ಷೆಮಾಡಿ ಸರ್ಟಿ-ಫಿಕೇಟು ಕೊಟ್ಟ ಬಳಿಕ ಮಾತ್ರ ಹಡಗ ಹತ್ತಬಹುದು. ಆದುದರಿಂದ

ಇನ್ನು ಹಡಗನ್ನು ಹತ್ತುವ ಸರತಿ. ಆದರೆ ಈ ಡೆಕ್ ಪ್ಯಾಸಿಂಜೆರರ ಏರುವ ಕ್ರಿಯೆಯ ಕಲ್ಪನೆಯನ್ನು ಹೊರಗಿನವರು ಮಾಡಲಾರರು. ಆದ ಗಿರಣಿಗಳಲ್ಲಿ ಕೆಲಸಮಾಡುವವರಿಗೆ, ಹಲ್ಲಿನ ಗಾಲಿಗಳ ಗತಿಯನ್ನು ನೋಡಿದವ ರಿಗೆ ಇದರ ಸ್ವಲ್ಪ ಕಲ್ಪನೆ ಬರಬಹುದು ಆ ಗಿರಣಿಯ ಚಕ್ರಗಳು ಹಿಂದು ಮುಂದಿನ ಧಕ್ಕೆಯಿಂದ ಹಿಂದಕ್ಕೆ ಮುಂದಕ್ಕೆ ಹೋಗುವ ರೀತಿಯಲ್ಲಿ ನಮ್ಮ ಕಾಬೂಲೀ-ಪಂಜಾಬೀ-ಮಾರವಾಡೀ-ಕರ್ನಾಟಕೀ-ಮರಾಠೀ--ಬಂಗಾಲೀ-ಚೀನೀ-ಉಡಿಯಾ-ಮೊದಲಾದವರ ಸೇನೆಯು ಪಾರಸ್ಪರಿಕ ಆಕರ್ಷಣ- ವಿಕ ರ್ಷಣ ವೇಗದಿಂದ ಭೂಮಿಯಿಂದ ಡೆಕ್ಕದ ಮೇಲೆ ಅರಿಯದಂತೆ ಏರಿತು ಅವರ ಏರುವಾಗಿನ ಆ ಗತಿಯು ಅಲ್ಲಿಯೂ ನಿಲ್ಲಲಿಲ್ಲ ಎದುರಿಗೆ ನೋಡಿದೆ-ಒಂದು ತಗ್ಗಿನ ಬಾಯುಳ್ಳ ನಿಚ್ಚಣಿಕೆಯನ್ನಿಟ್ಟಿತ್ತು. ಹಡಗದ ಗರ್ಭ ಪ್ರದೇಶದಲ್ಲಿ ಇಳಿಯಲು ಇಲ್ಲಿಯೇ ದಾರಿಯಿತ್ತು. ಒಡ್ಡು ಹಾಕಿ ಕಟ್ಟಿದ ನೀರು ಒಡ್ಡನ್ನು ಒಡೆದಕೂಡಲೆ ವೇಗವಾಗಿ ಮುನ್ನುಗ್ಗುವಂತೆ ಈ ಜನರ ಸೇನೆಯೂ ಸ್ಥಳವನ್ನು ಆಕ್ರಮಿಸಿಕೊಳ್ಳುವುದಕ್ಕಾಗಿ ಕೆಳಗಿಳಿಯತೊಡಗಿತು.

ನನಗೆ ಕೆಳಗಿಳಿಯುವ ಇಚ್ಛೆಯಿದ್ದಿಲ್ಲವೆಂಬುದು ನೆನಪಿಗೆ ಬರುತ್ತಿರು ವುದು ನಾನು ಕಾಲುಗಳಿಂದ ನಡೆದಾದರೂ ಇಳಿಯಲಿಲ್ಲ. ಕ್ಷಣಮಾತ್ರ ನಾನು ಎಚ್ಚರದಪ್ಪಿದ್ದೆ ನನ್ನ ಈ ಘಟನೆಯ ವರ್ಣನೆಯನ್ನು ಕೇಳಿ ಯಾರಾ ದರೂ ಸಂದೇಹಪಟ್ಟರೆ ಅವರ ಆ ಸಂದೇಹವನ್ನು ನಾ ಅಸ್ವೀಕಾರ ಮಾಡಲಿಕ್ಕಿಲ್ಲ ಎಚ್ಚರ ಬಂದ ಮೇಲೆ ನಾನು ನೋಡಿದೆ—ಹಡಗದ ಗರ್ಭದಲ್ಲಿ ಒಂದು ಕಡೆಗೆ ದೂರ ಒಂದು ಮೂಲೆಯಲ್ಲಿ ನಾನೊಬ್ಬನೇ ಇರುವೆ. ಕೆಳಗೆ ನೋಡಿದೆ—ಪ್ರತಿಯೊಬ್ಬರೂ ತಮ್ಮ ತಮ್ಮ ಸಾಮಾನುಗಳನ್ನು ಹತ್ತರ ಇಟ್ಟುಕೊಂಡು ನಿಶ್ಚಿಂತೆಯಿಂದ ಕುಳಿತುಕೊಂಡಿರುವರು ಮತ್ತು ತಮ್ಮ ಹತ್ತರ ಕುಳಿತವರ ಕೂಡ ಪರಿಚಯಮಾಡಿಕೊಳ್ಳುತ್ತಿರುವರು. ಇಷ್ಟು ಹೊತ್ತಾದ ಬಳಿಕ ಆ ನನ್ನ ಕೂಲಿಕಾರ ಬಂದು ನನ್ನನ್ನು ಭೇಟಿಯಾದ ಮತ್ತು ಅವನೆಂದ "ಟ್ರಂಕು ಮತ್ತು ಹಾಸುಗೆಯನ್ನು ಮೇಲೆ ಇಟ್ಟು ಬಂದಿರುವೆ. ತಾವು ಹೇಳಿದರೆ ಕೆಳಗೆ ತಂದು ಇಡುವೆ.''

"ಬೇಡ, ನನ್ನನ್ನೇ ಇಲ್ಲಿಂದ ಉದ್ಧಾರಮಾಡಿ, ಮೇಲೆ ಕರೆದುಕೊಂಡು ನಡೆ."

ಬೇರೊಬ್ಬರೊಡನೆ ಜಗಳಾಡದ ವಿನಾ, ಹಾಸುಗೆಯನ್ನು ಸರಿಸದ ವಿನಾ ಕಾಲಿಡುವುದಕ್ಕೆ ಕೂಡ ಸ್ಥಳ ಸಿಕ್ಕುವಂತಿರಲಿಲ್ಲ ಮಳೆ ಬಂದಾಗ್ಯೂ ಮೇಲೆ ಇದ್ದು ತೋಯಿಸಿಕೊಳ್ಳುವುದು ಒಳ್ಳೆಯದು, ಇಲ್ಲಿ ಒಂದರೆ ಕ್ಷಣವಾದರೂ ಇರುವುದು ಒಳ್ಳೆಯದಲ್ಲ ಎಂದು ಎನಿಸಿತು. ಹೆಚ್ಚು ಕೂಲಿ ದೊರೆಯುವದು ಎಂಬಾಸೆಯಿಂದ ಕೂಲಿಕಾರನು ಜನರ ಸಾಮಾನುಗಳನ್ನು ಸರಿಸುತ್ತ, ಹಾಸಿಗೆಯನ್ನು ಸುತ್ತುತ್ತ ಸ್ಥಳಮಾಡಿಕೊಳ್ಳುತ್ತ ಮೇಲ್ಗಡೆಗೆ ಕರೆದೊಯ್ದನು ಮತ್ತು ನನಗೆ ನನ್ನ ಸಾಮಾನುಗಳನ್ನು ತೋರಿಸಿ ಇನಾಮನ್ನೂ ಕೂಲಿಯನ್ನೂ ಪಡೆದುಕೊಂಡು ಹೊರಟುಹೋದನು. ಇಲ್ಲಿಯೂ ಅದೇ ಹಾಡು, ಹಾಸುಗೆ ಹಾಸಲಿಕ್ಕೆ ಕೂಡ ಸ್ಥಳವಿರಲಿಲ್ಲ ಆದುದರಿಂದ ನಿರುಪಾಯನಾಗಿ ನನ್ನ ಟ್ರಂಕಿನ ಮೇಲೆಯೆ ಏಕಾಂತ ಚಿತ್ತದಿಂದ ಕುಳಿತುಕೊಂಡು ಮಾತಾ ಭಾಗೀರಥಿಯ ಎರಡೂ ದಡಗಳ ಶೋಭೆಯನ್ನು ನೋಡತೊಡಗಿದೆ.

ಹಡಗು ಹೊರಟಿತು. ಆಗ ನನಗೆ ಬಹಳ ಬಾಯಾರಿಕೆಯಾಗಿದ್ದಿತು. ಈಗ ಸ್ವಲ್ಪ ಹೊತ್ತಿನ ಹಿಂದೆ ಎದ್ದ ಬಿರುಗಾಳಿಯಿಂದ ಯಾರ ಎದೆಯು ಒಣಗಲಿಕ್ಕಿಲ್ಲ? ಒಣಗದೆ ಇದ್ದ ಕಠಿನ ಹೃದಯವುಳ್ಳವರು ಈ ಜಗತ್ತಿನಲ್ಲಿ ಬಹಳ ಸ್ವಲ್ಪ ಜನರು ಇರುವರು ಆದರೆ ಒಂದು ತೊಂದರೆಯಾಯಿತು—ನನ್ನ ಜೊತೆಯಲ್ಲಿ ಒಂದು ಥಾಲಿಯೂ ಇದ್ದಿಲ್ಲ, ಒಂದು ತಂಬಿಗೆಯೂ ಇದ್ದಿಲ್ಲ ಈ ಪ್ರವಾಸವಲ್ಲಿ ಯಾರಾದರೂ ಬಂಗಾಲಿಗಳು ಇದ್ದರೆ ಒಳ್ಳೆಯದಾಗುವುದೆಂದು ನಾನು ಅವರನ್ನು ಹುಡುಕ ಹೊರಟೆ. ಕೆಳಗಿಳಿದು ಹಡಗದ ಗರ್ಭಸ್ಥಳಕ್ಕೆ ಹೋಗುತ್ತಲೆ ಒಂದು ಕೋಲಾಹಲವು ಕೇಳಿಸಿತು. ಆ ಕೋಲಾಹಲವು ಎಷ್ಟಿತ್ತು, ಹೇಗಿತ್ತು ಎಂಬುದಕ್ಕೆ ಉಪಮೆ ಕೊಡುವಷ್ಟು ಜ್ಞಾನ ನನ್ನಲ್ಲಿ ಇಲ್ಲ ಗೋಶಾಲೆಗೆ ಬೆಂಕಿ ಹಚ್ಚಿದರೆ ಆಗುವಷ್ಟು ಕೋಲಾಹಲವಾಯಿತೆಂದು ಹೇಳಬಹುದು; ಆದರೆ ಅದಕ್ಕೆಷ್ಟು ದೊಡ್ಡ ಗೋಶಾಲೆ ಬೇಕೊ ಅಷ್ಟು ದೊಡ್ಡ ಗೋಶಾಲೆ ಮಹಾಭಾರತದ ಕಾಲದಲ್ಲಿ ವಿರಾಟರಾಜನ ಹತ್ತರ ಇದ್ದಿರಬಹುದು; ಆದರೆ ಈ ಕಲಿಯುಗದಲ್ಲಿ ಅಷ್ಟುದೊಡ್ಡ ಗೋಶಾಲೆಯು ಯಾರ ಬಳಿಯಲ್ಲಾದರೂ ಇರಬಹುದು ಎಂದು ಕಲ್ಪನೆ ಮಾಡುವುದೂ ಕಠಿನವೇ

ಭಯಭೀತನಾಗಿ ನಾನು ಒಂದೆರಡು ಮೆಟ್ಟಲನ್ನು ಇಳಿದು ನೋಡಿದೆ ಎಲ್ಲ ಯಾತ್ರಿಕರು ತಮ್ಮ ತಮ್ಮ ಜಾತೀಯ (National) ಸಂಗೀತವನ್ನು

ಪ್ರಾರಂಭಿಸಿದ್ದರು. ಕಾಬುಲದಿಂದ ಬ್ರಹ್ಮಪುತ್ರದ ವರೆಗೆ, ಕನ್ಯಾಕುಮಾರಿಯಿಂದ ಚೀನದ ಸೀಮಾಂತದ ವರೆಗೆ ಎಷ್ಟು ಸುರಬ್ರಹ್ಮರು ಇರುವರೊ ಅವರೆಲ್ಲರ ನಾನಾ ವಾದ್ಯಗಳೊಡನೆ ಸಂಗೀತ ಸಮಾರಂಭವು ಈ ಹಡಗದ ಆವೃತ್ತ ಗರ್ಭದಲ್ಲಿ ನಡೆದಿತ್ತು! ಇಂತಹ ಮಹಾಸಂಗೀತ ಕಚೇರಿಯನ್ನು ಏರ್ಪಡಿಸುವ ಸಾಹಸವು ಯಾರಿಗಿದೆ! ಸಂಗೀತವು ಲಲಿತ ಕಲೆಗಳಲ್ಲಿ ಒಂದು ಎಂಬುದನ್ನು ನಾನು ಅಲ್ಲಿ ನಿಂತುಕೊಂಡೇ ಆದರದಿಂದ ಒಪ್ಪಿಕೊಂಡೆ ಆದರೆ, ಅಲ್ಲಿ ಇಷ್ಟು ಸಂಗೀತ ವಿಶಾರದರು ಹೇಗೆ ಒಟ್ಟು ಸೇರಿದರೆಂಬುದೇ ಮಹಾವಿಸ್ಮಯದ ಸಂಗತಿ!

ನಾನು ಕೆಳಗೆ ಇಳಿಯಬೇಕೋ ಬಾರದೋ ಎಂಬುದನ್ನು ನಿಶ್ಚಯಿಸದಾದೆ ಇಂಗ್ಲೀಷರ ಮಹಾ ಕವಿಯಾದ ಶೆಕ್ಸಪಿಯರನು ಸಂಗೀತದಿಂದ ಮುಗ್ಧನಾಗದ ಮನುಷ್ಯನು ಕೊಲೆಯನ್ನು ಕೂಡ ಮಾಡಬಲ್ಲನೆಂದು ಹೇಳಿರುವನು ಎಂಬ ಮಾತನ್ನು ಕೇಳಿರುವೆ ಆದರೆ, ಕ್ಷಣಮಾತ್ರವಾದರೂ ಇಲ್ಲಿಯ ಇಂತಹ ಸಂಗೀತವನ್ನು ಕೇಳುವ ಮನುಷ್ಯನ ರಕ್ತವು ಹೆಪ್ಪುಗಟ್ಟುವದೆಂಬ ಸಂಗತಿಯು ಬಹುಶಃ ಆ ಮಹಾಕವಿಗೆ ಗೊತ್ತಿರಲಿಕ್ಕಿಲ್ಲ ಹಡಗದ ಗರ್ಭಸ್ಥಳವು ವೀಣಾಪಾಣಿಯ ಪೀಠಸ್ಥಾನವಾಗಿರುವುದೊ ಇಲ್ಲವೊ ಎಂಬುದನ್ನು ನಾನು ಅರಿಯೆ. ಅದು ಆಗಿರದಿದ್ದರೆ ಕಾಬೂಲಿ ಜನರೂ ಹಾಡಬಲ್ಲರೆಂಬುದನ್ನು ಯಾರು ತಿಳಿಯಲು ಸಮರ್ಥರಾಗುತ್ತಿದ್ದರು?

ಒಂದು ಕಡೆಗೆ ಈ ಸಂಗೀತ ಕಚೇರಿಯ ಅದ್ಭುತ ಕಾಂಡವು ನಡೆದಿದ್ದಿತು. ಇನ್ನೊಂದು ಕಡೆಗೆ ಒರ್ವ ಕೈ ಅಲುಗಾಡಿಸುತ್ತ ನನ್ನ ದೃಷ್ಟಿಯನ್ನು ಆಕರ್ಷಿಸಲು ಯತ್ನಿಸುತ್ತಿದ್ದ ನಾನು ಎಲ್ಲರ ಕೆಂಗಣ್ಣುಗಳ ನೋಟವನ್ನು ಸಹಿಸುತ್ತ ಆ ಮನುಷ್ಯನ ಬಳಿಗೆ ಹೋದೆ ನಾನು ಬ್ರಾಹ್ಮಣನೆಂದು ತಿಳಿದು ಅವನು ಕೈಜೋಡಿಸಿ ನಮಸ್ಕರಿಸಿದ ಅಲ್ಲದೆ ಅವನು ತಾನು ರಂಗೂನಿನ ವಿಖ್ಯಾತ ನಂದಮಿಸ್ತ್ರಿ ಇರುವೆನೆಂದು ತನ್ನ ಪರಿಚಯ ಮಾಡಿಕೊಟ್ಟನು ಬಳಿಯಲ್ಲಿದ್ದ ಯೌವನವಿಳಿದ ಒಬ್ಬ ದಪ್ಪ ಹೆಂಗಸು ನನ್ನನ್ನು ಒಂದೇ ಸವನೆ ನೋಡುತ್ತಿದ್ದಳು ನಾನು ಆಕೆಯ ಮೊಗದ ಕಡೆಗೆ ನೋಡಿ ದಿಙ್ಮೂಢನಾದೆ ನಾನು ಆಕೆಯಷ್ಟು ದೊಡ್ಡ ಕಣ್ಣುಗಳನ್ನೂ ಒಂದು-ಗೂಡಿನ ದಪ್ಪ ಹುಬ್ಬುಗಳನ್ನೂ ಎಂದೂ ನೋಡಿರಲಿಲ್ಲ.

ನಂದಮಿಶ್ರಿಯು ಆಕೆಯ ಪರಿಚಯವನ್ನು ಮಾಡಿಕೊಡುತ್ತಾ "ಬಾಬೂಜೀ, ಈಕೆಯು ನನ್ನ ಮನೆಯಾ—" ಎಂದ

ಮಾತು ಮುಗಿಯುವ ಮೊದಲೇ ಆಕೆಯು ಗರ್ಜಿಸಿ 'ಮನೆಯಾಕೆ?' ಇವರು ನನ್ನ ಏಳು ಜನ್ಮಗಳ ಪತಿಯಾಗಿದ್ದಂತೆ ಹೇಳುವರು "ಮನೆಯಾಕೆ ? ಎಂದು ಹುಷಾರಿ, ಮಿಶ್ರೀ, ನೀನು ಈ ರೀತಿ ನನ್ನ ಹೆಸರಿಗೆ ಕಲಂಕ ತಂದರೆ ಸುಳ್ಳು ಸಟೆಯಾಡಿ ನನ್ನ ಅವಮಾನ ಮಾಡಿದರೆ-" ಎಂದಳು

ನಾನು ಆಶ್ಚರಿಯಿಂದ ಬುದ್ಧಿಶೂನ್ಯನಾದೆ.

ನಂದ ಮಿಶ್ರಿಯು ಅಪ್ರತಿಭಯುಳ್ಳವನಾಗಿ "ಓಹೋ, ಸಿಟ್ಟಾಗುವಿಯೇಕೆ ಟಗರ್ ? ಮನೆಯಾಕೆ ಎಂದು ಯಾರಿಗೆ ಹೇಳುವರು ? ಇಪ್ಪತ್ತು ವರ್ಷ—' ಎಂದ

ಟಗರ್ ಕಿಡಿಕಿಡಿಯಾಗಿ "ಇಪ್ಪತ್ತು ವರ್ಷಗಳಾಗಿದ್ದರೆ ಏನಾಯಿತು? ದುರ್ಭಾಗ್ಯ ! ಜಾತಿಯಿಂದ ವೈಷ್ಣವಳಾಗಿ ನಾನು ಈಗ ಅಂಬಿಗರಾಕೆಯೆಂದು ಹೇಳಿಸಿಕೊಳ್ಳಲಾ? ಹೇಗೆ? ಯಾವ ರೀತಿ? ನಾನು ಇಪ್ಪತ್ತು ವರ್ಷಗಳಿಂದ ನಿನ್ನ ಮನೆಯಲ್ಲಿ ಇರುವುದೇನೊ ನಿಜ, ಆದರೆ, ಒಂದು ದಿನವಾದರೂ ನಿನಗೆ ಅಡುಗೆ ಮನೆಯಲ್ಲಿ ಬರಗೊಟ್ಟಿರುವೆನೇನು ? ಈ ಮಾತನ್ನು ಯಾರೂ ಹೇಳರು! ಟಗರ್ ವೈಷ್ಣವಿಯು ಸಾಯುವಳು, ಆದರೆ ಜಾತಿಯನ್ನು ಕಳೆದು ಕೊಳ್ಳುವುದಿಲ್ಲ ಎಂಬುದನ್ನು ಬಲ್ಲೆಯಾ?''ಎಂದಳು ಜಾತಿಯಿಂದ ವೈಷ್ಣವಳಾದ ಟಗರಳು ಜಾತಿಯ ಅಭಿಮಾನದಿಂದ ತನ್ನ ಫುಟ್‌ಬಾಲಿನಂತಹ ಕಣ್ಣುಗಳನ್ನು ತಿರುಗಿಸುತ್ತ ನನ್ನ ಕಡೆಗೆ ನೋಡತೊಡಗಿದಳು.

ನಂದ ಮಿಶ್ರಿಯು ನಾಚಿಗೊಂಡು ಆಗಾಗ್ಗೆ ಹೇಳತೊಡಗಿದ "ನೋಡಿದಿರಾ ಬಾಬೂಜೀ ? ಇನ್ನೂ ಈಕೆಗೆ ಜಾತಿಯ ಗರ್ವ ಇದೆ ! ನೋಡಿದಿರಾ ತಾವು! ನಾನೆಂದೇ ಇದು ವರೆಗೆ ಸಹಿಸುತ್ತ ಬಂದಿರುವೆ, ಮತ್ತಾರಾದರೂ ಆಗಿದ್ದರೆ—." ಇಪ್ಪತ್ತು ವರ್ಷದಿಂದ ಮನೆಯಾಕೆಯಾಗಿದ್ದವಳ ಕಡೆಗೆ ನೋಡಿ ಮಾತನ್ನು ಅಷ್ಟಕ್ಕೇ ನಿಲ್ಲಿಸಿಬಿಟ್ಟ

ನಾನು ಮತ್ತೇನನ್ನೂ ಮಾತನಾಡಲಿಲ್ಲ ಅವನಿಂದ ಒಂದು ಬಟ್ಟಲನ್ನು ಇಸಕೊಂಡು ಹೊರಟುಹೋದೆ. ಮೇಲೆ ಹೋದ ಬಳಿಕ ನನಗೆ ವೈಷ್ಣವಿಯ ನುಡಿಗಳು ನೆನಪಿಗೆ ಬಂದುವು, ನಗೆಯನ್ನು ತಡೆಯಲಿಕ್ಕೆ ಆಗಲೇ

ಇಲ್ಲ, ನನ್ನಷ್ಟಕ್ಕೆ ನಾನೇ ನಕ್ಕೆ. ಬಳಿಕ ನಾನು ಯೋಚಿಸಿದೆ— ಅಶಿಕ್ಷಿತ ಹೆಂಗಸು, ಆದರೆ ಪಟ್ಟಣಗಳಲ್ಲಿಯೂ ಈ ರೀತಿ ಮಾತನಾಡುವ ಮತ್ತು ಹಾಸ್ಯಾಸ್ಪದ ಕಾರ್ಯಮಾಡುವ ಜನರು ಇಲ್ಲವೆ? ಕೇವಲ ಊಟವನ್ನು ಮುಟ್ಟಿಸಿಕೊಳ್ಳದೆ ಇದ್ದರೆ ತಾವು ಪವಿತ್ರರಾಗಿದ್ದೇವೆಂದು ತಿಳಿಯುವ ಜನರು ಇಲ್ಲವೆ? ಈ ದೇಶದ ಗಂಡಸರನ್ನು ನೋಡಿ ನಗೆ ಬರುವದಿಲ್ಲ, ಆದರೆ ನಗೆ ಬರುತ್ತಿದೆ ಇಂಥ ಹೆಂಗಸರನ್ನು ನೋಡಿ.

ಈ ದಿನ ಮಧ್ಯಾಹ್ನದಿಂದಲೇ ಸ್ವಲ್ಪ ಸ್ವಲ್ಪ ಮೋಡಗಳು ಆಗಸದಲ್ಲಿ ಮೂಡುತ್ತಿದ್ದವು ರಾತ್ರಿ ಒಂದು ಗಂಟೆಗೆ ಸ್ವಲ್ಪ ಸಾಧಾರಣ ಮಳೆಯಾ ಯಿತು ಗಾಳಿಯೂ ಬೀಸಿತು, ಅದರಿಂದ ಹಡಗ ಸ್ವಲ್ಪ ಅಗಳಾಡಿತು. ಮರು ದಿನ ಅದು ಪುನಃ ಶಾಂತಿಯಿಂದ ಮುಂದೆ ಸಾಗತೊಡಗಿತು. ಸಮುದ್ರದ ಜಡ್ಡು ಕಾರಿಕೊಳ್ಳುವುದು-ಅದು ನನಗೆ ಬರಲಿಲ್ಲ; ಬಾಲ್ಯದಲ್ಲಿಯೇ ಅದು ಬಂದು ಹೋಗಿದ್ದಿತು. ಆದರೆ ನಂದ ಮಿಶ್ರಿಯ ಪರಿವಾರವು ರಾತ್ರಿಯನ್ನು ಹೇಗೆ ಕಳೆಯಿತು, ಅದು ಯಾವ ಸಂಕಟಕ್ಕೆ ಒಳಗಾಗಿದ್ದಿತು ಎಂಬುದನ್ನು ಅರಿ ಯಲು ನಾನು ಕೆಳಗೆ ಹೋದೆ ನಿನ್ನೆ ಹಾಡಿದ ಗಾಯಕರಲ್ಲಿ ಬಹಳ ಜನರು ನಿದ್ರೆಯಲ್ಲಿದ್ದರು ನಿನ್ನೆ ರಾತ್ರಿಯ ಉತ್ಪಾತದ ಕಾರಣವಾಗಿ ಅವರು ಮಹಾ ಸಂಗೀತದ ಕಾರ್ಯಕ್ರಮಕ್ಕೆ ಸಿದ್ಧರಾಗಿಲ್ಲ ಎಂಬುದನ್ನು ಅರಿತೆ ನಂದ ಮಿಶ್ರೀ ಮತ್ತು ಅವನೊಡನೆ ಇಪ್ಪತ್ತು ವರುಷ ಬಾಳ್ವೆಮಾಡಿದ ಮನೆಯಾಕೆ ಇಬ್ಬರೂ ಗಂಭೀರವಾಗಿ ಕುಳಿತಿದ್ದರು ನನ್ನನ್ನು ನೋಡಿ ಅವರು ನಮಸ್ಕರಿಸಿದರು. ಅವರ ಮುಖ ನೋಡಿದ ಕೂಡಲೆ ಸ್ವಲ್ಪ ಹೊತ್ತಿನ ಹಿಂದೆ ಕಲಹವಾಗಿದೆ ಯೆಂದು ನನಗೆನಿಸಿತು' ನಾನು ವಿಚಾರಿಸಿದೆ.

''ನಿನ್ನೆ ರಾತ್ರಿಯನ್ನು ಹೇಗೆ ಕಳೆದಿರಿ ಮಿಶ್ರಿಯವರೆ?''

''ಚೆನ್ನಾಗಿದ್ದೆವು.''

''ಚೆನ್ನಾಗಿದ್ದೆವು! ಅಮ್ಮಮ್ಮ, ಎಂತಹ ಅದ್ಭುತ ಕಾಂಡವಾಯಿತು ನಿನ್ನೆ ರಾತ್ರಿ!''

ನಾನು ಉದ್ವಿಗ್ನತೆಯಿಂದ ''ಯಾವ ಕಾಂಡ?'' ಎಂದೆ.

ನಂದ ಮಿಶ್ರಿಯು ನನ್ನ ಕಡೆಗೆ ನೋಡಿದ, ಆಕಳಿಸಿದ, ಚುಟಿಕೆಯನ್ನು ಬಾರಿಸಿದ. ಬಳಿಕ ''ಕಾಂಡ ಅಂತಹ ಅದ್ಭುತವೇನೂ ಇರಲಿಲ್ಲ ಬಾಬೂಜೀ,

ಕಲಕತ್ತೆಯ ಕೂಟಗಳಲ್ಲಿ ಮೂವತ್ತೆರಡೂ ಬಗೆಯ ಕಡಲೆಪುರಿ ಮಾರುತ್ತ ತಿರುಗುವ ಯಾವನನ್ನಾದರೂ ತಾವು ನೋಡಿರುವಿರಾ ಬಾಬೂಜೀ? ನೋಡಿದ್ದರೆ ನಮ್ಮ ಸ್ಥಿತಿಯ ಪರಿಚಯ ತಮಗೆ ಚೆನ್ನಾಗಿ ಆಗುವುದು. ಯಾವ ರೀತಿಯಾಗಿ ಅವನು ತನ್ನ ಹೆಬ್ಬೆರಳಿನ ಜೊತೆಗಿನ ಬೆರಳುಗಳಿಂದ ಚಟ್ಟನೆ ಹೊಯ್ದು ಹುರಿದ ಕಡಲೆ, ಬೇಳೆ, ಬಟಾಣಿ, ಶೇಂಗಾ, ಅವರೆ ಕಾಳುಗಳನ್ನು ಕೂಡಿಸುವನೊ ಹಾಗೆಯೇ ನಾವೂ ದೇವರ ಕೃಪೆಯಿಂದ ಒಟ್ಟುಗೂಡಿದ್ವು— ಈಗಲೇ ಸ್ವಲ್ಪ ಹೊತ್ತಿನ ಹಿಂದೆ ಎಲ್ಲರೂ ತಮ್ಮ ತಮ್ಮ ಒಟ್ಟುಗಳನ್ನು ಗುರುತಿಸಿಕೊಂಡು ತಮ್ಮ ತಮ್ಮ ಸ್ಥಳಗಳಲ್ಲಿ ಕುಳಿತರು" ಎಂದು ಟಗರಳ ಕಡೆಗೆ ನೋಡಿ "ಬಾಬೂಜೀ, ನಿಜವಾದ ಪ್ರಶ್ನೆ ಬಿಚ್ಚಿ ಹೇಳಬೇಕಾಗುವುದಿಲ್ಲ, ಇಲ್ಲದಿದ್ದರೆ ನನ್ನ ಟಗರ್— ಎಂದ. ಕೆರಳಿದ ಕರಡಿಯಂತೆ ಟಗರ್ ಗರ್ಜಿಸಿದಳು "ಈಗ ಪುನಃ ಸುರುವು ಮಾಡಿರಾ!"

" ಇಲ್ಲ, ಹೋಗಲಿ ಬಿಡು "ಎಂದು ನಂದಮಿಸ್ತ್ರಿ ಉದಾಸೀನತೆಯಿಂದ ಬೇರೊಂದು ಕಡೆಗೆ ನೋಡುತ್ತ ಸುಮ್ಮಗೆ ಕುಳಿತ.

ಅಲ್ಲಿ ಕಾಬೂಲೀ ದಂಪತಿಗಳು ಇದ್ದರು. ಅವರೆಂದರೆ ಅಸ್ವಚ್ಛತೆಯ ಅವತಾರಗಳು. ಇಡಿ ಪೃಥ್ವಿಯ ಹೊಲಸನ್ನೆಲ್ಲ ಅಡಿಯಿಂದ ಮುಡಿಯವರೆಗೆ ಹೊತ್ತುಕೊಂಡು ಅತ್ಯಂತ ಆನಂದದಿಂದ ರೊಟ್ಟಿಯನ್ನು ತಿನ್ನುತ್ತಿದ್ದರು. ಕೋಪಗೊಂಡ ಟಗರ್ ತನ್ನ ಕಿಡಿಗಣ್ಣುಗಳಿಂದ ಅವರ ಕಡೆಗೆ ಒಂದೇಸವನೆ ನೋಡುತ್ತಿದ್ದಳು. ನಂದ ತನ್ನ ಮನೆಯಾಕೆಗೆ " ಹಾಗಾದರೆ, ಈ ದಿನ ಊಟಗೀಟ ಏನೂ ಇಲ್ಲವೇನೇ? " ಎಂದ.

" ಸಾವು ಎಂದು ಯಾವುದಕ್ಕೆ ಹೇಳುವರು! ಆಗುವುದಿಲ್ಲೇಕೆ?"

ನನಗೆ ಸಂಗತಿಯು ತಿಳಿಯಲಿಲ್ಲ. ನಾನೇ " ಇನ್ನೂ ಹೊತ್ತಾಗಿಲ್ಲ. ಸ್ವಲ್ಪ ಹೊತ್ತು ಏರಿದ ಬಳಿಕ—" ಎಂದೆ.

ನಂದ ನನ್ನ ಮುಖದ ಕಡೆಗೆ ನೋಡಿ " ಕಲಕತ್ತೆಯಿಂದ ಒಂದು ಪಾತ್ರೆಯಲ್ಲಿ ಉತ್ತಮ ರಸಗುಲ್ಲಾ * ತಂದಿದ್ದೆ. ಹಡಗನ್ನು ಹತ್ತುವ ತನಕ 'ಟಗರ್ ಅವನ್ನು ತಿನ್ನೋಣ ಬಾ, ಆತ್ಮಾಕ್ಕೆ ಕಷ್ಟಕೊಡಬಾರದು' ಎಂದೆ.

* ಒಂದು ಬಗೆಯ ರುಚಿಕರವಾದ ಮಿಠಾಯಿ. ಬಂಗಾಲಿಗಳಿಗೂ ಉತ್ತರ ಭಾರತೀಯರಿಗೂ ಇದು ಬಹಳ ಇಷ್ಟ.

'ನಾನು ರಂಗೂನಿಗೆ ಒಯ್ಯುವೆ' ಎಂದು ಹೇಳಿದಳು. 'ತೆಗೆದುಕೊಂಡು ಹೋಗು ರಂಗೂನಿಗೆ, ಏನನ್ನು ತೆಗೆದುಕೊಂಡು ಹೋಗುವೆ! ಎಂದೆ." ಎಂದ.

ಟಗರಳು ಈ ಅಪವಾದವನ್ನು ಹೋಗಲಾಡಿಸದೆ ನನ್ನ ಕಡೆಗೊಮ್ಮೆ ನೋಡಿ ಪುನಃ ಆ ದುರದೃಷ್ಟರಾದ ಕಾಬೂಲಿಗಳ ಕಡೆಗೆ ತನ್ನ ಕಿಡಿನೋಟ ವನ್ನು ಹೊರಳಿಸಿದಳು

ನಾನು ಮೆಲ್ಲಗೆ ಕೇಳಿದೆ "ರಸಗುಲ್ಲಾ ಏನಾದುವು?"

ನಂದ ಟಗರಳನ್ನು ಉದ್ದೇಶಿಸಿ ಆಕೆಯ ಕಡೆಗೆ ಕಟಾಕ್ಷವನ್ನು ಬೀರುತ್ತ "ಏನಾದುವೊ ಹೇಳಲಾರೆ. ಅಗೋ ನೋಡಿರಿ-ಪಾತ್ರೆ ಒಡೆದು ಹೋಗಿದೆ, ರಸವು ಕೆಳಗೆ ಬಿದ್ದು ಹರಿದಾಡುತ್ತಿದೆ ಇದಕ್ಕಿಂತ ಹೆಚ್ಚಿನ ವಿಷಯ ಬೇಕಾಗಿದ್ದರೆ ಆಕೆಯನ್ನೇ ಕೇಳಿರಿ" ಎಂದು ಆ ಕಾಬೂಲಿಗಳ ಕಡೆಗೆ ನೋಡ ತೊಡಗಿದ.

ನಾನು ನಗುವನ್ನು ಬಿಗಿಹಿಡಿಯುತ್ತ ಕೆಳಗೆ ಮುಖಮಾಡಿಕೊಂಡು "ಹೋಗಲಿ ಬಿಡು, ಹತ್ತಿರ ಅವಲಕ್ಕಿಯಂತೂ ಇವೆ!" ಎಂದೆ

"ಅವೂ ಇಲ್ಲವೇನೊ. ಅವನ್ನು ಬಾಬೂಜಿಯವರಿಗೆ ತೋರಿಸು ಟಗರ್!"

ಒಂದು ಚಿಕ್ಕ ಬುಟ್ಟಿಯನ್ನು ಕಾಲಿಂದ ನೂಕುತ್ತ "ನೀನೆ ತೋರಿಸಲ್ಲ ಅವರಿಗೆ?" ಎಂದಳು ಟಗರ್.

"ನೀವು ಏನೇ ಹೇಳಿರಿ, ಕಾಬೂಲೀ ಜನರು ಕೃತಘ್ನರಲ್ಲ ಈ ಜನರು ರಸಗುಲ್ಲಾ ತಿಂದಂತೆ ತಮ್ಮ ದೇಶದ ದಪ್ಪವಾದ ರೊಟ್ಟಿಗಳನ್ನೊ ಕಟ್ಟಿಕೊಡುವರು—ಒಗೆಯ ಬೇಡ ಟಗರ್, ನನ್ನ ದೇವರ ನೈವೇದ್ಯಕ್ಕೆ ಬರುವುವು."

ನಂದನ ಈ ಪರಿಹಾಸದಿಂದ ನಾನು ಗಟ್ಟಿಯಾಗಿ ನಕ್ಕು ಬಿಟ್ಟೆ. ಸ್ವಲ್ಪೇ ನಿಮಿಷಗಳಲ್ಲಿ ಟಗರಳ ಮುಖದಕಡೆಗೆ ನೋಡಿ ಅಂಜಿದೆ. ಕ್ರೋಧದಿಂದ ಆಕೆಯ ಮುಖ ಕಪ್ಪಾಗಿ ಹೋಗಿತ್ತು. ವಜ್ರಧ್ವನಿಯಿಂದ ಹಡಗದಲ್ಲಿ ಕುಳಿತವರೆಲ್ಲರ ಲಕ್ಷ್ಯವನ್ನು ತನ್ನ ಕಡೆಗೆ ಸೆಳೆದುಕೊಂಡು "ಜಾತಿಯನ್ನು ಕೂಡ ತಿಳಿದುಕೊಳ್ಳಲಿಲ್ಲ ಮಿಶ್ರೀ, ಒಳ್ಳೇದಾಗಲಿಕ್ಕಿಲ್ಲ ನೋಡು—" ಎಂದಳು.

ಆಕೆಯು ಕೂಗಿನಿಂದ ಎಲ್ಲರೂ ಆಕೆಯು ಕಡೆಗೆ ನೋಡಿದರು ಅದರಿಂದಾಗಿ ನಂದನ ಮುಖವು ಚಿಕ್ಕದಾಯಿತು ಟಗರಗಳ ಸ್ವಭಾವ ಅವನಿಗೆ ಚೆನ್ನಾಗಿ ಗೊತ್ತಿತ್ತು, ತಾನು ಮಾಡಿದ ತಮಾಷೆಯಿಂದ ಹುಟ್ಟಿದ ಈ ಕಾಂಡವನ್ನು ಅವನು ಹೇಗಾದರೂ ಶಾಂತಮಾಡಬೇಕಾಗಿತ್ತು, ಅದರಲ್ಲಿಯೆ ಅವನ ಕ್ಷೇಮವಿತ್ತು ನಾಚಿಕೆಯಿಂದ ಅವನು ಒಮ್ಮೆಲೆ ಎಂದ "ನನ್ನಾಣೆ ಟಗರ್, ಕೋಪಿಸಬೇಡ ನಾನು ಕೇವಲ ತಮಾಷೆಮಾಡುತ್ತಿದ್ದೆ"

ಈ ಮಾತನ್ನು ಟಗರಳು ಕೇಳಲೇ ಇಲ್ಲ ಕಣ್ಣುಗುಡ್ಡೆಗಳನ್ನು ಒಂದು ಬಾರಿ ಎಡಕ್ಕೆ ಒಂದು ಬಾರಿ ಬಲಕ್ಕೆ ಹೊರಳಿಸಿ ದನಿಯನ್ನು ಇನ್ನೊಂದು ಮಟ್ಟಕ್ಕೆ ಏರಿಸಿ "ತಮಾಷೆ ಏನು! ಜಾತಿಯು ವಿಷಯವನ್ನೆತ್ತಿ ತಮಾಷೆ ಮಾಡುವುದೆ! ಮುಸಲ್ಮಾನರಿಂದ ರೊಟ್ಟಿಮಾಡಿಸಿ ನೈವೇದ್ಯ ತೋರಿಸಬೇಕೆ ದೇವರಿಗೆ? ಅಂಬಿಗನ ಬಾಯಿಗೆ ಬೀಳಲಿ ಬೆಂಕಿ!— ನೀನೇ ಇಟ್ಟುಬಿಡು ಬೇಕಾದರೆ—ತಂದೆಗೆ ಇವುಗಳ ಪಿಂಡದಾನ ಕೊಟ್ಟುಬಿಡು!" ಎಂದಳು.

ಹುರಿಬಿಚ್ಚಿದ ಬಿಲ್ಲಿನಂತೆ ನಂದ ಚಟಕ್ಕನೆ ಎದ್ದುನಿಂತು ಮತ್ತು ಟಗರಳ ಜಡೆಯನ್ನು ಹಿಡಿದು "ಸುಡುಗಾಡ ಮೋರೆಯವಳೆ, ನೀನು ತಂದೆಯು ವರೆಗೂ ಹೋಗುತ್ತೀಯಾ!" ಎಂದ

ಟಗರಳು ತನ್ನ ಸೊಂಟದ ಬಟ್ಟೆಯನ್ನು ಸರಿಪಡಿಸಿಕೊಳ್ಳುತ್ತ ತೇಕುತ್ತ "ಸುಡುಗಾಡ ಮೊಗದವನೇ, ನೀನು ಜಾತಿಯು ವರೆಗೆ ಹೋಗುತ್ತೀಯಾ!" ಎಂದು ಕಿವಿಯು ವರೆಗೂ ಬಾಯಿತೆರೆದು ನಂದನ ಭುಜವನ್ನು ಕಚ್ಚಿಬಿಟ್ಟಳು ಕ್ಷಣಮಾತ್ರದಲ್ಲಿ ಟಗರ್ ವೈಷ್ಣವಿ ಮತ್ತು ನಂದ ಇಬ್ಬರ ನಡುವೆ ನಡೆದ ಯುದ್ಧವು ದ್ವಿತೀಯರಂಗಕ್ಕೆ ಮುಟ್ಟತೊಡಗಿತು ಜನರು ಬಂದು ಸುತ್ತು-ಗಟ್ಟಿ ನಿಂತರು; ಗದ್ದಲವಾಯಿತು. ಸಮುದ್ರದ ಜಡ್ಡನ್ನು ಮರೆತು ಹಿಂದು-ಸ್ತಾನೀ ಜನರು ಭಲೆ, ಭೇಷ್ ಎನ್ನತೊಡಗಿದರು, ಪಂಜಾಬಿಗಳು ಛಿ ಛಿ. ಎನ್ನಲಾರಂಭಿಸಿದರು, ಓರಿಸಾದವರು ಚಿಯರ್ ಚಿಯರ್ ಎನ್ನಲು ಮೊದಲು ಮಾಡಿದರು ಒಂದು ಬಗೆಯಿಂದ ಪೂರ್ಣ ಲಂಕಾಕಾಂಡವಾಯಿತು ನಾನು ದಾರಿಕಾಣದಾದೆ, ನನ್ನ ಮುಖ ಕಳೆಗುಂದಿತು. ಇಷ್ಟು ಚಿಕ್ಕ ಮಾತಿನ ಬಗ್ಗೆ ಇಷ್ಟು ದೊಡ್ಡ ನಿರ್ಲಜ್ಜತನದ ನಾಚು ಆಗುವುದೆಂಬುದನ್ನು ನಾನೆಂದಿಗೂ ಬಗೆದಿರಲಿಲ್ಲ. ಒಬ್ಬ ಬಂಗಾಲೀ ಹೆಣ್ಣು-ಗಂಡಿನಿಂದ ಇಷ್ಟು ಜನಗಳ

ಎದುರಿಗೆ ಈ ಕಾಂಡ ನಡೆದುದನ್ನು ನೋಡಿ ನನಗೆ ಅತ್ಯಂತ ನಾಚಿಕೆಯಾಯಿತು ಬಳಿಯಲ್ಲಿಯೆ ಒಬ್ಬ ಜಾನಪುರಿಯವನು ಅತ್ಯಂತ ಸಂತೋಷದಿಂದ ಕುಳಿತುಕೊಂಡು ಈ ತಮಾಷೆಯನ್ನು ನೋಡುತ್ತಿದ್ದ. ನನ್ನ ಕಡೆಗೆ ನೋಡಿ ಅವನೆಂದ "ಬಾಬೂಜೀ, ಬಂಗಾಲಿ ಹೆಂಗಸು ಬಹು ಚೆನ್ನಾಗಿ ಜಗಳಾಡಬಲ್ಲಳು! ಸ್ಥಳ ಬಿಟ್ಟು ಹಿಂದೆ ಸರಿದೇ ಇಲ್ಲ ನೋಡಿರಿ!"

ನಾನು ಕಣ್ಣೆತ್ತಿ ಅವನ ಕಡೆಗೆ ನೋಡಲಾರದವನಾದೆ. ಸುಮ್ಮಗೆ ಕುತ್ತಿಗೆಯನ್ನು ಬಾಗಿಸಿಕೊಂಡು ಗದ್ದಲವನ್ನು ಸೀಳುತ್ತ ಮೇಲಕ್ಕೆ ಓಡಿಹೋಗಿಬಿಟ್ಟೆನು.

— ೪ —

ಆ ದಿನ ಪುನಃ ನನಗೆ ಕೆಳಗೆ ಇಳಿದು ಹೋಗಲು ಮನಸ್ಸಾಗಲಿಲ್ಲ. ಆದುದರಿಂದ ಟಗರ್ ಮತ್ತು ನಂದನ ಜಗಳದ ಪರಿಣಾಮವೇನಾಯಿತು, ಸಂಧಿ ಪತ್ರದಲ್ಲಿ ಯಾವ ಯಾವ ಕರಾರುಗಳನ್ನು ಹಾಕಲಾಯಿತು ಎಂಬುದು ನನಗೆ ತಿಳಿಯಲಿಲ್ಲ ಆದರೆ ಏನೇ ಆಗಿರಲಿ, ವಿಪತ್ಕಾಲದಲ್ಲಿ ಆ ಸ್ಕ್ರ್ಯಾಪ್ ಆಫ್ ಪೇಪರ್ (ರದ್ದೀ ಕಾಗದ) ಯಾವುದಕ್ಕೂ ಉಪಯೋಗವಾಗುವುದಿಲ್ಲ ಎಂದು ನನಗೆ ತೋರಿತು. ಯಾವನಿಗೆ ಅದು ಬೇಕಾಗುವುದೋ ಆಗ ಅವನು ಅದನ್ನು ಹರಿದು ಚೆಲ್ಲುವನು ಮತ್ತು ಮತ್ತೊಬ್ಬರ ಚಕ್ರವ್ಯೂಹ ಭೇದವನ್ನು ಮಾಡುವನು ಇಪ್ಪತ್ತು ವರ್ಷಗಳಿಂದ ಇವರು ಇದನ್ನೇ ಮಾಡುತ್ತ ಬಂದಿರುವರು ಮತ್ತು ಇದೇ ರೀತಿಯಲ್ಲಿ ಇನ್ನೂ ಇಪ್ಪತ್ತು ವರ್ಷ ಮಾಡುತ್ತಿರಲಾರರು ಎಂದು ಸ್ವತಃ ಬ್ರಹ್ಮನಿಗೂ ಹೇಳಲಿಕ್ಕಾಗಲಿಕ್ಕಿಲ್ಲ.

ಇಡಿ ದಿನ ಆಕಾಶದಲ್ಲಿ ಮೋಡಗಳು ಅತ್ತಿಂದ ಇತ್ತ, ಇತ್ತಿಂದ ಅತ್ತ ಓಡಾಡುತ್ತಿದ್ದುವು ಆದರೆ ಈಗ ಸಾಯಂಕಾಲಕ್ಕೆ ಒಂದು ಕಾರ್ಮೋಡವು ಕ್ಷಿತಿಜದಿಂದ ತನ್ನ ತಲೆಯನ್ನು ಮೇಲಕ್ಕೆತ್ತ ತೊಡಗಿದ್ದಿತು. ಸಾಯಂಕಾಲವಾಗಿದ್ದಿತು.ಅಂಬಿಗರ ಮುಖದ ಮೇಲೆ ಗಾಬರಿಯ ಲಕ್ಷಣಗಳು ಗೋಚರಿಸತೊಡಗಿದುವು. ಅವರ ನಡೆಯಲ್ಲಿಯೂ ಗಾಬರಿಯ ಚಿಹ್ನ ಕಾಣಲಾರಂಭಿಸಿರುವುದು. ಇದಕ್ಕೂ ಮೊದಲು ಅವರ ನಡೆಯಲ್ಲಿ, ಮುಖದಲ್ಲಿ ಗಾಬರಿಯ ಚಿಹ್ನವು ಇನಿತೂ ಇರಲಿಲ್ಲ.

ನಾನು ಒರ್ವ ಮುದುಕ ಅಂಬಿಗನನ್ನು ಕೇಳಿದೆ "ಚೌಧರಿಯವರೆ, ನಿನ್ನೆ ರಾತ್ರಿಯಂತೆ ಈದಿನ ರಾತ್ರಿಯೂ ಬಿರುಗಾಳಿ ಬೀಸುವುದೇನು?"

ನನ್ನ ವಿನಯದಿಂದ ಚೌಧರಿಯವರು ವಶೀಭೂತರಾದರು. ಅವರು ನಿಂತು "ಸ್ವಾಮೀ, ಕೆಳಗೆ ಹೋಗಿರಿ. ಸಾಯಕ್ಲೋನ್ (ಬಿರುಗಾಳಿ) ಏಳ ಬಹುದೆಂದು ಕಪ್ತಾನರು ಹೇಳಿರುವರು'' ಎಂದರು.

ಹದಿನೈದು ನಿಮಿಷಗಳಲ್ಲಿಯೆ ಅವನ ಹೇಳಿಕೆಯು ಸುಳ್ಳಾಗಿರಲಿಲ್ಲ ಎಂಬುದನ್ನು ಅರಿತೆ. ಮೇಲಿದ್ದ ಯಾತ್ರಿಕರನ್ನೆಲ್ಲ ಅಂಬಿಗರು ಬಲವಂತ ದಿಂದ ಕೆಳಗೆ ಇಳಿಸತೊಡಗಿದರು. ಅವರ ಮಾತಿಗೆ ಮೀರಿದವರನ್ನು ಸೆಕೆಂಡ ಆಫೀಸರನು ಬಂದು ಅವರಿಗೆ ಹೊಡೆದು ಕೆಳಗೆ ದಬ್ಬಿದನು ಮತ್ತು ಅವರ ಹಾಸುಗೆಗಳನ್ನು ಒದಿಕೆಗಳಿಂದ ಕೆಳಗೆ ಕಳಿಸಿದನು. ನನ್ನ ಟ್ರಂಕು ಮತ್ತು ಹಾಸುಗೆಗಳನ್ನು ಅಂಬಿಗರು ಕೂಡಲೆ ಎತ್ತಿಕೊಂಡು ಕೆಳಗೆ ಒಯ್ದರು. ಆದರೆ ನಾನು ಒಂದು ಕಡೆಗೆ ಸರಿದು ಮೇಲೆಯೇ ಉಳಿದುಕೊಂಡೆ. ಹತ್ತು ರೂಪಾಯಿಗಳಿಂತ ಹೆಚ್ಚು ರೂಪಾಯಿ ಕೊಟ್ಟು ಟಿಕೆಟು ತೆಗೆದುಕೊಳ್ಳ ಲಾರದ ಯಾತ್ರಿಕರನ್ನು ಹಡಗದ ಗರ್ಭಗೃಹದಲ್ಲಿ ಹಾಕಿ ಬಾಯಿ ಮುಚ್ಚುವ ರೆಂದು ನಾನು ಕೇಳಿದ್ದೆ ಯಾಕೆಂದರೆ ಅವರ ಕ್ಷೇಮಕ್ಕಾಗಿಯೂ ಹಡಗದ ಕ್ಷೇಮಕ್ಕಾಗಿಯೂ ಇದೊಂದೇ ಉಪಾಯವಿದ್ದಿತು.

ಆದರೆ ನನ್ನ ಕ್ಷೇಮದ ಬಗ್ಗೆ ಮಾಡಿಕೊಳ್ಳಬೇಕಾದ ವ್ಯವಸ್ಥೆಯು ನನ್ನ ಮನಸ್ಸಿಗೆ ಬರಲಿಲ್ಲ. ಇದಕ್ಕೂ ಪೂರ್ವದಲ್ಲಿ ಸಮುದ್ರದಲ್ಲಷ್ಟೇ ಏಕೆ ಭೂಮಿಯ ಮೇಲೆ ಸಹ ನಾನು ಸಾಯಕ್ಲೋನ್ ಎಂಬ ವಸ್ತುವನ್ನು ಕಂಡಿರಲಿಲ್ಲ. ಇದರ ಉಪದ್ರವ ಎಷ್ಟು, ಇದು ಎಷ್ಟರ ಮಟ್ಟಿಗೆ ಅಮಂಗಲವನ್ನು ಮಾಡಬಲ್ಲುದು, ಇದರ ಸ್ವರೂಪವು ಹೇಗಿರುವುದು, ಇದರ ಶಕ್ತಿ ಎಷ್ಟಿರುವುದು ಎಂಬುದನ್ನು ನಾನು ಇನಿತೂ ಅರಿತಿರಲಿಲ್ಲ ಇಂತಹ ವಸ್ತುವನ್ನು ನೋಡುವ ಸೌಭಾ ಗ್ಯವು ಇಷ್ಟು ನನ್ನ ಹತ್ತಿರ ಬಂದಿರುವಾಗ ಅದನ್ನು ನಾನು ನೋಡದೆ ಇರ ಬಾರದೆಂದು ಯೋಚಿಸಿದೆ. ಭಾಗ್ಯದಲ್ಲಿದ್ದಂತೆ ಆಗುವುದು ಬಿರುಗಾಳಿಗೆ ಸಿಕ್ಕು ಹಡಗವು ಮುಳುಗುವುದೇ ಇದ್ದ ಪಕ್ಷದಲ್ಲಿ ಅದರಲ್ಲಿ ಪ್ಲೇಗಿನ ಇಲಿಯಂತೆ ಪಂಜರದಲ್ಲಿ ಸಿಕ್ಕು ಚಿಂವು ಚಿಂವು ಎಂದು ಒದ್ದಾಡಿ ಸಾಯುವುದಕ್ಕಿಂತ ಸಾಧ್ಯವಿದ್ದಷ್ಟು ಮಟ್ಟಿಗೆ ಜಲರಾಸಿಯಲ್ಲಿ ಕೈಕಾಲು ಬಡೆದು, ತೆರೆಗಳಲ್ಲಿ ಜೋಕಾಲಿಯಾಡುತ್ತ ಒಂದು ಮುಗುಳು ಹಾಕಿ ಪಾತಾಳರಾಜನ ಅರ ಮನೆಯ ಅತಿಥಿಯಾಗುವುದು ಒಳಿತು ರಾಜನ ಹಡಗು ಲಕ್ಷಾಂತರಕೋಟ್ಯಾಂ ತರ ಹಿಂಸ್ರ ಅನುಚರರನ್ನು ಬಿಟ್ಟು ಹಿಂದಕ್ಕೂ ಮುಂದಕ್ಕೂ ಕಪ್ಪು ನೀರಲ್ಲಿ

ಒಂದು ಹೆಜ್ಜೆಯನ್ನು ಕೂಡ ಮುಂದಕ್ಕೆ ಇಡುವುದಿಲ್ಲ ಮತ್ತು ಆ ಹಿಂಸ್ರ ಅನುಚರರಿಗೆ ಮಾನವರ, ವ್ಯಾರಿಯನ್ನು ಮಾಡಲು ಕ್ಷಣಮಾತ್ರವಾದರೂ ತಗಲುವುದಿಲ್ಲ ಎಂಬುದನ್ನು ನಾನು ಅರಿತಿರಲಿಲ್ಲ.

ಬಹಳ ಹೊತ್ತಿನಿಂದ ಸ್ವಲ್ಪ ಸ್ವಲ್ಪ ಮಳೆಯಾಗುತ್ತಿದ್ದಿತು ದೀಪ ಹಚ್ಚುವ ಹೊತ್ತಿಗೆ ಮಳೆಯೂ ಹಾಗೂ ಗಾಳಿಯ ವೇಗವು ಹೆಚ್ಚಿತು ಓಡಿ ಹೋಗಲಿಕ್ಕೆ ಕೂಡ ಅವಕಾಶವುಳಿಯದಂತಾಯಿತು ಎಲ್ಲಾದರೂ ಸರಿಯೆ, ಒಂದು ಆಶ್ರಯ ಸ್ಥಾನವನ್ನು ಹಿಡಿದುಕೊಳ್ಳದಿದ್ದರೆ ಗತ್ಯಂತರವಿಲ್ಲದಾಯಿತು. ಸಾಯಂಕಾಲ, ಕತ್ತಲಲ್ಲಿ ನಾನು ಡೆಕ್ಕಿನ ಮೇಲೆ ಬಂದಾಗ ಅಲ್ಲಿ ಯಾರೂ ಇರಲಿಲ್ಲ [illegible] ನಾನು ಒಗ್ಗಿ ನೋಡಿದೆ ಕಪ್ತಾನನು ತನ್ನ ಕೈಯಲ್ಲಿ ದುರಬೀನನ್ನು ಹಿಡಿದುಕೊಂಡು ಬ್ರಿಜ್ಜದ ಮೇಲೆ ಅತ್ತಿಂದ ಇತ್ತ ಇತ್ತಿಂದ ಅತ್ತ ಓಡುತ್ತಿದ್ದ. ಇವನ ದೃಷ್ಟಿಗೆ ಬಿದ್ದು, ಏಟುಗಳನ್ನು ತಿನ್ನುತ್ತ ಕೆಳಗೆ ಹೋಗಬಾರದೆಂಬ ಉದ್ದೇಶದಿಂದ ನಾನು ಅವನಿಗೆ ಕಾಣದಂತೆ ಸ್ವಸ್ಥವಾಗಿ ಕುಳಿತುಕೊಳ್ಳಲು ಸ್ಥಳವನ್ನು ಹುಡುಕತೊಡಗಿದ ಹುಡುಕುವಾಗ ನನಗೆ ಒಂದು ಸ್ಥಳವೂ ಸಿಕ್ಕಿತು, ಇಂತಹ ಜಗವು ಸಿಕ್ಕಬಹುದೆಂದು ನಾನೆಂದೂ ಕಲ್ಪಿಸಿರಲಿಲ್ಲ ಒಂದು ಮೂಲೆಯಲ್ಲಿ ಅನೇಕ ಕುರಿಗಳ ಮತ್ತು ಬಾತು ಕೋಳಿಗಳ ಪಂಜರಗಳು ಒಂದರ ಮೇಲೊಂದು ಒಟ್ಟಲ್ಪಟ್ಟಿದ್ದವು ನಾನು ಜಿಗಿದು ಅವುಗಳ ಮೇಲೆ ಕುಳಿತೆ ಇಂತಹ ಆರಾಮಿನ ಸ್ಥಳವು ಹಡಗದಲ್ಲಿ ಎಲ್ಲಿಯೂ ಇರಲಿಕ್ಕಿಲ್ಲವೆಂದು ಎನಿಸಿತು ಆದರೆ, ಅಲ್ಲಿಯ ವರೆಗೆ ಇನ್ನೂ ಕೆಲವೊಂದು ಸಂಗತಿಗಳನ್ನು ಅರಿತುಕೊಳ್ಳಬೇಕಾದುದು ಉಳಿದಿದ್ದಿತು

ಮಳೆ, ಗಾಳಿ, ಕತ್ತಲು ಮತ್ತು ಹಡಗದ ಹೊಯ್ದಾಟ ಎಲ್ಲವೂ ಸಾವಕಾಶವಾಗಿ ಹೆಚ್ಚತೊಡಗಿದ್ದುವು ಸಮುದ್ರದ ತೆರೆಗಳ ಆಕಾರವನ್ನು ನೋಡಿ ಬಹುಶಃ ಇದೇ ಸಾಯುಕ್ಲೋನ ಇರಬಹುದೆಂದು ಮನದಲ್ಲಿ ಯೋಚಿಸಿದೆ. ಆದರೆ ಅದು ಸಮುದ್ರದ ಸಮೀಪದಲ್ಲಿ ಆಕಳ ಹೆಜ್ಜೆಯ ತಗ್ಗಿನಂತೆಯಿದ್ದಿತು. ಈ ಮಾತಿನ ಸತ್ಯಾಂಶವನ್ನು ಹೃದಯಂಗಮ ಮಾಡಿಕೊಳ್ಳಲು ನಾನೂ ಸ್ವಲ್ಪ ಹೊತ್ತು ತಡೆಯಬೇಕಾಯಿತು.

ಒಮ್ಮೆಗೆ ಎದೆಯಲ್ಲಿ ನಡುಕನ್ನು ಹುಟ್ಟಿಸುತ್ತ ಸೀಟಿಯು ಬಾರಿಸಿತು ಮೇಲೆ ನೋಡಿದೆ—ಆಕಾಶದ ಸ್ವರೂಪವೇ ಯಾವುದೋ ಮಂತ್ರ ಶಕ್ತಿಯಿಂದ ಬದಲಾದಂತೆ ತೋರಿತು. ಆ ಮೋಡಗಳು ಈಗಿರಲಿಲ್ಲ, ಆಕಾಶವು ಭಿನ್ನ

ವಿಚ್ಛಿನ್ನವಾಗಿ ಹಳಿದು ಮೇಲಕ್ಕೆ ಹಾರಿಹೋಗುತ್ತಿರುವುದೊ ಏನೋ ಎಂಬಂತೆ ಎನಿಸಿತು ಮರುಕ್ಷಣದಲ್ಲಿ ಸಮುದ್ರದಿಂದ ಒಂದು ಶಬ್ದವು ಎಲ್ಲಿಂದಲೊ ಎದ್ದು ಕಿವಿಯ ಮೇಲೆ ಬಿದ್ದಿತು ಆ ಶಬ್ದವನ್ನು ಏತಕ್ಕೆ ಹೋಲಿಸಿ ಹೇಳ ಬೇಕೆಂಬುದನ್ನು ನಾನರಿಯೆ

ಬಾಲ್ಯದಲ್ಲಿ ಅಜ್ಜಿಯ ಮಗ್ಗುಲಲ್ಲಿ ಮಲಗಿಕೊಂಡು ಒಂದು ಕತೆಯನ್ನು ನಾನು ಕೇಳುತ್ತಿದ್ದೆ— ಯಾವನೊ ರಾಜಪುತ್ರನು ಮುಳುಗಿ ತೆರೆಯೊಳಗಿಂದ ಒಂದು ಬೆಳ್ಳಿಯ ಡಬ್ಬಿಯನ್ನು ಹೊರಗೆ ತೆಗೆದಿದ್ದನಂತೆ. ಆದರಲ್ಲಿ ಮುಚ್ಚಿದ ಏಳು ನೂರು ರಾಕ್ಷಸಿಯರ ಪ್ರಾಣದಂತಿದ್ದ ಒಂದುಭ್ರಮರವನ್ನು ಒಂದು ಚುಟುಕಿಯಿಂದ ಕೊಂದಿದ್ದನಂತೆ. ಬಳಿಕ ಆ ಏಳುನೂರು ರಾಕ್ಷಸಿಯರು ಚೀರುತ್ತ ಒದರುತ್ತ ಪೃಥ್ವಿಯನ್ನು ತುಳಿಯುತ್ತ ಚೂರ್ಣ ಮಾಡುತ್ತ ಓಡಿ ಬಂದಿದ್ದರಂತೆ. ಅಂತಹುದೇ ಒಂದು ವಿಪ್ಲವವು ಆಗಲಿದೆಯೆಂದು ನನಗೆ ಎನಿಸಿತು ಆದರೆ ಈಗ ಆ ಏಳುನೂರು ರಾಕ್ಷಸಿಯರಿಲ್ಲ; ನೂರು ಕೋಟಿ ರಾಕ್ಷಸಿಯರು ಹೊರಟವರು, ಉನ್ಮತ್ತರಾಗಿ ಇತ್ತ ಓಡುತ್ತ ಬರುವರು ಎಂದು ಎನಿಸಿತು ಅವರು ಬಂದು ಬಿಟ್ಟರು — ರಾಕ್ಷಸಿಯರಲ್ಲ, ಬಿರುಗಾಳಿಯ ಅಲೆ ಗಳು. ನಾನೆಂದು ಕೊಂಡೆ— ಈ ಅಲೆಗಳಿಗಿಂತ ಆ ರಾಕ್ಷಸಿಯರೇ ಬಂದಿ ದ್ದರೆ ಚೆನ್ನಾಗಿತ್ತು ಎಂದು.

ಈ ದುರ್ಜಯ ವಾಯುವಿನ ಶಕ್ತಿಯನ್ನು ವರ್ಣಿಸುವುದು ದೂರದ ಮಾತು, ಸಮಸ್ತ ಚೈತನ್ಯದಿಂದ ಅನುಭವಿಸುವುದೂ ಮನುಷ್ಯನ ಸಾಮ ರ್ಥ್ಯದ ಹೊರಗಿನ ವಿಷಯ ಅದು ಸಂಪೂರ್ಣ ಜ್ಞಾನ ಬುದ್ಧಿಯನ್ನು ಕಳೆ ದುಕೊಂಡು ಒಂದೇ ಒಂದು ಧಾರಣೆಯು ನನ್ನ ಮನದಲ್ಲಿ ಅಸ್ಪಷ್ಟವಾಗಿಯೂ ನಿಸ್ಸಂದಿಗ್ಧವಾಗಿಯೂ ಜಾಗ್ರತವಾಗಿ ಉಳಿಯಿತು ಅದಾವುದೆಂದರೆ—ಜಗ ತ್ತಿನ ಆಯುಷ್ಯವು ಮುಗಿಯುವುದಕ್ಕೆ ಇನ್ನು ಎಷ್ಟು ಹೊತ್ತುಂಟು! ಬಳಿ ಯಲ್ಲಿ ಒಂದು ಕಬ್ಬಿಣದ ಗೂಟವಿದ್ದಿತು ನನ್ನ ಸೆಲ್ಲೆಯಿಂದ ನನ್ನನ್ನು ನಾನು ಅದಕ್ಕೆ ಬಿಗಿದು ಕಟ್ಟಿಕೊಂಡಿದ್ದೆ ಪ್ರತಿನಿಮಿಷವೂ ನನಗೆನಿಸುತ್ತಿ ದ್ದಿತು—ಇನ್ನು ಈ ಗಾಳಿಯು ನನ್ನನ್ನು ಈ ಕಟ್ಟಿನಿಂದ ಬಿಡಿಸಿ, ಹಾರಿಸಿ ಕೊಂಡು ಹೋಗಿ ಸಮುದ್ರದಲ್ಲಿ ಎತ್ತಿಹಾಕದೆ ಬಿಡದು.

ಕಪ್ಪು ನೀರು ಒಳಗೆ ಏಟುಗಳನ್ನು ತಿಂದು ಗರ್ಜಿಸುತ್ತ ಹಡಗದ ಮೇಲೆ ಕ್ರಮೇಣವಾಗಿ ಏರುತ್ತಬರುತ್ತಿರುವುದೊ ಏನೋ ಎಂಬಂತೆ ಎನಿಸ

ತೊಡಗಿತು. ದೂರದ ವರೆಗೆ ನೋಟವನ್ನು ಚೆಲ್ಲಿದೆ, ಆದರೆ ಆ ನೋಟ ಹಿಂತಿರುಗಿ ಬರದಾಯಿತು. ಒಂದು ಬೆಟ್ಟದಂತೆ ಒಂದು ವಸ್ತುವು ಕಾಣಿಸಿತು, ಆದರೆ ಕ್ಷಣ ಮಾತ್ರದಲ್ಲಿ ಮೋಹವು ದೂರಾಯಿತು ಆಗ ನಾನೆಂದೆ "ಪರಮಾತ್ಮಾ, ನೀನು ಈ ಎರಡು ಕಣ್ಣುಗಳನ್ನು ಕರುಣೆಯಿಂದ ಕೊಟ್ಟಿದ್ದೆ, ಈಗ ಇವು ಸಾರ್ಥಕವಾದವು! ಇಷ್ಟು ದಿವಸಗಳ ವರೆಗೆ ನಾನು ಈ ಪ್ರಪಂಚದಲ್ಲಿ ಕಣ್ಣುಗಳನ್ನು ತೆರೆದುಕೊಂಡೇ ಅಲೆದಾಡಿರುವೆನು. ಆದರೆ ನಿನ್ನ ಈ ಸೃಷ್ಟಿಗೆ ಸರಿಸಮಾನವಾದುದನ್ನು ನಾನೆಲ್ಲಿಯೂ ಕಾಣಲಿಲ್ಲ! ದೃಷ್ಟಿಯು ಕಾಣದಷ್ಟು ದೂರದಿಂದ ಒಂದು ಕಲ್ಪನಾತೀತ ಮಹಾಮೈಯ ಮಹಾತರಂಗವೊಂದು ತಲೆಯ ಮೇಲೆ ಬೆಳ್ಳಿಯಂತಹ ಬಿಳಿಯ ಕಿರೀಟವನ್ನು ಧರಿಸಿಕೊಂಡು ವೇಗದಿಂದ ಓಡುತ್ತಿರುವುದು ಜಗತ್ತಿನಲ್ಲಿ ಇದಕ್ಕೂ ವಿಸ್ಮಯಕರವಾದುದು ಬೇರೊಂದು ವಸ್ತುವು ಉಂಟೇನು?'

ಸಮುದ್ರ ಪರ್ಯಟನವನ್ನು ಎಷ್ಟೋ ಜನರು ಮಾಡುವರು. ನಾನೂ ಎಷ್ಟೋ ಬಾರಿ ಈ ಸಮುದ್ರ ಮಾರ್ಗದಿಂದ ಹೋಗಿರುವೆ, ಬಂದಿರುವೆ. ಆದರೆ ಇಂತಹ ದೃಶ್ಯವನ್ನು ನಾನು ನೋಡಲು ಎಂದೂ ನೋಡಿದ್ದಿಲ್ಲ ಈ ದೃಶ್ಯವನ್ನು ತನ್ನ ಕಣ್ಣಾರೆ ಕಾಣದ ಮನುಷ್ಯನಿಗೆ ನೀರಿನ ತೆರೆಯು ಎಷ್ಟು ದೊಡ್ಡದಾಗಬಲ್ಲದು ಎಂಬುದನ್ನು ತಿಳಿಸಿ ಹೇಳುವುದು ಕಲ್ಪನೆಯ ಅಪ್ಪನಿಗೂ ಸಾಧ್ಯವಿಲ್ಲ

ಮನದಲ್ಲಿಯೇ ಎಂದುಕೊಂಡೆ" ತರಂಗ ಚಕ್ರವರ್ತಿ! ನಿನ್ನ ಏಟಿನಿಂದ ನಮಗೇನಾಗುವುದೆಂಬುದನ್ನು ನಾವು ಬಲ್ಲೆವು, ಆದರೆ ನೀನು ಇನ್ನೂ ಇಲ್ಲಿಗೆ ಬರಲಿಕ್ಕೆ ಅರ್ಧ ನಿಮಿಷವಾದರೂ ಬೇಕು, ಅಲ್ಲಿಯ ತನಕ ನಾನ ನಿನ್ನ ಕಲೇವರವನ್ನು ಮನದಣಿಯಾಗಿ ಚೆನ್ನಾಗಿ ನೋಡುವೆ"

ಈ ಬಗೆಯ ಭಾವವು ಯಾವುದಾದರೂ ಒಂದು ವಸ್ತುವಿನ ಎತ್ತರವನ್ನಾಗಲಿ ಆಧಿಕ್ಯವನ್ನಾಗಲಿ, ವಿಸ್ತಾರವನ್ನಾಗಲಿ ನೋಡಿದರೆ ಬರುವುದಿಲ್ಲ. ಒಂದು ವೇಳೆ ಈ ಭಾವವು ಬರುವಂತಿದ್ದರೆ ಹಿಮಾಲಯದ ಯಾವುದಾದರೂ ಒಂದು ಭಾಗವನ್ನು ನೋಡಿದರಾಯಿತು ಆದರೆ, ಆ ಸಜೀವ ವಿರಾಟ್ ವ್ಯಾಪಾರವು ಎದುರಿಗೆ ಓಡಿ ಬರುತ್ತಿರುವುದು— ಅದರ ಅಪರಿಮೇಯ ಶಕ್ತಿಯ ಅನುಭವವು ನನ್ನನ್ನು ವೈಮರೆಸಿತು

ಆದರೆ, ಸಮುದ್ರಜಲದ ತಾಕಲಾಟದಿಂದ ಉತ್ಪನ್ನವಾಗುವ ಜ್ವಾಲೆಯ ಕುಡಿಗಳು ಆ ಜಲರಾಶಿಯ ಮೇಲೆ ಹೊಳೆಯದಿದ್ದರೆ ಆದರ ವಿಪುಲತೆಯ ಕಲ್ಪನೆಯನ್ನು ಆ ಕತ್ತಲಲ್ಲಿ ನಾನು ಮಾಡದಾಗುತ್ತಿದ್ದೆ. ಆ ವೇಳೆಯಲ್ಲಿ ನನ್ನ ದೃಷ್ಟಿಯು ಹೋದಷ್ಟು ದೂರದ ವರೆಗೆ ಪ್ರಕಾಶಪುಂಜವು ಚಿಕ್ಕ ಚಿಕ್ಕ ದೀಪಗಳನ್ನು ಹಚ್ಚಿ ಈ ಭಯಂಕರ ಸೌಂದರ್ಯದ ಮುಖವನ್ನು ತೆರೆದು ಇಟ್ಟಿತ್ತು.

ಹಡಗದ ಸೀಟಿಯು ನಡುಗುತ್ತ ಒಂದೇ ಸವನೆ ದನಿಗೈಯುತ್ತಿದ್ದಿತು ಮತ್ತು ಭಯಗೊಂಡ ಅಂಬಿಗರು ತಮ್ಮ ದೀನ ಕರುಣೆಯ ಪ್ರಾರ್ಥನೆಯನ್ನು ಅಲ್ಲಾನ ವರೆಗೆ ಮುಟ್ಟಿಸುವುದಕ್ಕಾಗಿ ಒಂದೇ ಸವನೇ ಕೂಗುತ್ತಿದ್ದರು.

ಯಾರ ಶುಭಾಗಮನದ ಸಲುವಾಗಿ ಇಷ್ಟು ಭಯ, ಇಷ್ಟು ಕೂಗಾಟ, ಇಷ್ಟು ಪ್ರಯತ್ನ ನಡೆದಿದ್ದಿತೋ ಆ ಮಹಾತರಂಗವು ಬಂದೇ ಬಿಟ್ಟಿತು. ಒಂದು ಮಹಾ ಹೊಯ್ದಾಟದಲ್ಲಿ ನಮ್ಮ ಹಡಗು ಮುಳುಗಿದಂತೆ ನಮಗೆನಿಸ ತೊಡಗಿತು ಆಗ ನಾವೂ ಮುಳುಗತೊಡಗಿರುವೆವೆಂದು ಎನಿಸಿತು. ಆದುದ ದರಿಂದ ದುರ್ಗಾ ಮಾತೆಯ ನಾಮ ಸ್ಮರಣೆಯನ್ನು ಮಾಡದ ಹೊರತು ನಮಗೆ ಯಾವ ಗತ್ಯಂತರವೂ ಇರಲಿಲ್ಲ! ಸುತ್ತು ಮುತ್ತು, ಮೇಲೆ ಕೆಳಗೆ ಕಪ್ಪು ನಿರೇ ನೀರು! ಹಡಗ ಮೊದಲುಗೊಂಡು ಎಲ್ಲ ಜನರೂ ಪಾತಾಳ ಲೋಕಕ್ಕೆ ಮೇಜ ವಾನೆಯಾಗಿ ಹೊರಟಿದ್ದೇವೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಈಗ ಅಲ್ಲಿ ಊಟವು ಯಾವ ತರಹೆಯದು ಸಿಗುವುದೊ ಎಂಬುದೊಂದೇ ಚಿಂತೆ.

ಸ್ವಲ್ಪೇ ಸಮಯದಲ್ಲಿ ನಾವು ಮುಳುಗಲಿಲ್ಲ, ಹಡಗವೂ ಮುಳುಗಿಲ್ಲ, ನಮ್ಮನ್ನು ನೀರಿನ ಮೇಲೆ ಇಳಿಸುತ್ತಿದ್ದಾರೆ ಎಂಬುದು ಗೊತ್ತಾಯಿತು. ತೆರೆ ಗಳ ಮೇಲೆ ತೆರೆಗಳೂ ಬರುವುದು ಇನ್ನೂ ನಿಂತಿಲ್ಲ. ಆದುದರಿಂದ ಅವುಗಳ ಮೇಲೆ ನಮ್ಮ ಜೋಕಾಲೆಯಾಟವೂ ನಿಂತಿಲ್ಲ ಇಷ್ಟು ಹೊತ್ತಾದ ಬಳಿಕ ಕಪ್ತಾನ ಹಡಗದ ಒಂದು ಕೋಣೆಯಲ್ಲಿ ಜನರನ್ನು ದನಗಳಂತೆ ತುಂಬಿ ಏಕೆ ಬೀಗ ಹಾಕಿದ್ದನು ಎಂಬುದರ ಕಾರಣವು ತಿಳಿಯಿತು. ಡೆಕ್ಕದ ಮೇಲೆ ನೀರು ಆಗಾಗ್ಗೆ ಏರಿ ಬಂದು ಹರಿಯುತ್ತಿದ್ದಿತು. ನನ್ನ ಕೆಳಗಿದ್ದ ಕುರಿಗಳೂ ಬಾತು ಕೋಳಿಗಳೂ ಚೀರಿ ಚೀರಿ ತಮ್ಮ ಇಹಲೋಕದ ಯಾತ್ರೆಯನ್ನು ಮುಗಿಸಿ ದ್ದುವು, ಅವುಗಳ ಮೇಲೆ ಕುಳಿತ ನಾನೊಬ್ಬನೇ ಕಬ್ಬಿಣದ ಗೂಟವನ್ನು

ಹಿಡಿದುಕೊಂಡು ಇಹಲೋಕದ ಯಾತ್ರೆಯನ್ನು ಮುಗಿಸದೆ ಸುರಕ್ಷಿತವಾಗಿ ಬದುಕಿಕೊಂಡಿದ್ದೆ.

ಇದೇ ವೇಳೆಗೆ ಸರಿಯಾಗಿ ಇನ್ನೊಂದು ಆಪತ್ತು ಬಂದೊದಗಿತು. ಜಲ ಬಿಂದುಗಳು ನನ್ನನ್ನು ಸೂಚಿಯಂತೆ ಚುಚ್ಚುತ್ತಿದ್ದುವು ಮತ್ತು ನನ್ನ ಬಟ್ಟೆಗಳೆಲ್ಲ ತೊಯ್ದು ತಪ್ಪಡಿಯಾಗಿದ್ದುವು ತಣ್ಣಗಿನ ಪ್ರಚಂಡ ಗಾಳಿಯೂ ಬೀಸತೊಡಗಿತು. ಹಲ್ಲುಗಳು ಕಟ ಕಟ ಮಾಡತೊಡಗಿದುವು ಈಗ ಒಂದು ವಿಚಾರವು ಹೊಳೆಯಿತು— ಈ ಜಲ ರಾಶಿಯಲ್ಲಿ ಮುಳುಗದೆ ಬದುಕಿಕೊಂಡೆ, ಇನ್ನು ನಿಮೋನಿಯಾ ರೋಗದ ಕೈಯಿಂದ ಹೇಗೆ ಪಾರಾಗಬಲ್ಲೆ? ಇನ್ನು ಸ್ವಲ್ಪ ಹೊತ್ತು ಇಲ್ಲಿ ಕುಳಿತರೆ ಅದರ ಕೈಯಿಂದ ಪಾರಾಗುವುದು ಅಸಂಭವ ಎಂದು ಎನಿಸಿತು. ಆದುದರಿಂದ ಜಲ ಬಿಂದುಗಳು ಸಿಡಿದು ಮೈಗೆ ತಗಲದಂತೆ ಮಾಡಿಕೊಳ್ಳಬೇಕಾದರೆ ಒಂದು ಸುರಕ್ಷಿತವಾದ ಸ್ಥಳಕ್ಕೆ ನಾನು ಹೋಗಲೇಬೇಕೆಂದು ನಿರ್ಧರಿಸಿದೆ. ಈ ಕುರಿಗಳ ಪಂಜರದಲ್ಲಿ ಹೊಕ್ಕು ಕುಳಿತರೆ ಹೇಗೆ? ಅಲ್ಲಿ ನಾನು ಸುರಕ್ಷಿತವಾಗಿರಬಹುದೇ? ಎಂದು ಯೋಚಿಸಿದೆ. ಮರುಕ್ಷಣವೇ ಅಲ್ಲಿ ನಾನು ಹೋದರೆ ಅವು ಸತ್ತಂತೆಯೇ ನಾನು 'ಬ್ಯಾ ಬ್ಯಾ' ಎಂದು ಕೊನೆಗೆ ಅವಶ್ಯವಾಗಿ ಸತ್ತೇ ಹೋಗುವೆನೆಂದು ಎನಿಸಿತು

ಒಂದು ಉಪಾಯವುಂಟು. ಹಡಗು ಸ್ವಲ್ಪ ಹೊರಳುವಾಗ ಓಡಿ ಹೋಗಲು ಸ್ವಲ್ಪ ಸಮಯವು ದೊರೆಯುವುದು. ಆಗಾದರೂ ಎಲ್ಲಿಗಾದರೂ ಹೋಗಿ ಹೊಕ್ಕಿಕೊಂಡರೆ ಪ್ರಾಣವು ಉಳಿಯುವುದು. ಯೋಚಿಸಿದಂತೆಯೆ ಮಾಡಿದೆ ಪಂಜರಗಳಿಂದ ಕೆಳಗಿಳಿದು ಮೂರು ಬಾರಿ ಓಡಿದೆ ಮತ್ತು ಮೂರು ಬಾರಿ ಕುಳಿತೆ ಬಳಿಕ ಎರಡನೆ ವರ್ಗದ ಕ್ಯಾಬಿನ್‌ದ ಎದುರಿಗೆ ಹೋಗಿ ನಿಂತೆ. ಅದರ ಬಾಗಿಲು ಮುಚ್ಚಿತ್ತು. ಸಾವಿರಾರು ಸಲ ಯತ್ನಿಸಿದರೂ ಆ ಕಬ್ಬಿಣದ ಬಾಗಿಲುಗಳು ನನಗೆ ಪ್ರವೇಶ ಮಾರ್ಗವನ್ನು ಕೊಡಲಿಲ್ಲ ಆದುದರಿಂದ ನಾನು ಅದೇ ದಾರಿಯಿಂದ ಹೊರಟು ಮೊದಲನೆಯ ತರಗತಿಯ ಕೋಣೆಗೆ ಹೋದೆ. ಈ ಬಾರಿ ಭಾಗ್ಯ- ದೇವರು ಪ್ರಸನ್ನರಾಗಿದ್ದರು, ಒಂದು ಬೇರೆ ಬಗೆಯ ಕೋಣೆಯಲ್ಲಿ ಆಶ್ರಯವಿತ್ತರು. ನಾನು ಸ್ವಲ್ಪವೂ ಹಿಂದು ಮುಂದು ನೋಡದೆ ಹೋಗಿ ಮಂಚದ ಮೇಲೆ ಹಾಯಾಗಿ ಮಲಗಿಬಿಟ್ಟೆ.

ರಾತ್ರಿ ಹನ್ನೆರಡು ಬಾರಿಸುವ ಮೊದಲೇ ಬಿರುಗಾಳಿ ನಿಂತುಬಿಟ್ಟಿದ್ದಿತು. ಆದರೆ ಸಮುದ್ರದ ಕೋಪವು ಇನ್ನೂ ಶಾಂತವಾಗಿರಲಿಲ್ಲ ಆ ಸಿಟ್ಟು ಬೆಳಗಾಗುವ ತನಕ ಹಾಗೆಯೆ ಇದ್ದಿತು

ನನ್ನ ಸಾಮಾನುಗಳ ಮತ್ತು ಜೊತೆಗಾರ ಯಾತ್ರಿಕರ ಗತಿಯೇನಾಯಿತು, ವಿಶೇಷವಾಗಿ ಮಿಶ್ರಿ, ಅವನ ಇಪ್ಪತ್ತು ವರ್ಷದ ಜೊತೆಗಾತಿ ಯಾವ ರೀತಿಯಾಗಿ ರಾತ್ರಿಯನ್ನು ಕಳೆದರು ಎಂಬುದನ್ನು ತಿಳಿದುಕೊಳ್ಳಲು ನಾನು ಕೆಳಗೆ ಇಳಿದೆ. ನಿನ್ನೆ ನಂದ ಮಿಶ್ರಿಯು ತಮಾಷೆ ಮಾಡುತ್ತ "ಇಂ||ಬಗೆಯ ಕಡಲೆ-ಹುರಿಗಡಲೆ-ನೆನೆಗಡಲೆ-ಪುರಿಗಳಂತೆ ನಾವು ಒಂದಾಗಿದ್ದೆವು, ಸ್ವಲ್ಪ ಹೊತ್ತಾಯಿತು, ಈಗ ನಮ್ಮ ನಮ್ಮ ಸ್ಥಳಗಳ ಮೇಲೆ ಕುಳಿತಿರುವೆವು!", ಎಂದು ಹೇಳಿದ್ದ ಇವೊತ್ತಿನ ಒಂದುಗೂಡುವಿಕೆಯು ಇಂ|| ಪುರಿ-ಗಡಲೆಯಂತೆ ಆಗಿದ್ದಿತೊ ಇಲ್ಲವೊ ಎಂಬುದು ಗೊತ್ತಾಗಲಿಲ್ಲ ಇದು ವರೆಗೆ ಯಾರೂ ತಮ್ಮ ಸ್ಥಳಕ್ಕೆ ಹಿಂತಿರುಗಿ ಬಂದಿರಲಿಲ್ಲ ಎಂಬುದನ್ನು ಕಣ್ಣಾರೆ ಕಂಡೆ.

ಅವರ ಸ್ಥಿತಿಗತಿಯನ್ನು ನೋಡಿ ನನಗೆ ನಿಜವಾಗಿಯೂ ಅಳುಬರತೊಡಗಿತು. ಈ ಮೂರು-ನಾಲ್ಕು ನೂರು ಯಾತ್ರಿಕರಲ್ಲಿ ಒಬ್ಬನಾದರೂ ಸ್ವಲ್ಪ ಪೆಟ್ಟು ಸಹ ತಗಲದೆ ಉಳಿದಿದ್ದಿಲ್ಲ ಎಲ್ಲರಿಗೂ ಒಂದಿಲ್ಲೊಂದು ಪೆಟ್ಟು ಬಿದ್ದೇ ಬಿದ್ದಿದ್ದಿತು.

ಹೆಂಗಸರು ಕಲ್ಲಿನ ಮೇಲೆ ಮಸಾಲೆಯನ್ನು ಅರೆಯುವಂತೆ ಈ ಬಿರುಗಾಳಿಯು ಮೂರು-ನಾಲ್ಕು ನೂರು ಯಾತ್ರಿಕರನ್ನು ಅರೆದು ಬಿಟ್ಟಿದ್ದಿತು. ಅವರು ಇಡಿ ರಾತ್ರಿ ತಮ್ಮ ಸಾಮಾನು ಟ್ರಂಕುಗಳೊಡನೆ ಇತ್ತಿಂದ ಅತ್ತ ಅತ್ತಿಂದ ಇತ್ತ ಉರುಳಾಡುತ್ತಿದ್ದರು. ವಮನ, ಮೂತ್ರ-ಮಲ ವಿಸರ್ಜನೆಯಿಂದ ದುರ್ವಾಸನೆಯು ಇಡಿಗಿ ಬಿಟ್ಟಿದ್ದಿತು, ನಿಂತುಕೊಳ್ಳಲಿಕ್ಕೂ ಸ್ಥಳವಿರಲಿಲ್ಲ ಇದೇ ವೇಳೆಗೆ ಹಡಗದ ಡಾಕ್ಟರರು ಭಂಗಿ ಜನರನ್ನೂ ಅಂಬಿಗರನ್ನೂ ಕರೆದುಕೊಂಡು ಬಂದು ಈ ಯಾತ್ರಿಕರ ಪಂಕೋದ್ಧಾರ ಮಾಡಿಸ ತೊಡಗಿದರು.

ಡಾಕ್ಟರರು ಅಡಿಯಿಂದ ಮುಡಿಯ ವರೆಗೆ ನನ್ನನ್ನು ನೋಡಿ ನಾನು ಸೆಕಂಡ ಕ್ಲಾಸಿನ ಯಾತ್ರಿಕನೆಂದು ತಿಳಿದುಕೊಂಡಿದ್ದರು ಆದಾಗ್ಯೂ ಅತ್ಯಂತ ಆಶ್ಚರ್ಯದಿಂದ ಅವರು " ಮಹಾಶಯರು ಅತ್ಯಂತ ಚುರುಕಾಗಿ ಕಾಣುತ್ತ

ಇರುವಿಲ್ಲ, ವಿಶ್ರಾಂತಿಯನ್ನು ಪಡೆಯಲು ಯಾವುದಾದರೊಂದು ಹ್ಯಾಮೊಕ್ (Hammock ತೂಗುವ ಹಾಸಿಗೆ ದೊರಕಿಸಿದಂತೆ ಕಾಣುತ್ತದೆ, ಅಲ್ಲವೆ?'' ಎಂದರು.

''ಹ್ಯಾಮೊಕ್ ಎಲ್ಲಿ ಸಿಗುವುದು ಮಹಾಶಯರೆ, ಕುರಿಗಳ ಪಂಜರ ಸಿಕ್ಕಿತ್ತು ಪಂಜರ. ಆದುದರಿಂದ ಇಷ್ಟು ಚುರುಕಾಗಿ-ಹಸನಾಗಿ ಕಾಣುತ್ತಿರುವೆ.''

ಡಾಕ್ಟರರು ಕಣ್ಣು ಹಿಗ್ಗಿಸಿ ನನ್ನ ಕಡೆಗೆ ನೋಡತೊಡಗಿದರು. ನಾನೆಂದೆ '' ಡಾಕ್ಟರರೇ, ಈ ಅಧಮನೂ ಇದೇ ನರಕದ ಯಾತ್ರಿಕನು. ಆದರೆ ಅಶಕ್ತನಾಗಿರುವುದರಿಂದ ಇಲ್ಲಿ ಹೊಗಲು ಅಸಮರ್ಥನಾದ. ಮೊದಲಿನಿಂದಲೂ ಡೆಕ್ಕದ ಮೇಲೆಯೆ ಇದ್ದು ಬಂದ. ನಿನ್ನೆ ಬಿರುಗಾಳಿಯು ಸುದ್ದಿಯು ಹತ್ತಿದ ಮೇಲೆ ಕುರಿ-ಕೋಳಿಗಳ ಪಂಜರಗಳ ಮೇಲೆ ಕುಳಿತು, ಬಳಿಕ ಮೊದಲನೆಯ ತರಗತಿಯ ಒಂದು ಕೋಣೆಯಲ್ಲಿ ಅನಧಿಕೃತ ರೀತಿಯಿಂದ ಹೊಕ್ಕು ಆತ್ಮರಕ್ಷಣೆಯನ್ನು ಮಾಡಿಕೊಂಡಿರುವ. ಇವನು ಅನುಚಿತ ಕಾರ್ಯವನ್ನು ಮಾಡಿದೆನಲ್ಲವೆ? ತಾವು ಏನೆಂದು ಹೇಳುವಿರಿ?''

ನನ್ನ ಇಡಿ ಇತಿಹಾಸವನ್ನು ಕೇಳಿ ಡಾಕ್ಟರರು ಪ್ರಸನ್ನರಾದರು. ಅದೇ ಕ್ಷಣ ಬಾಕಿ ಎರಡು ದಿನಗಳನ್ನು ತಮ್ಮ ಕೋಣೆಯಲ್ಲಿಯೆ ನಾನು ಕಳೆಯಬೇಕೆಂದು ಹೇಳಿ ಗೌರವಿಸಿದರು, ಆಮಂತ್ರಣವಿತ್ತರು ನಾನು ಆ ಆಮಂತ್ರಣವನ್ನು ಸ್ವೀಕರಿಸಲಿಲ್ಲ, ಆದರೆ ಅವರಿಂದ ಒಂದು ಕುರ್ಚಿಯನ್ನು ಮಾತ್ರ ಬೇಡಿ ತೆಗೆದುಕೊಂಡೆನು.

ಮಧ್ಯಾಹ್ನಕ್ಕೆ ಬಹಳ ಹಸಿವಾಯಿತು. ಆಗ ಬ್ರಹ್ಮಾಂಡದೊಳಗಿರುವ ಸಮಸ್ತ ಖಾದ್ಯಪದಾರ್ಥಗಳನ್ನು ಧ್ಯಾನಿಸುತ್ತ ಕುರ್ಚಿಯ ಮೇಲೆ ಕುಳಿತಿದ್ದೆ. ಖಾದ್ಯ ಪದಾರ್ಥಗಳನ್ನು ಎಲ್ಲಿ, ಯಾವ ಕೌಶಲ್ಯದಿಂದ ದೊರಕಿಸಬೇಕೆಂಬುದನ್ನು ವಿಚಾರಿಸುತ್ತಿದ್ದೆ. ಇಷ್ಟರಲ್ಲಿ ಖಿದಿರಪುರದ ಮುಸಲ್ಮಾನ್ ಸಿಂಪಿಗರಲ್ಲೊಬ್ಬನು ಬಂದು ''ಬಾಬೂ ಸಾಹೇಬ್, ಒಬ್ಬ ಬಂಗಾಲಿ ಹೆಂಗುಸು ತಮ್ಮನ್ನು ಕರೆಯುತ್ತಿರುವಳು'' ಎಂದು ಹೇಳಿದ.

''ಹೆಂಗುಸು?'' ಬಹುಶಃ ಟಗರ್ ಇರಬಹುದೆಂದು ತಿಳಿದೆ. ಅದೇತಕ್ಕೆ ಕರೆಯುತ್ತಿರುವಳೆಂಬುದನ್ನು ಅನುಮಾನಿಸುವುದು ಕಠಿನವಿತ್ತು. ನಿಶ್ಚಯವಾಗಿ

ಗಂಡ ಮತ್ತು ಹೆಂಡತಿ ಇಬ್ಬರ ನಡುವೆ ಜಗಳವಾಗಿರಬೇಕು, ಗಂಡ ಹೆಂಡಿರ ಹಕ್ಕು ಬಾಧ್ಯತೆಗಳನ್ನು ನಿರ್ಣಯಿಸುವಾಗ ಮತಭೇದವಾಗಿರಬೇಕು. ಆದಕ್ಕಾಗಿ ನಾನೇಕೆ ಬೇಕು? Trial by ordeal (ಅಗ್ನಿ ಪರೀಕ್ಷೆ) ಯನ್ನು ಳಿದು, ಈ ಪ್ರಶ್ನೆಯ ಮೀಮಾಂಸೆಯನ್ನು ಪರಕೀಯರೊಬ್ಬರು ಮಾಡಿರಬಹು ದೆಂದು ಬೇರೊಬ್ಬರು ಯೋಚಿಸುವುದು ಕೂಡ ಕಠಿನವೇ.

ನಾನೆಂದೆ "ಒಂದು ಗಂಟೆಯ ಬಳಿಕ ಬರುವೆನೆಂದು ಹೇಳಿರಿ."

ಅವನೆಂದ "ಇಲ್ಲ ಬಾಬೂ, ಬಹಳ ಆಗ್ರಹ ಮಾಡಿ ಹೇಳಿರುವಳು"

"ಆಗ್ರಹ ಮಾಡಿ!" ಆದರೆ ಟಗರ್ ಆಗ್ರಹ ಮಾಡುವಂತಹ ಹೆಂಗುಸು ಅಲ್ಲವಲ್ಲ? ನಾನು ಪುನಃ ವಿಚಾರಿಸಿದೆ "ಆಕೆಯ ಗಂಡ ಏನು ಮಾಡುತ್ತಿ ರುವ?"

"ಅವನಿಗೇ ಕಾಯಿಲೆಯಾಗಿರುವುದರಿಂದ ಕರೆಯುತ್ತಿರುವಳು."

ಕಾಯಿಲೆಯಾಗುವುದು ಆಚ್ಚರಿಯ ವಿಷಯವಾಗಿರಲಿಲ್ಲ ಆದುದರಿಂದ ನಾನು ಎದ್ದು ನಿಂತೆ. ಅವನು ನನ್ನನ್ನು ತನ್ನೊಡನೆ ಕರೆದುಕೊಂಡು ಹೋದ. ಸಾಕಷ್ಟು ದೂರದಲ್ಲಿ ಒಂದು ಮೂಲೆಯಲ್ಲಿ ದೊಡ್ಡ ದೊಡ್ಡ ಹಗ್ಗದ ಸುರುಳಿ ಗಳು ಇದ್ದವು. ಅವುಗಳ ಮರೆಯಲ್ಲಿ ಒರ್ವ ಇಪ್ಪತ್ತೆರಡು ಇಪ್ಪತ್ತುಮೂರು ವರ್ಷದ ಬಂಗಾಲಿ ಹೆಂಗುಸು ಕುಳಿತಿದ್ದಳು. ಈ ಮೊದಲು ಆಕೆ ನನ್ನ ಕಣ್ಣಿಗೆ ಬಿದ್ದಿರಲಿಲ್ಲ ಹತ್ತಿರದಲ್ಲಿಯೇ ಒಂದು ಹೊಲಸಾದ ಜಮಖಾನೆಯ ಮೇಲೆ ಸುಮಾರು ಅದೇ ವಯಸ್ಸಿನ ಅತ್ಯಂತ ಅಶಕ್ತ ಶರೀರದ ಯುವಕ ಹೆಣದಂತೆ ಕಣ್ಣುಮುಚ್ಚಿಕೊಂಡು ಮಲಗಿದ್ದ—ಅವರಿಗೇ ಕಾಯಿಲೆಯಾಗಿದೆ.

ನಾನು ಸಮೀಪಕ್ಕೆ ಹೋಗುತ್ತಲೆ ಆ ಹೆಂಗಸು ತನ್ನ ಅವಗುಂಠನವನ್ನು ಮೆಲ್ಲಗೆ ಮುಂದೆ ಸರಿಸಿದಳು. ಆದರೆ ನಾನು ಆಕೆಯ ಮುಖವನ್ನು ನೋಡಿ ಬಿಟ್ಟಿದ್ದೆ.

ಆ ಮುಖ ಸುಂದರವೆಂದು ಹೇಳಿದರೆ ವಾದವೇಳುವುದು, ಆದಾಗ್ಯೂ ಅಷ್ಟು ಉಪೇಕ್ಷಣೀಯವಾಗಿರಲಿಲ್ಲ. ಉಬ್ಬುಗಲ್ಲಗಳಿಗೆ ಸ್ತ್ರೀಯರ ಸೌಂದರ್ಯ ಪಟ್ಟಿಯಲ್ಲಿ ಯಾವ ಸ್ಥಳವೂ ಇಲ್ಲ—ಎಂಬುದು ನನಗೆ ಗೊತ್ತು. ಆದರೆ ಈ ತರುಣಿಯ ಅಗಲವಾದ ಹಣೆಯ ಮೇಲೆ ಬುದ್ಧಿ ಹಾಗೂ ವಿಚಾರಶಕ್ತಿಯ ಪ್ರಕಾಶ ಹೊಳೆಯುತ್ತಿತ್ತು. ಇಂತಹ ಪ್ರಕಾಶವನ್ನು ನಾನು ಬೇರೊಬ್ಬರ

ಹಣೆಯ ಮೇಲೆ ಅಪರೂಪವಾಗಿಯೇ ಕಂಡಿರುವೆ. ನನ್ನ ಅನ್ನದಾ ಜೀಜೀಯ ಕಪೋಲಗಳು ದೊಡ್ಡವಿದ್ದುವು. ಈಕೆಯವು ಸುಮಾರು ಹಾಗೆಯೆ ಇದ್ದುವು. ಬೈತಲೆಯಲ್ಲಿ ಸಿಂಧೂರವು ಮಿರುಗುತ್ತಿತ್ತು, ಕೈಯಲ್ಲಿ ಲೋಹದ ಬಳೆಗಳು × ಶಂಖದ ವಲಯಗಳು ಶರೀರದ ಮೇಲಿದ್ದುವು. ಇವುಗಳ ಹೊರತಾಗಿ ಮೈ-ಮೇಲೆ ಅಲಂಕಾರದ ಯಾವ ಒಡವೆಯೂ ಇರಲಿಲ್ಲ ಒಂದು ಸಾಮಾನ್ಯ ಅಂಚಿನ ಸೀರೆಯೊಂದನ್ನು ಉಟ್ಟಿದ್ದಳು.

ಪರಿಚಯವಿಲ್ಲದಿದ್ದರೂ ಅತ್ಯಂತ ಸ್ವಾಭಾವಿಕ ರೀತಿಯಲ್ಲಿ ಆಕೆಯೊಂದಳು "ತಮಗೆ ಡಾಕ್ಟರರ ಪರಿಚಯವಿದೆ, ತಾವು ಅವರನ್ನು ಇಲ್ಲಿಗೊಂದು ಬಾರಿ ಕರೆದುಕೊಂಡು ಬರಲಾರಿರಾ?"

"ಇಂದೇ ಅವರೊಡನೆ ಪರಿಚಯವಾಗಿದೆ. ಆದರೆ ಡಾಕ್ಟರರು ಒಳ್ಳೆಯವರಂತೆ ಕಾಣುವರು ಆದರೆ ಅವರನ್ನೇ ಏಕೆ ಕರೆಯಬೇಕೆನ್ನುವಿರಿ?"

"ಅವರನ್ನು ಕರೆದರೆ ವಿಜಿಟ್ ಫೀ ಕೊಡಬೇಕಾಗಿದ್ದಲ್ಲಿ ಬೇಡ. ಕಷ್ಟಪಟ್ಟು ಸ್ವಲ್ಪ ಮೇಲಕ್ಕೆ ಇವರನ್ನೇ ಕರೆದುಕೊಂಡು ಹೋಗಣ." ಎಂದು ರೋಗಿಯನ್ನು ಆಕೆಯು ತೋರಿಸಿದಳು.

ನಾನು ಯೋಚಿಸಿ "ಬಹುಶಃ ಹಡಗದ ಡಾಕ್ಟರರಿಗೆ ಏನನ್ನೂ ಕೊಡಬೇಕಾಗುವುದಿಲ್ಲ ಆದರೆ ಇವರಿಗೇನಾಗಿದೆ?" ಎಂದೆ.

ರೋಗಿಯು ಈಕೆಯ ಗಂಡನೆಂದು ಯೋಚಿಸಿದ್ದೆ, ಆದರೆ ಮಾತಿನ ರೀತಿಯಿಂದ ಸ್ವಲ್ಪ ಸಂದೇಹವುಂಟಾಯಿತು. ಈ ರೋಗೀ ಮನುಷ್ಯನ ಮುಖದ ಕಡೆಗೆ ಬಾಗಿ ಆಕೆಯು "ನಿಮಗೆ ಊರಿಂದ ಹೊರಡುವಾಗಲೇ ಸ್ವಲ್ಪ ಹೊಟ್ಟೆನೋವು ಇತ್ತಲ್ಲವೆ?" ಎಂದು ಕೇಳಿದಳು.

ಅವನು ತಲೆಯಲ್ಲಾಡಿಸಿದನು. ಆಕೆಯು ಅವನ ತಲೆಯನ್ನು ಸ್ವಲ್ಪ ಮೇಲಕ್ಕೆತ್ತಿ ಎಂದಳು "ಇವರಿಗೆ ಹೊಟ್ಟೆನೋವು ಊರಲ್ಲಿಯೆ ಬಂದಿತ್ತು, ಆದರೆ ನಿನ್ನೆಯಿಂದ ಜ್ವರಬಂದಿದೆ. ಈಗ ಜ್ವರ ಬಹಳ ಏರಿವೆ, ಔಷಧ ಕೊಡಿಸದಿದ್ದರೆ ನಡೆಯುವಂತಿಲ್ಲ."

ನಾನೂ ಮುಟ್ಟಿ ನೋಡಿದೆ, ನಿಜವಾಗಿಯೂ ಜ್ವರ ಬಹಳ ಏರಿದ್ದುವು. ಡಾಕ್ಟರರನ್ನು ಕರೆಯಲು ಮೇಲೆ ಹೋದೆ.

× ಸಧವೆಯ ಚಿಹ್ನೆಗಳು

ಡಾಕ್ಟರರು ಕೆಳಗೆ ಬಂದರು. ರೋಗಿಯನ್ನು ಪರೀಕ್ಷಿಸಿ ಔಷಧವನ್ನು ಕೊಟ್ಟು "ನಡೆಯಿರಿ ಶ್ರೀಕಾಂತಬಾಬೂ, ಕೋಣೆಗೆ ಹೋಗಿ ಹರಟೆಹೊಡೆಯೋಣ, ನಡೆಯಿರಿ" ಎಂದರು.

ಡಾಕ್ಟರರು ಒಳ್ಳೆಯ ರಸಿಕರು. ನನ್ನನ್ನು ತಮ್ಮ ಕೋಣೆಗೆ ಕರೆದುಕೊಂಡು ಹೋಗಿ "ಚಹಾ ಕುಡಿಯುತ್ತೀರೇನು?" ಎಂದು ಕೇಳಿದರು.

"ಹೂಂ, ಕುಡಿಯುತ್ತೇನೆ."

"ಬಿಸ್ಕೀಟು?"

"ಅದನ್ನೂ ತಿನ್ನುವೆ."

"ಒಳ್ಳೇದು."

ಉಪಹಾರ ತೀರಿಸಿಕೊಂಡು ಇಬ್ಬರೂ ಎದರುಬದರು ಕುಳಿತೆವು. ಡಾಕ್ಟರರು "ನೀವು ಆ ಹೆಂಗುಸಿನ ಬಳಿಗೆ ಹೇಗೆ ಹೋದಿರಿ?" ಎಂದರು.

"ಆಕೆಯೆ ಕರೆಕಳುಹಿದ್ದಳು."

ಡಾಕ್ಟರರು ಎಲ್ಲವನ್ನೂ ತಿಳಿದುಕೊಂಡವರಂತೆ ತಲೆಯಲ್ಲಾಡಿಸುತ್ತ "ಕರೆಕಳುಹಲೇಬೇಕು—ಮದುವೆಯಾಗಿದೆಯೊ ಇಲ್ಲವೊ ನಿಮ್ಮದು?" ಎಂದರು.

"ಇಲ್ಲ."

"ಸರಿ, ಗಂಟುಬೀಳರಿ, ಅಷ್ಟೇನೂ ಕೆಟ್ಟ ಇಲ್ಲ. ಆ ಮನುಷ್ಯನ ಮುಖವನ್ನು ನೋಡಲಿಲ್ಲವೆ? ವಿಷಮಜ್ವರದ ಲಕ್ಷಣಗಳಿವೆ. ಏನೇ ಆಗಲಿ. ಬಹಳ ದಿನ ಬದುಕಲಾರ, ಖಂಡಿತ. ಏತನ್ಮಧ್ಯದಲ್ಲಿ ಆಕೆಯ ಮೇಲೆ ಕಣ್ಣಿಟ್ಟಿರಿ. ಮತ್ತೊಬ್ಬನು ಯಾವನಾದರೂ ಗಂಟು ಬಿದ್ದಾನು."

ನಾನು ದಿಙ್ಮೂಢನಾಗಿ "ತಾವು ಇದನ್ನೇನು ಹೇಳುತ್ತಿರುವಿರಿ ಡಾಕ್ಟರರೆ?" ಎಂದೆ. ಡಾಕ್ಟರರಿಗೆ ನನ್ನ ಮಾತು ನೆಡಲಿಲ್ಲ. ಅವರು ಯಥಾವತ್ತಾಗಿ "ಒಳ್ಳೇದು, ಆ ಹುಡುಗನೇ ಆಕೆಯನ್ನು ಓಡಿಸಿಕೊಂಡು ಬಂದಿರುವ ಅಥವಾ ಆಕೆಯೆ ಅವನನ್ನು ಓಡಿಸಿಕೊಂಡು ಬಂದಿರಬಹುದು. ನಿಮಗೆ ಹೇಗೆ ಕಾಣುವುದು ಶ್ರೀಕಾಂತಬಾಬೂ? ಬಹಳ 'ಫಾರ್ವರ್ಡ' ಇದ್ದಾಳೆ. ಮಾತುಕತೆ ಬಹು ಚೆನ್ನಾಗಿವೆ." ಎಂದರು.

"ಈ ಬಗೆಯ ವಿಚಾರ ನಿಮ್ಮ ಮನದಲ್ಲಿ ಏಕೆಬಂದುವು?"

"ಪ್ರತಿಯೊಂದು ಟ್ರಿಪ್ಪಿನಲ್ಲಿಯೂ ಇಂತಹದೊಂದು ಜೋಡಿಯು ಇದ್ದೇ ಇರುವುದು. ಕಳೆದ ಬಾರಿ ಬೇಲಘರದ ಒಂದು ಜೋಡಿ ಹೀಗೆಯೆ ಇದ್ದಿತು. ಒಂದು ಬಾರಿ ಬರಮಾದಲ್ಲಿ ಕಾಲಿಟ್ಟು ನೋಡಿರಿ, ನನ್ನ ಮಾತು ಸಟೆಯೊ ದಿಟವೊ ಎಂಬುದು ತಿಳಿಯುವುದು.''

ನಾನು ಆ ಮೇಲೆ ಡಾಕ್ಟರರ ಮಾತು ನಿಜವೊ ಅಲ್ಲವೊ ಎಂಬುದನ್ನು ಬರಮಾಕ್ಕೆ ಹೋಗಿ ನೋಡಿದೆ. ಅವರ ಮಾತಿನಲ್ಲಿ ಸತ್ಯಾಂಶವೇ ಹೆಚ್ಚು ಇದ್ದಿತು. ಆದರೆ ಅವರ ಮಾತು ಕೇಳಿ ನನ್ನ ಮೈ ಮನಗಳೇ ಕಿಡಿಯಾದುವು. ನಾನು ಎದ್ದು ನಂದ ಮಿಶ್ರಿಯವರ ಸಮಾಚಾರ ತೆಗೆದುಕೊಳ್ಳಲು ಕೆಳಗೆ ಹೋದೆ. ನಂದ ಮಿಶ್ರಿ ಮತ್ತು ಅವನ ಹೆಂಡತಿ ಇಬ್ಬರೂ ಫಲಹಾರದ ಸಿದ್ಧತೆಯನ್ನು ನಡೆಸಿದ್ದರು. ನಮಸ್ಕಾರಮಾಡಿದ ಬಳಿಕ ಅವನು ಎಲ್ಲಕ್ಕೂ ಮೊದಲು ಕೇಳಿದ "ಈ ಹೆಂಗುಸು ಯಾರು ಬಾಬೂ?''

ಟಗರಳಿಗೆ ತಲೆನೋವು, ಆದುದರಿಂದ ಆಕೆಯು ತಲೆಗೆ ಒಂದು ದೊಡ್ಡ ರುಮಾಲನ್ನು ಸುತ್ತಿಕೊಳ್ಳತೊಡಗಿದ್ದಳು. ಆಕೆಯು ಬುಸುಗುಡುತ್ತ "ಅದನ್ನು ತಿಳಿದುಕೊಂಡು ನೀವೇನು ಮಾಡುವಿರಿ ಹೇಳಿರಿ ನೋಡೋಣ?" ಎಂದಳು.

ಮಿಶ್ರಿಯು ನನಗೆ ಮಧ್ಯಸ್ಥನನ್ನು ಮಾಡಿ "ನೋಡಿದಿರಾ ನೀವು, ಈ ಹೆಂಗುಸಿನ ಅನುದಾರ ವರ್ತನೆಯನ್ನು? ಯಾವ ಬಂಗಾಲಿ ಹೆಂಗುಸು ಬರಮಾಕ್ಕೆ ಹೋಗುತ್ತಿರುವಳು ಎಂಬುದನ್ನು ಕೇಳುವುದು ಕೂಡ ಪಾಪವೊ ಏನೊ!'' ಎಂದ.

ಟಗರಳು ತನ್ನ ತಲೆ ನೋವನ್ನು ಮರೆತುಬಿಟ್ಟಳು. ಮತ್ತು ತಲೆಯ ಮೇಲಿನ ರುಮಾಲನ್ನು ಬಿಸಾಡಿ ನನ್ನ ಕಡೆಗೆ ನೋಡ ತೋಡಗಿದಳು ಆಕೆಯು ತನ್ನ ಫುಟ್‌ಬಾಲಿನಂಥ ಕಣ್ಣುಗಳನ್ನು ಹಿಗ್ಗಿಸಿ "ಮಹಾಶಯರೆ, ಟಗರ ವೈಷ್ಣವಿಯ ಕೈಯಲ್ಲಿ ಸಿಕ್ಕು ಇವನಂಥ ಎಷ್ಟೋ ಮಿಶ್ರಿಗಳು ಮನುಷ್ಯರಾಗಿ ಹೋಗಿದ್ದಾರೆ. ಇವರು ನನ್ನ ಕಣ್ಣಲ್ಲಿ ಮಣ್ಣು ತೂರಲು ಯತ್ನಿಸುತ್ತಿರುವರು, ಇವರ ಧೈರ್ಯವನ್ನಾದರೂ ನೋಡಿರಿ. ಏನು, ನೀವು ಡಾಕ್ಟರರೊ ವೈದ್ಯರೊ?—ನಾನು ನೀರನ್ನು ತರಲು ಹೋದೆ, ಇಷ್ಟರಲ್ಲಿ ಓಡಿ ಹೋದಿರಾ ಆಕೆಯನ್ನು ನೋಡಲಿಕ್ಕೆ? ಯಾರು ಆಕೆ? ಮತ್ತೊಮ್ಮೆ ನೀವು

ಅಲ್ಲಿಗೆ ಹೋದುದನ್ನು ನೋಡಿದರೆ ನಿಮ್ಮಷ್ಟಕ್ಕೆ ನೀವು, ನನ್ನಷ್ಟಕ್ಕೆ ನಾನು ಒಂದು ದಿನ ಇರಬೇಕಾದೀತು !" ಎಂದಳು.

ನಂದ ಮಿಶ್ರಿಯೂ ಸಿಟ್ಟಿಗೆದ್ದು "ನಾನೇನು ನಿನ್ನ ಸಾಕಿದ ಕೋತಿಯೆ ಈ ರೀತಿ ನೀನು ಕುಣಿಸಲಿಕ್ಕೆ ? ನನಗೆ ಇಚ್ಛೆಯಾದರೆ ಪಾಪ ಆ ಬಡವೆಯನ್ನು ನೋಡಿ ಬರುವೆ. ನಿನ್ನ ಮನಸ್ಸಿಗೆ ಬಂದುದನ್ನು ಮಾಡು" ಎಂದು ಫಲಹಾರಕ್ಕೆ ಮನಸ್ಸು ಕೊಟ್ಟನು.

ಟಗರಳು ಕೇವಲ "ಒಳ್ಳೇದು" ಎಂದು ಪುನಃ ರುಮಾಲನ್ನು ಸುತ್ತತೊಡಗಿದಳು ನಾನೂ ಅಲ್ಲಿಂದ ಹೊರಟೆ. ಹೋಗುವಾಗ ನಾನು ಯೋಚಿಸತೊಡಗಿದೆ—ಇದೇ ರೀತಿಯಾಗಿ ಇವರು ಇಪ್ಪತ್ತು ವರ್ಷಗಳನ್ನು ಕಳೆದಿರುವರು. ಎಷ್ಟೋ ಬಾರಿ ಟಗರಳು ಕೈಸುಟ್ಟುಕೊಂಡು ಅರಿತಿರುವಳು—ಸತ್ಯದ ಬಂಧನವು ಇಲ್ಲದಿದ್ದಲ್ಲಿ ಲಗಾಮನ್ನು ಸ್ವಲ್ಪವಾದರೂ ಸಡಿಲ ಮಾಡುವುದು ಒಳ್ಳೇದಲ್ಲ; ಮೋಸಮಾಡಲೇ ಬೇಕಾಗುವುದು ಹಗಲು-ರಾತ್ರಿ ಎಚ್ಚರಿತ್ತು ಬಲಾತ್ಕಾರದಿಂದ ತನ್ನ ಅಧಿಕಾರವನ್ನು ಸ್ಥಾಪಿಸಿಕೊಂಡಿರಬೇಕು, ಇಲ್ಲದಿದ್ದರೆ ತಾರುಣ್ಯದಂತೆ ನಂದ ಮಿಶ್ರಿಯೂ ಒಂದಿಲ್ಲೊಂದು ದಿನ ಗೊತ್ತಾಗದಂತೆ ಜಾರಿಹೋಗುವ

ಯಾರನ್ನು ನೋಡಿ ಟಗರಳು ನಂದನ ಬಗ್ಗೆ ಇಷ್ಟು ಚಿಂತೆ ಮಾಡತೊಡಗಿದಳೊ, ಯಾರ ಬಗ್ಗೆ ಆಕೆಯಲ್ಲಿ ಇಷ್ಟು ದ್ವೇಷವು ಉತ್ಪನ್ನವಾಯಿತೊ ಡಾಕ್ಟರರು ಇಷ್ಟು ಕುತ್ಸಿತ ಭಾವನೆಯನ್ನು ತಾಳಿದರೊ ಆಕೆ ಯಾರು? ಟಗರಳು ಎಂದಿದ್ದಳು—ಇದೇ ಕೆಲಸವನ್ನು ಮಾಡುತ್ತಾ ನನ್ನ ಕೂದಲು ಬೆಳ್ಳಗೆ ಆಗಿವೆ. ನನ್ನ ಕಣ್ಣಿನಲ್ಲಿ ಮಣ್ಣನ್ನೆರಚುವಂತಹಳು ಯಾರು ? ಡಾಕ್ಟರರು ಇಂತಹ ಘಟನೆಗಳನ್ನು ನಿತ್ಯ ನೋಡುತ್ತಿರುವುದರಿಂದ ತಮಗೆ ದಿವ್ಯದೃಷ್ಟಿ ಬಂದಿದೆಯೆಂದು ಹೇಳಿದ್ದರು. ತಮ್ಮ ಕಣ್ಣುಗಳಲ್ಲಿ ಆ ದೃಷ್ಟಿಯಿಲ್ಲವೆಂದು ಯಾರಾದರೂ ತೋರಿಸಿಕೊಟ್ಟರೆ ತಮ್ಮ ಕಣ್ಣುಗಳನ್ನು ಕಿತ್ತುಹಾಕಲಿಕೂ ತಾವು ಸಿದ್ಧರಿರುವೆವೆಂದು ಹೇಳಿದ್ದರು.

ಹೀಗೆಯೆ ಆಗುವುದು. ಪರರ ವಿಚಾರ ಮಾಡುವಾಗ ಪ್ರತಿಯೊಬ್ಬನೂ ತಾನು ತಪ್ಪನ್ನು ಮಾಡಿರುವೆ, ತಾನು ಅಂತರ್ಯಾಮಿ ಅಲ್ಲ ಎಂದು ಹೇಳಲಾರ. ಮನುಷ್ಯರನ್ನು ಗುರುತಿಸುವುದರಲ್ಲಿ ತಾವು ಅದ್ವಿತೀಯರೆಂದೂ ಈ ವಿಷಯದಲ್ಲಿ

ತಾವೇ ಶ್ರೇಷ್ಠ ಮುತ್ತುಗಾರರೆಂದೂ ಹೇಳುವರು. ಆದಾಗ್ಯೂ, ಈ ಪ್ರಪಂಚ ದಲ್ಲಿ ತಮ್ಮ ಮನಸ್ಸನ್ನು ಚೆನ್ನಾಗಿ ಗುರುತಿಸಿದವರು ಒಬ್ಬರಾದರೂ ಇರುವರೆ ? ಅವರ ಅಸ್ತಿತ್ವದ ಬಗ್ಗೆ ನನಗಂತೂ ಸಮಾಚಾರವಿಲ್ಲ. ಆದರೆ ನನ್ನಂತೆ ಎಲ್ಲಿಯಾದರೂ ಯಾರಾದರೂ ಬಲವಾದ ಏಟನ್ನು ತಿಂದಿದ್ದರೆ ಅವರು ಎಚ್ಚ ರಾಗಿದ್ದಾರೆ. ಪ್ರಪಂಚದಲ್ಲಿ ಅನ್ನದಾಜೀಜೀಯಂತಹ ಹೆಂಗುಸರೂ ಇರು ವರು, ಬುದ್ಧಿಯ ಅಹಂಕಾರದಿಂದ ಅನ್ಯರನ್ನು ಬುದ್ಧಿಹೀನರೆಂದು ಬಗೆದು ಸ್ವತಃ ಬುದ್ಧಿವಂತರಾಗಿ ಇರುವುದಕ್ಕಿಂತ ಎಲ್ಲವನ್ನು ಅರಿತಿದ್ದರೂ ಅರಿಯ ದವರಂತೆ ಇರುವುದರಲ್ಲಿಯೆ ಹೆಚ್ಚು ಬುದ್ಧಿವಂತಿಕೆಯಿದೆಯೆಂಬುದನ್ನು ಮನ-ದಲ್ಲಿಯೆ ಒಪ್ಪಬೇಕಾಗುವುದು ಆದುದರಿಂದ ಈ ಇರ್ವರೂ ಹೆಂಗುಸರ ಉಪದೇಶವು ಭ್ರಾಂತಿಯುಕ್ತವಾದುದಲ್ಲವೆಂದು ಒಪ್ಪಲಿಲ್ಲ ಆದರೆ ಡಾಕ್ಟರ ಬಾಬುಗಳು ಹೇಳಿದ್ದರು 'ಫಾರ್ವರ್ಡ್' ಇದ್ದಾಳೆ ಎಂದು ; ಅವರ ಮಾತು ಮಾತ್ರ ಬಹಳ ಸರಿಯೆಂದು ಎನಿಸಿತು ಆದರೆ ಅವರ ಈ ಮಾತೇ ನನ್ನನ್ನು ಆಗಾಗ್ಗೆ ಇರಿಯತೊಡಗಿತು.

ಬಹಳ ರಾತ್ರಿಯಾಗಿತ್ತು, ಪುನಃ ಆ ಹೆಣ್ಣುಮಗಳು ನನ್ನನ್ನು ಕರೆ ಕಳುಹಿದಳು ಈ ಬಾರಿ ಆ ಹೆಣ್ಣುಮಗಳ ಪರಿಚಯುವು ನನಗಾಯಿತು ಆಕೆಯ ಹೆಸರು ಅಭಯಾ ಉತ್ತರರಾಢೀ ಕಾಯಸ್ಥ ಜಾತಿಯವಳು, ಆಕೆಯ ಊರು ಇರುವುದು ಬಾಲೂಚರದ ಬಳಿಯಲ್ಲಿ ಕಾಯಿಲೆ ಬಿದ್ದವನು ದೂರದಿಂದ ಆಕೆಗೆ ಸಹೋದರನಾಗಬೇಕು. ಅವನ ಹೆಸರು ರೋಹಿಣಿಸಿಂಹ. "ಔಷಧದಿಂದ ರೋಹಿಣೀಸಿಂಹನಿಗೆ ಬಹಳ ಲಾಭವಾಗಿದೆ" ಎಂದು ಹೇಳ ತೊಡಗಿ ಅಲ್ಪಾವಧಿಯಲ್ಲಿ ಅಭಯಾ ನನ್ನನ್ನು ತನ್ನ ಆತ್ಮೀಯನನ್ನಾಗಿ ಮಾಡಿಕೊಂಡಳು. ನನ್ನ ಮನದಲ್ಲಿ ಇಷ್ಟೊತ್ತಿನಿಂದ ಒಂದು ಕಠೋರ ವಿಮರ್ಶೆಯ ಭಾವನೆಯು ಏಳುತ್ತಿತ್ತೆಂದು ನಾನು ಒಪ್ಪಿಕೊಳ್ಳಲೇಬೇಕು. ಆದಾಗ್ಯೂ ಈ ಹೆಂಗುಸಿನ ಮಾತಿನಲ್ಲಿ ಮತ್ತು ವಿಮರ್ಶೆಯಲ್ಲಿ ಇನಿತಾದರೂ ಅಸಂಗತಿ ಮತ್ತು ಅನುಚಿತ ಮಾತನ್ನು ನಾನು ಕಂಡು ಹಿಡಿಯದಾದೆ.

ಅಭಯಾಳಲ್ಲಿ ಮನುಷ್ಯನನ್ನು ವಶಮಾಡಿಕೊಳ್ಳುವ ಅದ್ಭುತಶಕ್ತಿ-ಯಿದೆ. ಆಕೆಯು ಕೇವಲ ನನ್ನ ಹೆಸರು-ಊರುಗಳನ್ನು ಕೇಳಿಕೊಂಡಳು ಅಷ್ಟೇ ಅಲ್ಲ, ನಾನು ಆಕೆಯ ಕಳೆದು ಹೋದ ಪತಿಯನ್ನು ಹುಡುಕಿಕೊಡ ಬೇಕೆಂಬ ಬಗ್ಗೆ ನನ್ನಿಂದ ವಚನವನ್ನೂ ಪಡೆದುಕೊಂಡಳು. ಆಕೆಯ ಗಂಡ

ಎಂಟು ವರ್ಷಗಳ ಹಿಂದೆ ನೌಕರಿ ಮಾಡಲು ಬರಮಾಕ್ಕೆ ಬಂದಿದ್ದ. ಎರಡು ವರ್ಷಗಳ ತನಕ ಅವನಿಂದ ಕಾಗದ-ಪತ್ರಗಳು ಬರುತ್ತಿದ್ದುವು. ಆದರೆ ಇತ್ತ ಆರು ವರ್ಷಗಳಿಂದ ಅವನ ಪತ್ತೆಯೇ ಇಲ್ಲ. ಊರಲ್ಲಿ ಆಕೆಯ ಪರಿವಾರ ದವರು ಯಾರೂ ಇಲ್ಲ. ತಾಯಿಯೊಬ್ಬಳು ಇದ್ದಳು, ಆಕೆಯೂ ಸುಮಾರು ಒಂದು ತಿಂಗಳ ಹಿಂದೆ ತೀರಿಹೋದಳು. ತಂದೆಯ ಮನೆಯಲ್ಲಿ ಯಾರೂ ಆಕೆಯ ಹಿತಚಿಂತಕರು ಇಲ್ಲದ ಕಾರಣ ತಂದೆಯ ಮನೆಯಲ್ಲಿರುವುದು ಅಸಂಭವವಾದುದರಿಂದ ರೋಹಿಣಿಸಿಂಹನ ಮನವೊಲಿಸಿ ಅವನನ್ನು ಬರ್ಮಾಕ್ಕೆ ಕರೆದುಕೊಂಡು ಬಂದಿರುವಳು

ಸ್ವಲ್ಪ ಸಮಯ ಸುಮ್ಮಗಿದ್ದು "ನಾನು ಇಷ್ಟಾದರೂ ಪ್ರಯತ್ನಮಾಡದೆ ಮನೆಯಲ್ಲಿ ಇದ್ದುಬಿಟ್ಟಿದ್ದರೆ ಒಳ್ಳೆಯದಾಗುತ್ತಿದ್ದಿತೆ? ಮೇಲಾಗಿ ಈ ವಯಸ್ಸಿನಲ್ಲಿ ಕೆಟ್ಟ ಹೆಸರನ್ನು ಪಡೆದುಕೊಳ್ಳಲು ಏನು ತಡ ಹಿಡಿಯುವುದು?" ಎಂದಳು.

ನಾನು "ಅವರು ಇಷ್ಟು ವರ್ಷಗಳ ವರೆಗೆ ನಿಮ್ಮ ಚಿಂತೆ-ಪರಿವೆಯನ್ನು ಏಕೆ ಮಾಡಲಿಲ್ಲ ಎಂಬುದು ನಿಮಗೆ ಗೊತ್ತಿರುವುದೇನು?" ಎಂದು ಪಶ್ನೆ ಮಾಡಿದೆ.

"ಇಲ್ಲ, ಎಷ್ಟೂ ಗೊತ್ತಿಲ್ಲ."

"ಇದಕ್ಕೂ ಮೊದಲು ಅವರು ಎಲ್ಲಿದ್ದರು ಎಂಬುದು ನಿಮಗೆ ಗೊತ್ತಿರು ವುದೇನು?"

"ಗೊತ್ತಿದೆ. ರಂಗೂನಲ್ಲಿಯೇ ಇದ್ದರು, ಬರ್ಮಾ ರೇಲ್ವೆಯಲ್ಲಿ ಕೆಲಸ ಮಾಡುತ್ತಿದ್ದರು. ನಾನೆಷ್ಟೋ ಪತ್ರಗಳನ್ನು ಬರೆದೆ, ಉತ್ತರವೇ ಬರಲಿಲ್ಲ. ಮೇಲಾಗಿ ನಾನು ಬರೆದ ಒಂದಾದರೂ ಪತ್ರವು ಹಿಂತಿರುಗಿ ಬರಲಿಲ್ಲ."

ಪ್ರತಿಯೊಂದು ಪತ್ರವೂ ಅಭಯಾನ ಗಂಡನಿಗೆ ಸಿಕ್ಕಿರುವುದರಲ್ಲಿ ಸಂದೇಹವಿಲ್ಲ. ಅವನೇಕೆ ಉತ್ತರವನ್ನಿತ್ತಿರಲಿಕ್ಕಿಲ್ಲ ಎಂಬುದರ ಸಂಭಾವ್ಯ ಕಾರಣವನ್ನು ನಾನು ಇದೀಗ ಡಾಕ್ಟರರಿಂದ ತಿಳಿದುಕೊಂಡಿರುವೆ. ಬಹಳ ಜನ ಬಂಗಾಲಿಗಳು ಬ್ರಹ್ಮದೇಶದ ಒರ್ವ ಸುಂದರಿಯನ್ನು ಮನೆಗೆ ತಂದು ಆಕೆಯೊಡನೆ ಸಂಸಾರಮಾಡುತ್ತಾರೆ. ಅವರಲ್ಲಿ ಕೆಲವರು ತಮ್ಮ ದೇಶಕ್ಕೆ ಎಂದೂ ಹಿಂತಿರುಗಿ ಹೋಗುವದೇ ಇಲ್ಲ.

ನಾನು ಸುಮ್ಮಗಿದ್ದುದನ್ನು ನೋಡಿ ಅಭಯಾ ವಿಚಾರಿಸಿದಳು "ಅವರು ಬದುಕಿಲ್ಲವೆಂದು ನಿಮಗೆನಿಸುವುದೇನು?"

"ಇಲ್ಲ. ಇದಕ್ಕೆ ತೀರ ವಿರುದ್ಧವಾಗಿ ನನಗೆನಿಸುವುದು. ಅವರು ಬದುಕಿರುವರೆಂದು ನಾನು ಆಣೆಮಾಡಿ ಹೇಳಬಲ್ಲೆ."

ಕೂಡಲೆ ಅಭಯಾ ಎದ್ದು ನನ್ನ ಅಡಿಗೆರಗಿ "ನಿಮ್ಮ ಬಾಯಿಯಲ್ಲಿ ಹಾಲುಸಕ್ಕರೆ ಬೀಳಲಿ ಶ್ರೀಕಾಂತಬಾಬೂ ಇದಕ್ಕೂ ಹೆಚ್ಚಿಗೆ ನನಗೇನೂ ಬೇಡ ಅವರು ಜೀವಿಸಿದ್ದರೆ ಸಾಕು" ಎಂದಳು.

ನಾನು ಸುಮ್ಮಗಿದ್ದೆ ಅಭಯಾ ಸಹ ಸ್ವಲ್ಪ ಹೊತ್ತು ಸುಮ್ಮಗಿದ್ದು "ತಾವು ಏನನ್ನು ವಿಚಾರಮಾಡುತ್ತಿರುವಿರೆಂಬುದು ನನಗೆ ಗೊತ್ತು" ಎಂದಳು.

"ಗೊತ್ತಿದೆಯೆ?"

"ಗೊತ್ತಿಲ್ಲದೇನು? ನೀವು ಪುರುಷರಾಗಿ ಯಾವುದರ ಬಗ್ಗೆ ವಿಚಾರ ಮಾಡುವಿರೊ ಅದರಿಂದ ನಮಗೆ ಭಯವಾಗುವುದಿಲ್ಲೇನು? ಆದರೆ ಆಗಲಿ, ನನಗೆ ಯಾವ ಭಯವೂ ಇಲ್ಲ —ನಾನು ನನ್ನ ಸವತಿಯ ಕೂಡ ಚೆನ್ನಾಗಿ ಇದ್ದುಕೊಂಡು ಸಂಸಾರ ಸಾಗಿಸಬಲ್ಲೆ."

ನಾನು ಸುಮ್ಮಗೇ ಇದ್ದೆ ನನ್ನ ಮನದೊಳಗಿನ ಮಾತನ್ನು ಅನುಮಾನದಿಂದ ತಿಳಿದುಕೊಳ್ಳಲು ಈ ಬುದ್ಧಿವಂತೆಗೆ ವೇಳೆ ಹಿಡಿಯಲಿಲ್ಲ. ಅವಳೆಂದಳು "ಸಂಸಾರವನ್ನು ಸಾಗಿಸಲು ನಾನು ಒಪ್ಪುವುದರಿಂದ ಮಾತ್ರ ಯಾವ ಪ್ರಯೋಜನವೂ ಆಗದು. ನನ್ನ ಸವತಿಯೂ ಇದಕ್ಕೆ ಒಪ್ಪುವಳೇ? ಇದನ್ನೇ ಯೋಚಿಸುತ್ತಿರುವಿರಲ್ಲವೇ?"

ನಿಜವಾಗಿಯೂ ನನಗೆ ಅತ್ಯಂತ ಆಶ್ಚರ್ಯ ನಾನು ಎಂದೆ "ಸರಿ ಇದೆ; ಹೀಗೆಯೆ ಇದ್ದ ಪಕ್ಷದಲ್ಲಿ ನೀವೇನು ಮಾಡುವಿರಿ?"

ಈ ಬಾರಿ ಅಭಯಾನ ಕಣ್ಣುಗಳು ತುಂಬಿಬಂದವು ಆಕೆಯು ತನ್ನ ನೀರುದುಂಬಿದ ದೃಷ್ಟಿಯನ್ನು ನನ್ನ ಕಡೆಗೆ ಹೊರಳಿಸಿ "ಈ ವಿಪತ್ಕಾಲದಲ್ಲಿ ನನಗೆ ಸ್ವಲ್ಪ ಸಹಾಯಮಾಡುವಿರಾ ಶ್ರೀಕಾಂತ ಬಾಬೂ? ರೋಹಿಣಿಸಿಂಹ ನಂತೂ ಬಹಳ ಸಭ್ಯ. ಇವನಿಂದ ನನಗೆ ಯಾವ ಉಪಕಾರವಾಗುವುದೂ ಸಾಧ್ಯವಿಲ್ಲ." ಎಂದಳು.

ನಾನು ಒಪ್ಪಿ "ಸಾಧ್ಯವಾದರೆ ಅವಶ್ಯವಾಗಿ ಮಾಡುವೆ; ಆದರೆ ಈ ಕೆಲಸದಲ್ಲಿ ಪರಕೀಯರಿಂದ ಯಾವ ಬಗೆಯ ಲಾಭವೂ ಆಗುವುದಿಲ್ಲ, ತದ್ವಿಪರೀತವಾಗುವುದು; ಕೆಲಸವು ಸಫಲವಾಗದೆ ಕೆಡುವುದು' ಎಂದೆ.

"ನಿಜ" ಎಂದು ಅಭಯಾ ಸ್ವಲ್ಪ ಯೋಚಿಸತೊಡಗಿದಳು.

ಮರುದಿನ ಹಡಗವು ಸುಮಾರು ಹನ್ನೊಂದು ಹನ್ನೆರಡರ ನಡುವೆ ಮುಟ್ಟುವುದು ಇದ್ದಿತು ಆದರೆ ಬೆಳಗಾಗುವ ಮೊದಲೇ ಸರ್ವರ ಮುಖದ ಮೇಲೆ ಭಯ ಮತ್ತು ಚಾಂಚಲ್ಯವು ಕಾಣಿಸತೊಡಗಿತು. ಸುತ್ತಲಿಂದ ಒಂದು ಅಸ್ಫುಟ ದನಿಯು ಕೇಳಬರತೊಡಗಿತು 'ಕೆರೊಂಟೀನ್! ಕೆರೊಂಟಿನ್!' ಸರಿಯಾಗಿ ಕೇಳಿದ ಮೇಲೆ ಅದು ಕ್ವಾರೆಂಟಾಯಿನ್ (Quarantine) ಎಂದು ಗೊತ್ತಾಯಿತು. ಆಗ ಬರ್ಮಾ ಸರಕಾರಕ್ಕೆ ಪ್ಲೇಗಿನ ಭಯವಿದ್ದಿತು. ತನ್ನ ದೇಶದಲ್ಲಿ ಈ ರೋಗವು ಹಬ್ಬಬಾರದೆಂದು ಅದು ಎಚ್ಚರಿಕೆಯನ್ನು ತೆಗೆದುಕೊಂಡಿತ್ತು ಪಟ್ಟಣದಿಂದ ಎಂಟು ಹತ್ತು ಮೈಲು ದೂರದಲ್ಲಿ ಉಸುಕಿನ ಪ್ರದೇಶದಲ್ಲಿ ಸ್ವಲ್ಪ ಸ್ಥಳವನ್ನು ಆಕ್ರಮಿಸಿ, ಸುತ್ತಲೂ ತಂತಿಯ ಬೇಲಿಯನ್ನು ಹಾಕಿ, ಕೆಲವು ಗುಡಿಸಲುಗಳನ್ನು ಹಾಕಿಸಿತ್ತು. ಆ ಗುಡಿಸಲುಗಳಲ್ಲಿಯೆ ಈ ಡೆಕ್ಕಿನ ಸಮಸ್ತ ಯಾತ್ರಿಕರನ್ನು ಮೊದಲು ಇಳಿಸಲಾಗುತ್ತಿತ್ತು ಇಲ್ಲಿ ಹತ್ತು ದಿನಸ ಇದ್ದಮೇಲೆ ಅವರನ್ನು ಪಟ್ಟಣಕ್ಕೆ ಹೋಗಲು ಬಿಡುತ್ತಿತ್ತು ಊರಲ್ಲಿ ಯಾವನಾದರೂ ಆಪ್ತನಿದ್ದರೆ, ಹೆಲ್ತ್ ಆಫೀಸರನಿಂದ ಪರವಾನಿಗೆಯನ್ನು ಪಡೆದುಕೊಂಡರೆ ಅವನಿಗೆ ಬೇಗ ಈ ಗುಡಿಸಲುಗಳಿಂದ ಬಿಡುಗಡೆಯು ದೊರೆಯುತ್ತಿತ್ತು. ಈ ಮಾತೇ ಬೇರೆ.

ಡಾಕ್ಟರರು ನನ್ನನ್ನು ತಮ್ಮ ಕೋಣೆಗೆ ಕರೆದೊಯ್ದು "ಶ್ರೀಕಾಂತ ಬಾಬೂ, ನೀವು ಬಿಡುಗಡೆಯ ಒಂದು ಪತ್ರವನ್ನು ಪಡೆದುಕೊಳ್ಳದೆ ಬಂದುದು ಸರಿಯಾಗಲಿಲ್ಲ, ಕ್ವಾರೆಂಟಾಯಿನಿಗೆ ಕರೆದುಕೊಂಡು ಹೋಗಿ ಈ ಜನರು ದನಕರುಗಳಿಗೆ ಕೂಡ ಕೊಡದಷ್ಟು ಕಷ್ಟವನ್ನು ಕೊಡುವರು, ದನಗಳಂತೆ ನಡೆಯಿಸಿಕೊಳ್ಳುವರು. ಸಾಮಾನ್ಯ ಜನರು ಈ ಕಷ್ಟವನ್ನು ಸಹಿಸಬಹುದು, ಆದರೆ ಒಳ್ಳೆಯವರಿಗೆ ಇಲ್ಲಿಯ ಕಷ್ಟವು ಮರ್ಮಾಂತಿಕವಾಗಿರುತ್ತದೆ. ಇಲ್ಲಿ ಕೂಲಿಗಳು ಸಿಗುವುದಿಲ್ಲ—ತಮ್ಮ ಸಾಮಾನುಗಳನ್ನು ತಾವೇ ಹೊತ್ತುಕೊಂಡು ಒಂದು ಜರ್ಜರವಾದ ನಿಚ್ಚಣಿಕೆಯನ್ನು ಹತ್ತಿ ಇಳಿಯಬೇಕಾಗುತ್ತದೆ, ಅಲ್ಲದೆ ಅವನ್ನು ಬಹಳ ದೂರ ಒಯ್ಯಬೇಕಾಗುತ್ತದೆ. ಅಲ್ಲಿಗೆ

ಹೋದ ಮೇಲೆ ಎಲ್ಲ ಬಟ್ಟೆಗಳನ್ನೂ ಹರವುತ್ತಾರೆ, ಬಳಿಕ ಅವನ್ನು ಉಗಿಯಲ್ಲಿ ಕುದಿಸುತ್ತಾರೆ. ಅವು ತೊಟ್ಟುಕೊಳ್ಳುವಂತೆ ಉಳಿದರೆ ನಮ್ಮ ಭಾಗ್ಯವೆಂದು ತಿಳಿಯಬೇಕು ಇನ್ನೂ ಒಂದು ಮಾತೆಂದರೆ ಇಷ್ಟು ಭೀಷಣ ಬಿಸಿಲಿನಲ್ಲಿ ಇಷ್ಟು ಕಠೋರ ಕಷ್ಟವನ್ನು ಸಹಿಸುವುದು!'' ಎಂದು ಹೇಳಿದರು. ''ಇದಕ್ಕೆ ಉಪಾಯವೇನೂ ಇಲ್ಲವೆ? ಡಾಕ್ಟರರೆ?'' ಎಂದು ನಾನು ಭಯಗೊಂಡು ಕೇಳಿದೆ.

ಅವರು ತಲೆಯಲ್ಲಾಡಿಸಿ ''ಇಲ್ಲ. ಇಲ್ಲಿಯ ಡಾಕ್ಟರರು ಹಡಗನ್ನು ಏರಿಬಂದಾಗ ಒಂದು ಮಾತನ್ನು ಹೇಳಿನೋಡುವೆ ಅವರ ಕಾರಕೂನ ನಿಮ್ಮ ಜವಾಬ್ದಾರಿಯನ್ನು ಹೊರಲು ಸಿದ್ಧನಾದರೆ ಮಾತ್ರ—'' ಎಂದು ಹೇಳುವಷ್ಟರಲ್ಲಿ ಹೊರಗೊಂದು ಸಂಗತಿಯು ನಡೆಯಿತು ಅದನ್ನು ನೆನಸಿಕೊಂಡರೆ ಈಗಲೂ ನಾಚಿಕೆಯಿಂದ ಜೀವ ಹೋದಂತಾಗುವುದು ನಾವಿಬ್ಬರೂ ಹೊರಗಿನ ಶಬ್ದವನ್ನು ಕೇಳಿ ಹೊರಗೆಬಂದೆವು. ಹಡಗದ ದ್ವಿತೀಯ ಅಧಿಕಾರಿಯು ಕೆಲವರು ಅಂಬಿಗರನ್ನು ಮನಬಂದಂತೆ ಒದೆಯುತ್ತಿದ್ದ. ಬೂಟಿನ ಒದಿಕೆಗಳನ್ನು ತಿನ್ನುತ್ತ ಅವರು ಮನಬಂದಲ್ಲಿಗೆ ಓಡಿಹೋಗುತ್ತಿದ್ದರು. ಈ ಅಧಿಕಾರಿ ಒರ್ವ ಇಂಗ್ಲೀಷು ಯುವಕ. ಅವನೊಡನೆ ಡಾಕ್ಟರರು ಒಮ್ಮೆ ಸರಿಯಾಗಿ ಜಗಳವಾಡಿದ್ದರು ಪುನಃ ಈಗ ಬಾರಿ ಬಂದಿತು

ಡಾಕ್ಟರರು ಕೋಪದಿಂದ 'ನಿಮ್ಮ ಈ ಕಾರ್ಯವು ಅತ್ಯಂತ ನಿಂದಾಸ್ಪದವಾಗಿದೆ ಎಂದಾದರೊಂದು ದಿನ ಈ ಕಾರ್ಯಕ್ಕಾಗಿ ನೀವು ದುಃಖಪಡಬೇಕಾದೀತು ಎಂದು ನಾನು ಹೇಳುವೆ'' ಎಂದರು

ಅವನು ತಿರುಗಿನಿಂತು ''ಏಕೆ?'' ಎಂದ.

''ಈ ರೀತಿಯಾಗಿ ಒದೆಯುವುದು ಅತ್ಯಂತ ಅನ್ಯಾಯ ''

''ಏಟು ತಿನ್ನದೆ ಇವರು—ಮೋಚಿಗಳು ಸರಿಯಾಗುವರೆ?''

ಡಾಕ್ಟರರು ಸ್ವಲ್ಪ 'ಸ್ವದೇಶೀ ವಿಚಾರ'ದವರು ಇದ್ದರು. ಅವರು ಸ್ವಲ್ಪ ಉತ್ತೇಜಿತರಾಗಿ "ಇವರು ಪಶುಗಳಲ್ಲ, ಬಡ ಮನುಷ್ಯರು. ನಮ್ಮ ದೇಶೀ ಜನರು ಶಾಂತರೂ ನಮ್ರರೂ ಆಗಿರುವುದರಿಂದ ಕಪ್ತಾನರ ತನಕ ಹೋಗಿ ನಿಮ್ಮ ಬಗ್ಗೆ ದೂರು ಹೇಳುವುದಿಲ್ಲ, ಅದುದರಿಂದಲೇ ನಿಮಗೆ ಈ ಅತ್ಯಾಚಾರ ಮಾಡಲು ಸಾಹಸ ಬಂದಿದೆ'' ಎಂದರು.

ಒಮ್ಮೆಗೆ ಆ ಸಾಹೇಬನಿಗೆ ಅಕೃತ್ರಿಮ ನಗು ಬಂದಿತು. ಡಾಕ್ಟರರ ಕೈಯನ್ನು ಹಿಡಿದೆಳೆದು ತನ್ನ ಬೆರಳಿನಿಂದ ತೋರಿಸುತ್ತ ಅವನು ಎಂದ "Look, Doctor, there's your Countrymen, you ought to be proud of them" (ನೋಡಿರಿ ಡಾಕ್ಟರ, ಅಗೋ ಅವರೇ ನಿಮ್ಮ ದೇಶದ ಜನರು ನೀವು ಅವಶ್ಯವಾಗಿ ಅವರ ಬಗ್ಗೆ ಹೆಮ್ಮೆ ತಾಳ ಬೇಕು.)

ನಾನು ಕಣ್ಣೆತ್ತಿ ನೋಡಿದೆ, ಅವರು ಪೀಪೆಗಳ ಸಂದಿಯೊಳಗಿಂದ ಎದ್ದು ಬಟ್ಟೆಗಳನ್ನು ಜಾಡಿಸುತ್ತಿದ್ದರು ಹಲ್ಲು ಕಿರಿದು ನಗುತ್ತಿದ್ದರು. ಸಾಹೇಬ ಸ್ವಲ್ಪ ನಕ್ಕು ಎರಡೂ ಹೆಬ್ಬೆರಳುಗಳನ್ನು ಡಾಕ್ಟರರಿಗೆ ತೋರಿಸಿ ಸಿಳ್ಳು ಹಾಕುತ್ತ ಹೋದ ವಿಜಯದ ಅಹಂಕಾರವು ಅವನ ಶರೀರದಿಂದ ಹೊರಹೊಮ್ಮುತ್ತಿತ್ತೊ ಎನೊ ಎಂಬಂತೆ ನಡೆದ.

ಡಾಕ್ಟರರ ಮುಖವು ನಾಚಿಕೆಯಿಂದ, ಅಪಮಾನದಿಂದ, ಕ್ಷೋಭೆ ಯಿಂದ ಕಪ್ಪಾಯಿತು. ಅವರು ದೊಡ್ಡ ಹೆಜ್ಜೆಯಿಕ್ಕುತ್ತ ಕ್ರುದ್ಧದನಿಯಲ್ಲಿ "ನಿರ್ಲಜ್ಜ ಮಾನವ ಪಶುಗಳೇ, ಹಲ್ಲು ಕಿರಿದು ನಗುವಿರಾ?" ಎಂದ.

ಈಬಾರಿ, ಇಷ್ಟೊತ್ತಿನ ನಂತರ ದೇಶೀ ಜನರ ಅಭಿಮಾನವು ಜಾಗ್ರತ ವಾಯಿತು ಎಲ್ಲರೂ ಒಮ್ಮೆಗೆ ನಗುವನ್ನು ನಿಲ್ಲಿಸಿ "ಡಾಕ್ಟರರೇ, ನೀವು 'ಹಲ್ಲುಕಿರಿದು' ಎಂದು ಹೇಳುವಿರಾ? ಯಾರ ಸಾಲವನ್ನೂ ಮುಳುಗಿಸಿ ನಾವು ನಗುವುದಿಲ್ಲ?" ಎಂದರು

ನಾನು ಡಾಕ್ಟರರನ್ನು ಬಲಾತ್ಕಾರದಿಂದ ಎಳೆದುಕೊಂಡು ಅವರ ಕೋಣೆಗೆ ಒಯ್ದೆ. ಕುರ್ಚಿಯ ಮೇಲೆ ದೊಪ್ಪನೆ ಕೂಡ್ರುತ್ತ ಅವರು ಕೇವಲ 'ಓಃ!' ಎಂದರು

ಬೇರೊಂದು ಯಾವುದಾದರೂ ಮಾತು ಆಗ ಅವರ ಬಾಯಿಂದಹೊರಡು ವುದು ಅಸಂಭವವಾಗಿತ್ತು ಹನ್ನೊಂದು ಗಂಟೆಯ ಹೊತ್ತಿಗೆ ಕ್ವಾರಂಟಾ ಯಿನಿನ ಬಳಿ ಒಂದು ಚಿಕ್ಕ ಸ್ಟೀಮರು ಬಂದು ಹಡಗಕ್ಕೆ ಹೊಂದಿ ನಿಂತಿತು. ಈ ಸ್ಟೀಮರೇ ಡೆಕ್ಕಿನ ಎಲ್ಲ ಯಾತ್ರಿಕರನ್ನು ಆ ಭಯಾನಕ ಸ್ಥಳಕ್ಕೆ ಒಯ್ಯು ವುದು. ಸಾಮಾನುಗಳನ್ನು ಯಾತ್ರಿಕರು ಕಟ್ಟತೊಡಗಿದರು ನಾನು ಗಡಿ ಬಿಡಿ ಮಾಡುವ ಕಾರಣವಿರಲಿಲ್ಲ ಏಕೆಂದರೆ ಡಾಕ್ಟರರ ಸೇವಕನೊಬ್ಬ ಬಂದು

ಅಲ್ಲಿಗೆ ನಾನು ಹೋಗಬೇಕಾಗಲಿಕ್ಕಿಲ್ಲವೆಂದು ಹೇಳಿದ್ದ. ನಿಶ್ಚಲವಾಗಿ ಯಾತ್ರಿಕರ ಕೂಗಾಟ, ಚೀರಾಟ, ಓಡಾಟವನ್ನು ಅನ್ಯಮನಸ್ಕನಾಗಿ ನೋಡುತ್ತಿದ್ದೆ. ಇಷ್ಟರಲ್ಲಿ ಒಮ್ಮೆಗೆ ಹಿಂಬದಿಯಿಂದ ಒಂದು ಶಬ್ದವು ಕೇಳಿಬಂದಿತು, ತಿರುಗಿ ನೋಡಿದೆ—ಅಭಯಾ ನಿಂತಿದ್ದಳು ಆಶ್ಚರ್ಯದಿಂದ "ನೀವು ಇಲ್ಲಿಗೆ ಹೇಗೆ ಬಂದಿರಿ?" ಎಂದು ಕೇಳಿದೆ.

"ನೀವೇನೂ ನಿಮ್ಮ ಸಾಮಾನುಗೀಮಾನು ಕಟ್ಟುವುದಿಲ್ಲವೆ?"

"ಇಲ್ಲ, ನನಗೆ ಇನ್ನೂ ಸ್ವಲ್ಪ ತಡ, ನಾನಲ್ಲಿಗೆ ಹೋಗಬೇಕಾಗಿಲ್ಲ. ನಾನು ನೇರವಾಗಿ ಪಟ್ಟಣಕ್ಕೇ ಹೋಗುವೆ"

"ಆಗದು, ಬೇಗನೇ ಸಾಮಾನ್ನುಗಳನ್ನು ಕಟ್ಟಿರಿ"

"ಇನ್ನೂ ಸಮಯ ಬೇಕಾದಷ್ಟಿದೆ"

ಆಕೆಯು ಪ್ರಬಲ ವೇಗದಿಂದ ತಲೆಯಲ್ಲಾಡಿಸಿ "ಇಲ್ಲ, ಹಾಗೆ ಆಗದು. ನನ್ನನ್ನು ಬಿಟ್ಟು ನೀವು ಸರ್ವಥಾ ಹೋಗಬಾರದು" ಎಂದಳು

ನಾನು ಮುಂಗಾಣದೆ "ಇದೇನು! ನಾನಲ್ಲಿಗೆ ಹೋಗಬಾರದು." ಎಂದೆ

ಅಭಯಾ "ಹಾಗಾದರೆ ನಾನೂ ಹೋಗಬಾರದು. ನಾನು ಈ ನೀರಲ್ಲಿ ಹಾರಿ ಸತ್ತು ಹೋದರೂ ಪರವಾ ಇಲ್ಲ, ನಿರಾಶ್ರಿತಳಾಗಿ ನಾನೆಂದಿಗೂ ಅಲ್ಲಿಗೆ ಹೋಗಲಾರೆ. ಅಲ್ಲಿಯ ಎಲ್ಲ ಮಾತುಗಳನ್ನು ಕೇಳಿರುವೆ" ಎಂದಳು. ಹೀಗೆ ಎನ್ನುವಾಗ ಆಕೆಯ ಕಣ್ಣುಗಳಿಂದ ಹನಿಗಳು ಬಳಬಳ ಉದುರಿದುವು. ನಾನು ಶೂನ್ಯಬುದ್ಧಿಯಿಂದ ಕುಳಿತಿದ್ದೆ. ನನ್ನನ್ನು ತನ್ನ ಜೀವನದೊಡನೆ ಜಗಿ ಜೋಡಿಸಿಕೊಳ್ಳುತ್ತಿರುವ ಈ ಹೆಂಗಸು ಯಾರು?

ಆಕೆಯು ತನ್ನ ಸೆರಗಿನಿಂದ ಕಂಬನಿಗಳನ್ನು ಒರೆಯಿಸಿಕೊಳ್ಳುತ್ತ "ನನ್ನೊಬ್ಬಳನ್ನೇ ಬಿಟ್ಟು ಹೊರಟು ಹೋಗುವಿರಾ? ನೀವಿಷ್ಟು ನಿಷ್ಠುರರಾಗಿರುವಿರೆಂಬುದನ್ನು ನಾನು ವಿಚಾರ ಕೂಡ ಮಾಡಲಾರೆ. ಏಳಿರಿ ಕೆಳಗೆ ನಡೆಯಿರಿ. ನೀವಿರದಿದ್ದರೆ, ನಾನೊಬ್ಬಳೇ ಹೆಂಗುಸು ಈ ರೋಗಿಯನ್ನು ಕರೆದುಕೊಂಡು ಹೇಗೆ ಹೋಗುವುದು ನೀವೇ ಹೇಳಿರಿ?" ಎಂದಳು.

ನನ್ನ ಎಲ್ಲ ಸಾಮಾನುಗಳನ್ನು ತೆಗೆದುಕೊಂಡು ನಾನು ಚಿಕ್ಕ ಸ್ಟೀಮರನ್ನು ಹತ್ತಿದೆ ಆಗ ಡಾಕ್ಟರರು ಡೆಕ್ಕಿನಮೇಲೆ ನಿಂತಿದ್ದರು. ನನ್ನನ್ನು

ಅವರು ಈ ಸ್ಥಿತಿಯಲ್ಲಿ ಒಮ್ಮೆಗೆ ನೋಡಿ ಕೂಗಿದರು "ಬೇಡ, ಬೇಡ; ನೀವು ಹೋಗಬೇಕಾಗಿಲ್ಲ. ತಿರುಗಿ ಬರ್ರಿ, ತಿರುಗಿ ಬನ್ನಿರಿ ನಿಮಗೆ ಪರವಾನಿಗೆ ಸಿಕ್ಕಿದೆ—ಹುಕುಂ ಆಗಿದೆ—ನೀವು—"

ನಾನೂ ಕೈ ಅಲ್ಲಾಡಿಸುತ್ತ ಕೂಗಿ "ಅಸಂಖ್ಯ ಧನ್ಯವಾದಗಳು, ಇನ್ನೊಂದು ಹುಕುಮು ಆಗಿದೆ—ಅದರಿಂದ ನಾನು ಹೋಗಬೇಕಾಗಿದೆ" ಎಂದು ಹೇಳಿದೆ.

ಅವರ ದೃಷ್ಟಿಯು ಒಮ್ಮೆಗೆ ಅಭಯಾ ಮತ್ತು ರೋಹಿಣಿಯು ಕಡೆಗೆ ಹೋಯಿತು. ಆಗ ಅವರು ನಸುನಗುತ್ತ "ಹಾಗಾದರೆ ನೀವು ನನಗೆ ಏಕೆ ವ್ಯರ್ಥವಾಗಿ ತೊಂದರೆ ಕೊಟ್ಟಿರಿ?" ಎಂದರು.

"ಅದಕ್ಕಾಗಿ ಕ್ಷಮೆಬೇಡುವೆ."

"ಬೇಡ ಬೇಡ, ಕ್ಷಮೆಬೇಡುವುದಗತ್ಯವಿಲ್ಲ. ನಾನು ಮೊದಲಿಂದಲೇ ತಿಳಿದುಕೊಂಡಿದ್ದೆ. 'ಗುಡ್‌ಬಾಯ್'" ಎಂದು ಡಾಕ್ಟರರು ನಗೆಮೊಗದಿಂದ ಒಳಗೆ ಹೋದರು.

೫

'ಕ್ವಾರಂಟಾಯಿನ್' ಎಂಬ ಹೆಸರಿನ ಸೆರೆಮನೆಗೆ ಕಳಿಸುವ ಕಾಯಿದೆ ಕೇವಲ ಕೂಲಿಜನರಿಗೋಸ್ಕರ ಇರುವುದು; ಉಳಿದ ಮಹನೀಯರಿಗಾಗಿ ಇಲ್ಲ. ಹತ್ತು ರೂಪಾಯಿಗಳಿಗಿಂತ ಹೆಚ್ಚು ರೂಪಾಯಿ ಹಡಗದ ಬಾಡಿಗೆ ಕೊಡದಿದ್ದವರೇ 'ಕೂಲಿಜನರು'. ಚಹಾ-ತೋಟಗಳ ಕಾಯಿದೆಯು ಏನು ಹೇಳುವುದೊ ಗೊತ್ತಿಲ್ಲ, ಆದರೆ ಹಡಗುಪಡೆಯ ಕಾಯದೆ ಇದು ಅಧಿಕಾರಿಗಳಿಗೆ ಇದರ ಪ್ರತ್ಯಕ್ಷ ಜ್ಞಾನವು ಎಷ್ಟಿದೆಯೊ ಏನೊ; ಅದು ಅವರಿಗೆ ಗೊತ್ತು. ಆದುದರಿಂದ ಈ ಯಾತ್ರೆಯಲ್ಲಿ ನಾವೆಲ್ಲರೂ ಕೂಲಿಜನರೇ. ಕೂಲಿಜನರ ಸಾಮಾನುಗಳು ಬಹಳ ಇರುವುದಿಲ್ಲ, ತಮ್ಮ ಹೆಗಲ ಮೇಲೆ ಹೊತ್ತುಕೊಂಡು ಹೋಗುವಷ್ಟು ಮಾತ್ರ ಸಾಮಾನುಗಳು ಇರುವುವು, ಇವಕ್ಕಿಂತ ಅವರ ಸಾಮಾನುಗಳು ಹೆಚ್ಚಿಗೆ ಇರುವುದೂ ಉಚಿತವಲ್ಲ ಎಂದು ಸಾಹೇಬ್ ಜನರು ಅಭಿಪ್ರಾಯಪಡುವರು. ಆದುದರಿಂದ ಕೂಲೀಜನರ ಸಾಮಾನುಗಳನ್ನು ಒಯ್ಯಲಿಕ್ಕೆ ಹಡಗದ ಯಜಮಾನರು ಯಾವ ವ್ಯವಸ್ಥೆಯನ್ನೂ ಇಟ್ಟಿರುವುದಿಲ್ಲ ಎಂದು ಹೇಳಿದರೆ ಕೋಪಿಸಿಕೊಳ್ಳುವ ಕಾರಣವಿಲ್ಲ ಇದೆಲ್ಲವೂ ನಿಜ,

ಆದಾಗ್ಯೂ ಇದು ನಮ್ಮ ಭಾಗ್ಯದ ದೋಷವೆಂದೇ ತಿಳಿಯಬೇಕು—ಏನೆಂದರೆ ನಾವು ಮೂವರು ಪ್ರಾಣಿಗಳು ನಮ್ಮ ಗಂಟುಗಳನ್ನು ನಮ್ಮೆದುರಿಗೆ ಇಟ್ಟು ಕೊಂಡು ಪ್ರಚಂಡ ಸೂರ್ಯನ ಕೆಳಗೆ ಸುಡುತ್ತಿರುವ ಉಸುಕಿನ ರಾಶಿಯ ಮೇಲೆ ಒಬ್ಬರ ಮುಖವನ್ನು ಒಬ್ಬರು ನೋಡುತ್ತ ನಿಂತಿದ್ದೇವೆ ನಮ್ಮ ಸಂಗಡಿಗ ಯಾತ್ರಿಕರ ಪರಿಚಯವನ್ನು ಈ ಮೊದಲು ನಿಮಗೆ ಮಾಡಿಕೊಟ್ಟಿ ರುವೆ ಅವರು ತಮ್ಮ ತಮ್ಮ ಕಂಬಳಿಗಳನ್ನು ಬೆನ್ನ ಮೇಲೆ ಹಾಕಿಕೊಂಡು ಹೆಚ್ಚು ಭಾರವಿದ್ದ ಗಂಟುಗಳನ್ನು ತಮ್ಮ ಗೃಹಲಕ್ಷ್ಮಿಯರ ತಲೆಯ ಮೇಲೆ ಹೊರಿಸಿಕೊಂಡು ಆನಂದದಿಂದ ತಾವು ಹೋಗಬೇಕಾದ ಸ್ಥಳಕ್ಕೆ ಹೋಗಿ ಬಿಟ್ಟರು

ನೋಡು ನೋಡುವಷ್ಟರಲ್ಲಿ ರೋಹಿಣಿಸಿಂಹರು ನಡಗುತ್ತ ಹಾಸಿಗೆಯ ಸುರುಳಿಯ ಮೇಲೆ ಬಿದ್ದು ಬಿಟ್ಟರು ಜ್ವರ, ಹೊಟ್ಟೆನೋವು, ಅತ್ಯಂತ ದಣಿವು ಇವೇ ಮೊದಲಾದ ಕಾರಣಗಳಿಂದ ಅವರು ನಡೆಯುವ ಸ್ಥಿತಿಯಲ್ಲಿ ಇರಲಿಲ್ಲ, ಇಷ್ಟೇ ಅಲ್ಲ, ಕುಳಿತುಕೊಳ್ಳುವುದು ಕೂಡ ಅವರಿಗೆ ಆಗುತ್ತಿರಲಿಲ್ಲ ಮಲಗಿ ಕೊಳ್ಳುವುದರಲ್ಲಿಯೆ ಅವರ ಹಿತವಿದ್ದಿತು ಅಭಯಾ ಹೆಣ್ಣು ಜಾತಿ. ಉಳಿ ದವ ನಾನೊಬ್ಬ ಮತ್ತು ನನ್ನ ಹಾಗೂ ಪರರ ಗಂಟುಮೂಟೆಗಳು ನನ್ನ ಆಗಿನ ಸ್ಥಿತಿಯನ್ನು ನೀವು ಯೋಚಿಸಿ ನೋಡುವಂತಿದ್ದಿತು! ಅಕಾರಣವಾಗಿ ಒಂದು ಅಜ್ಞಾತ, ಅಪ್ರೀತಿಕರ ಸ್ಥಾನಕ್ಕೆ ನಾನು ಹೋಗುತ್ತಿದ್ದೆ, ಒಂದು ಭುಜದ ಮೇಲೆ ಅಜ್ಞಾತ, ಅಸಹಾಯ ಸ್ತ್ರೀಯೊಬ್ಬಳ ಭಾರವಿದ್ದಿತು, ಇನ್ನೊಂದು ಭುಜದ ಮೇಲೆ ಅಷ್ಟೇ ಅಜ್ಞಾತ, ಅಪರಿಚಿತ, ಅನಾರೋಗ್ಯ ದಿಂದ ಬಳಲುವ ಯುವಕನ ಭಾರವಿದ್ದಿತು, ಮೇಲಾಗಿ ಈ ಗಂಟು ಮೂಟೆ ಗಳು! ಇವುಗಳ ಮಧ್ಯದಲ್ಲಿ ಸಹಿಸಲಸಾಧ್ಯವಾದ ಬಾಯಾರಿಕೆಯಿಂದ ಗಂಟ ಲನ್ನು ಒಣಗಿಸಿಕೊಂಡು ಮುಂಗಾಣದವನಾಗಿ ಒಂದು ಅಜ್ಞಾತ ಸ್ಥಳದಲ್ಲಿ ನಿಂತಿರುವೆ. ನನ್ನ ಈ ಚಿತ್ರವನ್ನು ಕಲ್ಪನಾಚಕ್ಷುಗಳಿಂದ ಕೆಲವರು ಪಾಠಕರು ನೋಡಿ ನಕ್ಕು ನಲಿಯಬಹುದು, ಕೆಲವರ ಸುಹೃದಯ ಪಾಠಕರು ನನ್ನ ಈ ನಿಸ್ವಾರ್ಥ ಪರೋಪಕಾರ ಬುದ್ಧಿಯನ್ನು ಹೊಗಳಬಹುದು, ಆದರೆ ಈ ನಿರ್ಭಾಗ್ಯ ಮಾನವನ ಹೃದಯ ಪಶ್ಚಾತ್ತಾಪದಿಂದ ತಳಮಳಿಸುತ್ತಿತ್ತೆಂದು ಹೇಳಲಿಕ್ಕೆ ನನಗೆ ನಾಚಿಕೆಯಿಲ್ಲ ನನ್ನನ್ನು ನಾನೇ ಮನದಲ್ಲಿ ಏಷ್ಟೋಬಾರಿ ಧಿಕ್ಕರಿ ಸುತ್ತ ಎಂದುಕೊಳ್ಳುತ್ತಿದ್ದೆ—ನನ್ನಂತಹ ಕಷ್ಟಿ ತ್ರಿಲೋಕದಲ್ಲಿ ಎಲ್ಲಿಯೂ

ಇರಲಿಕ್ಕಿಲ್ಲ! ಆದರೆ, ಈ ಸಾಮಾನುಗಳನ್ನೂ ಇರ್ವರು ಮಾನವರ ಭಾರವನ್ನೂ ಹೊರುವುದಕ್ಕಾಗಿ ಹಡಗದ ಇಷ್ಟು ಜನರಲ್ಲಿ ಈ ಕತ್ತೆಯನ್ನೇಕೆ ಆರಿಸಿದಳು? ಈ ಕತ್ತೆ ಭಾರವನ್ನು ಸರಿಯಾಗಿ ಹೊರಬಲ್ಲದು ಎಂಬುದನ್ನು ಹೇಗೆ ಕಂಡು ಹಿಡಿದಳು? ಇದೊಂದು ನನಗೆ ಅರಿಯದ ಅಚ್ಚರಿಯ ಮಾತಾಗಿರುವುದು

ಆದರೆ, ನನ್ನ ಅಚ್ಚರಿಯು ದೂರಾದುದು ಆಕೆಯ ನಗುವಿನಿಂದ. ಆಕೆಯು ಸ್ವಲ್ಪ ತಲೆಯೆತ್ತಿ ನಕ್ಕಳು. ಆಕೆಯ ನಗುದುಂಬಿದ ಮೊಗವನ್ನು ನೋಡಿ ಪುನಃ ಅಚ್ಚರಿಯಾಯಿತು, ಅಷ್ಟೇ ಅಲ್ಲ, ಅಲ್ಲಿ ನನಗೆ ಭಯಾನಕ ದುಃಖದ ನೆರಳೂ ಕಾಣಿಸಿತು ಆದರೆ, ಎಲ್ಲಕ್ಕೂ ಹೆಚ್ಚು ಅಚ್ಚರಿಯಾದುದು ಒಬ್ಬ ಹಳ್ಳಿಯ ಹೆಂಗುಸಿನ ಮಾತನ್ನು ಕೇಳಿ. ಆಕೆಯು ನಾಚಿಕೆ ಮತ್ತು ಕೃತಜ್ಞತೆಯಿಂದ ಭೂಮಿಗೆ ಕುಸಿದು ಭಿಕ್ಷೆಯನ್ನು ಬೇಡಬೇಕಾಗಿದ್ದಿತು, ಆದರೆ ಆಕೆಯು ನಕ್ಕು "ಬಹಳ ಮೋಸಹೋದೆನೆಂದು ವಿಚಾರ ಮಾಡೀರಿ ಮತ್ತೆ! ಅನಾಯಾಸವಾಗಿ ಹೋಗಬಹುದಾಗಿತ್ತು, ಆದಾಗ್ಯೂ ಹೋಗಲಿಲ್ಲ ಇದಕ್ಕೇ ಎನ್ನುವರು 'ದಾನ'ಎಂದು ಆದರೆ ನಾನು ನಿಮಗೆ ಹೇಳುವೆ—ಇಂತಹ ದಾನ ಮಾಡುವ ಸುಯೋಗ ಜೀವನದಲ್ಲಿ ಬಹಳ ಕಡಿಮೆ ದೊರೆಯುವುದು. ಇರಲಿ ಬಿಡಿ ಈ ಮಾತುಗಳು. ಸಾಮಾನುಗಳು ಇಲ್ಲಿಯೆ ಬಿದ್ದಿರಲಿ, ಇವನನ್ನು ಎಲ್ಲಾದರೂ ನೆರಳಲ್ಲಿ ಮಲಗಿಸಲಾದೀತೊ ಇಲ್ಲವೊ ಎಂಬುದನ್ನು ನೊಡೋಣ ನಡೆಯಿರಿ" ಎಂದಳು

ಕೊನೆಗೆ ಸಾಮಾನುಗಳ ಮಮತೆಯನ್ನು ಬಿಟ್ಟು ರೋಹಿಣಿ ಭೈಯಾ ನನ್ನು ಹೆಗಲ ಮೇಲೆ ಹೊತ್ತುಕೊಂಡು ಕ್ವಾರಂಟಾಯನದ ಕಡೆಗೆ ನಡೆದೆ. ಅಭಯಾ ಒಂದು ಚಿಕ್ಕ ಪೆಟ್ಟಿಗೆಯನ್ನು ಹಿಡಿದುಕೊಂಡು ನನ್ನನ್ನು ಹಿಂಬಾಲಿಸಿದಳು ಮತ್ತು ನಮ್ಮ ಸಾಮಾನುಗಳು ಅಲ್ಲಿಯೆ ಬಿದ್ದಿದ್ದವು. ನಮ್ಮ ಯಾವ ಸಾಮಾನುಗಳೂ ಕಳೆದು ಹೋಗಲಿಲ್ಲ, ಎರಡು ಗಂಟೆಯ ಕಾಲ ಕಳೆದ ಬಳಿಕ ಆ ಸಾಮಾನುಗಳನ್ನು ಒಯ್ಯುವ ವ್ಯವಸ್ಥೆಯನ್ನು ಮಾಡಿದೆವು.

ನಿಜವಾದ ಸಂಕಟವು ಕಾಲ್ಪನಿಕ ಸಂಕಟಕ್ಕಿಂತ ಅದೆಷ್ಟೊ ಪಾಲು ಸಹಜ ಮತ್ತು ಸಹ್ಯವಾಗಿರುವುದೆಂದು ಎಷ್ಟೋ ಬಾರಿ ತೋರುವುದು ಈ ಬಗೆಯ ವಿಚಾರವಿದ್ದರೆ ಅದೆಷ್ಟೊ ದುಶ್ಚಿಂತೆಗಳಿಂದ ನಾವು ಪಾರಾಗಿರಬಹುದು. ಆದುದರಿಂದ, ನನಗೆ ಸ್ವಲ್ಪ ಕಷ್ಟ ಮತ್ತು ಅನಾನುಕೂಲತೆಯಾದರೂ ನಾವು ಕ್ವಾರಂಟಾಯಿನದಲ್ಲಿ ದಿನಗಳನ್ನು ಹೆಚ್ಚು ವಿಶ್ರಾಂತಿಯಲ್ಲಿ

ಕಳೆದೆವು ಎಂಬುದನ್ನು ನಾನು ಹೇಳದೆ ಇರಲಾರೆ. ಮೇಲಾಗಿ, ದುಡ್ಡು ಖರ್ಚು ಮಾಡಿದರೆ ಯಮುನೂರಲ್ಲಿಯೂ ಅಳಿಯತನವಾಗುವುದು ಎಂದ ಮೇಲೆ ಈ ಕ್ವಾರಂಟಾಯಿನ್ ಏನು!

ಡಾಕ್ಟರರ್‍ಹೇಳಿದ್ದರು "ಈ ಹೆಂಗುಸು ಬಹಳ 'ಫಾರವರ್ಡ' ಇದ್ದಾಳೆ'' ಎಂದು. ಆದರೆ ಪ್ರಸಂಗ ಬಂದಾಗ ಈ ಹೆಂಗುಸು ಎಷ್ಟು " ಫಾರ್ವರ್ಡ್ ' ಆಗುವಳೆಂಬುದರ ಕಲ್ಪನೆಯನ್ನು ಅವರು ಮಾಡಿರಲಿಕ್ಕಿಲ್ಲ ರೋಹಿಣಿಸಿಂಹ ನನ್ನು ನಾನು ಭುಜದ ಮೇಲಿಂದ ಕೆಳಗಿಳಿಸಿದ ಬಳಿಕ ಅಭಯಾ ಎಂದಳು 'ಸರಿ, ಇನ್ನು ನೀವೇನೂ ಮಾಡಬೇಕಾದುದಿಲ್ಲ ಶ್ರೀಕಾಂತ ಬಾಬೂ ನೀವು ವಿಶ್ರಾಂತಿಯನ್ನು ತೆಗೆದುಕೊಳ್ಳಿರಿ ಇನ್ನು ಮಾಡಬೇಕಾದುದನ್ನು ನಾನು ಮಾಡುವೆ ''

ನಿಜವಾಗಿಯೂ ನನಗೆ ವಿಶ್ರಾಂತಿಯೂ ಬೇಕಾಗಿತ್ತು. ದಣಿವಿನಿಂದ ಎರಡೂ ಕಾಲುಗಳು ಹಂಯುತ್ತಿದ್ದುವು ಆದರೂ ನಾನು ಅಚ್ಚರಿಯಿಂದ ''ನೀವೇನು ಮಾಡುವಿರಿ?'' ಎಂದೆ

''ಕೆಲಸಕ್ಕೇನು ಕಡಿಮೆ? ಸಾಮಾನುಗಳನ್ನು ತರಬೇಕು, ಒಂದು ಒಳ್ಳೆಯ ಕೋಣೆಯನ್ನು ಹುಡುಕಿ ನಿಮ್ಮಿಬ್ಬರಿಗೂ ಹಾಸಿಗೆ ಹಾಸಿ ಕೊಡ ಬೇಕು, ಅಡುಗೆ ಮಾಡಿ ನಿಮ್ಮಿಬ್ಬರಿಗೂ ಸ್ವಲ್ಪ ಊಟಕ್ಕೆ ಹಾಕಬೇಕು, ಆ ಮೇಲೆ ನನ್ನ ಊಟ, ಆ ಮೇಲೆ ನನಗೆ ವಿಶ್ರಾಂತಿ— ಬೇಡ, ಬೇಡ, ಏಳ ಬೇಡಿರಿ; ನನ್ನಾಣೆಯಾಗಿದೆ ನಾನು 'ಹಾ ಹಾ' ಎನ್ನುವಷ್ಟರಲ್ಲಿ ಎಲ್ಲವನ್ನೂ ಮಾಡಿಬಿಡುವೆ '' ಎಂದು ಅಭಯಾ ಸ್ವಲ್ಪ ನಕ್ಕು " ಹೆಂಗುಸಾಗಿ ಈಕೆ ಯೊಬ್ಬಳೆ ಎಲ್ಲ ವ್ಯವಸ್ಥೆಯನ್ನು ಮಾಡುವಳೇ? ಎಂಬುದನ್ನು ಯೋಚಿಸುತ್ತಿ ರುವಿರಲ್ಲವೆ?— ಏಕೆ ಮಾಡಲಾರೆ? ಒಳ್ಳೇದು, ಇಷ್ಟು ಜನರಲ್ಲಿ ನಿಮ್ಮನ್ನೇ ಹುಡುಕಿ ತೆಗೆಯುವವರಾದರೂ ಯಾರು ಇದ್ದರು ಹಡಗದಲ್ಲಿ? ನಾನೇ ಇರಲಿ ಲ್ಲವೆ? ಮತ್ತಾರಾದರೂ ಇದ್ದರೊ? '' ಎಂದು ನುಡಿದು ಒಂದು ಚಿಕ್ಕ ಪೆಟ್ಟಿ ಗೆಯನ್ನು ತೆರೆದಳು ಅದರೊಳಗಿಂದ ಸ್ವಲ್ಪ ರೂಪಾಯಿಗಳನ್ನು ಹೊರಗೆ ತೆಗೆದು ಸೆರಗಿನಲ್ಲಿ ಕಟ್ಟಿಕೊಂಡಳು ಮತ್ತು ಕ್ವಾರಂಟಾಯಿನನ ಆಫೀಸಿನ ಕಡೆಗೆ ಹೊರಟಳು.

ಆಕೆಯಿಂದ ವ್ಯವಸ್ಥೆಯಾಗಲಿ ಆಗದಿರಲಿ, ನನಗಂತೂ ಸ್ವಲ್ಪ ಕುಳಿತು ಕೊಳ್ಳಲಿಕ್ಕೆ ವೇಳೆಯು ದೊರೆಯಿತು, ಅದರಿಂದ ನನ್ನ ಜೀವವಂತೂ ಬದುಕಿ

ಉಳಿಯಿತು. ಅರ್ಧ ಗಂಟೆಯೊಳಗೆ ಒಬ್ಬ ಸಿಪಾಯಿಯು ನನ್ನನ್ನು ಕರೆಯ ಬಂದ. ರೋಹಿಣಿಯನ್ನು ಜೊತೆಗೆ ಕರೆದುಕೊಂಡು ನಾನು ಅವನೊಡನೆ ಹೊರಟೆ. ನಾನು ನೋಡಿದೆ—ನಮ್ಮ ವಾಸದ ಕೋಣೆಯು ಚೆನ್ನಾಗಿಯೆ ಇದ್ದಿತು. ಡಾಕ್ಟರಣಿಯು ಸ್ವತಃ ನಿಂತು ಕೋಣೆಯನ್ನು ಸ್ವಚ್ಛ ಮಾಡಿಸುತ್ತಿದ್ದಳು ಆವಶ್ಯಕ ವಸ್ತುಗಳು ಬಂದಿವೆ, ಎರಡು ಮಂಚಗಳ ಮೇಲೆ ಎರಡು ಹಾಸುಗೆಗಳೂ ಹಾಸಲ್ಪಟ್ಟಿವೆ ಒಂದೆಡೆಗೆ ಹೊಸ ಗಡಿಗೆಗಳು, ಅಕ್ಕಿ, ಬೇಳೆ, ಬಟಾಟೆ, ತುಪ್ಪ, ಮೈದಾ, ಕಟ್ಟಿಗೆ ಮೊದಲಾದ ಎಲ್ಲ ವಸ್ತುಗಳು ಇದ್ದುವು. ಮದ್ರಾಸೀ ಡಾಕ್ಟರಣಿಯ ಕೂಡ ಹರಕು ಮುರುಕು ಹಿಂದುಸ್ತಾನಿಯಲ್ಲಿ ಅಭಯಾ ಮಾತನಾಡುತ್ತಿದ್ದಳು ನನ್ನನ್ನು ನೋಡಿದ ಕೂಡಲೆ ಆಕೆಯು "ನಾನು ಒಂದೆರಡು ಕೊಡ ನೀರು ತಲೆಯ ಮೇಲೆ ಸುರುವಿಕೊಂಡು ಮೈ ತೊಳೆದುಕೊಂಡು ಬಂದು ಈ ಹೊತ್ತಿಗೆ ಸ್ವಲ್ಪ ಕಿಚಡಿಯನ್ನು ಬೇಯಿಸುವೆ ಅಲ್ಲಿಯ ವರೆಗೆ ನೀವು ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಿರಿ· ಸಾಯಂಕಾಲದ ಅಡುಗೆಯ ವಿಚಾರ ಆ ಮೇಲೆ ಮಾಡಿದರಾಯಿತು'' ಎಂದಳು. ಬಳಿಕ ಆಕೆಯು ಬಟ್ಟೆಗಳನ್ನು ತೆಗೆದುಕೊಂಡು ಡಾಕ್ಟರರಿಗೆ ನಮಸ್ಕರಿಸಿ, ಒಬ್ಬ ಅಂಬಿಗನನ್ನು ಕರೆದುಕೊಂಡು ಸ್ನಾನಕ್ಕೆ ಹೋದಳು ಈ ರೀತಿಯಾಗಿ ಆಕೆಯ ಜೋವಾಸನೆಯಲ್ಲಿ ನಮ್ಮ ದಿನಗಳು ಚೆನ್ನಾಗಿ ಕಳೆದುವು ಎಂಬ ಮಾತನ್ನು ಅತಿ ವರ್ಣಿಸಿ ಹೇಳಿಲ್ಲ.

ಈ ಅಭಯಾಳಲ್ಲಿ ನಾನು ಎರಡು ವಿಷಯಗಳನ್ನು ಅತ್ಯಂತ ಲಕ್ಷ್ಯಪೂರ್ವಕವಾಗಿ ನೋಡುತ್ತಿದ್ದೆ. ಇಂತಹ ಪರಿಸ್ಥಿತಿಯಲ್ಲಿ—ಇಂತಹ ಪರಸ್ಪರ ನೆಂಟಸ್ತಿಕೆಯಿಲ್ಲದ ಸ್ತ್ರೀ ಪುರುಷರಲ್ಲಿ ಸ್ನೇಹವು ತಾನಾಗಿಯೇ ಭರದಿಂದ ಬೆಳೆಯತೊಡಗುವುದು. ಆದರೆ ಆಕೆಯ ನಡತೆಯು ಎಂದೂ ಇದಕ್ಕೆ ಅನುವು ಕೊಡಲಿಲ್ಲ ನಾವು ಕೇವಲ ಯಾತ್ರಿಕರು, ಒಂದು ಸ್ಥಳದಲ್ಲಿ ಇಳಿದುಕೊಂಡಿರುವೆವು ಮಾತ್ರ, ಯಾರೊಡನೆಯೂ ಯಾರದೂ ನಿಜವಾದ ಸಂಬಂಧವು ಇಲ್ಲ; ಎರಡು ದಿನಗಳನಂತರ ಇಡಿ ಆಯುಷ್ಯದಲ್ಲಿ ಮತ್ತೊಂದಾದರೂ ಭೇಟಿಯಾಗಲಿಕ್ಕಿಲ್ಲ—ಎನ್ನುವಂತೆ ಆಕೆಯ ವ್ಯವಹಾರವಿತ್ತು. ಆಕೆಯು ಮಾಡುವ ಪರಿಶ್ರಮವು ಆನಂದ ಯುಕ್ತವಾಗಿತ್ತು, ಈ ರೀತಿ ಕೆಲಸ ಮಾಡುವಾಕೆಯನ್ನು ನಾನೆಲ್ಲಿಯೂ ನೋಡಿಲ್ಲ; ಆಕೆಯು ಇಡಿ ದಿನ ನಮ್ಮ ಸೇವೆಯಲ್ಲಿ ತತ್ಪರಳಾಗಿರುತ್ತಿದ್ದಳು, ತಾನೇ ಎಲ್ಲ ಕೆಲಸವನ್ನು ಮಾಡಬಯಸುವಳು. ನಾವು

ಸಹಾಯ ಮಾಡಲು ಪ್ರಯತ್ನ ಮಾಡಿದರೆ ಆಕೆಯು ನಗುತ್ತ ''ಇದೆಲ್ಲ ನನ್ನ ಕೆಲಸ. ಇಲ್ಲದಿದ್ದರೆ ರೋಹಿಣಿಯೂ ಇಷ್ಟು ಕಷ್ಟ ಏಕೆ ಪಡಬೇಕಾಗಿತ್ತು? ನೀವು ಈ ಜೇಲಿಗೆ ಯಾತಕ್ಕೋಸ್ಕರ ಬರಬೇಕಾಗಿತ್ತು? ನನಗಾಗಿಯೇ ನೀವು ಇಷ್ಟೆಲ್ಲ ಕಷ್ಟ ಸಹಿಸಬೇಕಾಯಿತು'' ಎನ್ನುತ್ತಿದ್ದಳು.

ದಿನಾಲು ಊಟವಾದ ಬಳಿಕ ಸ್ವಲ್ಪ ಹರಟೆಯಾಗುತ್ತಿದ್ದಿತು. ಆಫೀಸಿನ ಗಡಿಯಾರದಲ್ಲಿ ಎರಡು ಬಾರಿಸಿದೊಡನೆ ಆಕೆಯು ಚಟಕ್ಕನೆ ಎದ್ದು ನಿಂತು ''ಹೋಗುವೆ, ನಿಮಗೆ ಚಹಾ ಮಾಡಿಕೊಂಡು ಬರುವೆ— ಎರಡು ಗಂಟೆಯಾಯಿತು'' ಎಂದು ನುಡಿಯುತ್ತಿದ್ದಳು. ನಾನು ಮನದಲ್ಲಿಯೇ ಎಂದು ಕೊಳ್ಳುತ್ತಿದ್ದೆ 'ನಿನ್ನ ಪತಿ ಎಷ್ಟೇ ಪಾಪಿಯಾಗಿದ್ದರೂ ಮನುಷ್ಯ ಅವಶ್ಯ ಇರಬಹುದು ನೀನು ಅವನನ್ನು ಎಂದಾದರೂ ಪಡೆದರೆ, ಅವನಿಗೆ ನಿನ್ನ ಬೆಲೆಯು ಅವಶ್ಯವಾಗಿ ತಿಳಿಯುವುದು ''

ನಮ್ಮ ಕ್ವಾರಂಟೈಯಿನಿನ ಅವಧಿಯು ಒಂದು ದಿನ ಮುಗಿಯಿತು. ರೋಹಿಣಿಸಿಂಹನಿಗೂ ಗುಣವಾಯಿತು. ನಾವೂ ನಮ್ಮ ಗಂಟು ಮೂಟೆಗಳನ್ನು ಕಟ್ಟಿಕೊಂಡೆವು, ಬಿಡುಗಡೆಯಲ್ಲಿ ಕಾಗದವನ್ನು ಪಡೆದು ಕೊಂಡು ರಂಗೂನಕ್ಕೆ ಹೊರಟೆವು. ಪ್ರಯಾಣಿಕರ ಬಂಗ್ಲೆಯಲ್ಲಿ ಒಂದೆರಡು ದಿನ ಇದ್ದು ಇವರು ಇಳಿದುಕೊಳ್ಳುವುದಕ್ಕೆ ಮನೆಯ ವ್ಯವಸ್ಥೆಯನ್ನು ಮಾಡಿ ನನ್ನ ಸ್ಥಳಕ್ಕೆ ನಾನು ಹೋಗಬೇಕೆಂದು ನಿರ್ಧರಿಸಿದ್ದೆ ಮತ್ತು ನಾನಿದ್ದಲ್ಲಿಂದಲೇ ಆಕೆಯ ಪತಿಯನ್ನು ಹುಡುಕಿ, ಆ ಸಮಾಚಾರವನ್ನು ಅಭಯಾಗೆ ತಿಳಿಸಬೇಕೆಂದು ಬಗೆದಿದ್ದೆ.

ನಾವು ಊರಲ್ಲಿ ಕಾಲಿಟ್ಟ ದಿನ ಬರ್ಮೀಯರ ಒಂದು ಹಬ್ಬದ ದಿನವಾಗಿದ್ದಿತು ಅವರಿಗೆ ಹಬ್ಬಗಳು ಬಹಳ, ಒಂದರ ಹಿಂದೊಂದು ಬಂದೇ ಬರುತ್ತಿರುವುವು ಗಂಡುಸುರು ಹೆಂಗುಸುರು ರೇಶಮಿಯ ಬಟ್ಟೆಗಳನ್ನು ಧರಿಸಿಕೊಂಡು ಗುಂಪುಗುಂಪಾಗಿ ತಮ್ಮ ತಮ್ಮ ಗುಡಿಗಳಿಗೆ ಹೋಗುವರು. ಸ್ತ್ರೀ ಸ್ವಾತಂತ್ರ್ಯದ ದೇಶವದು; ಆದುದರಿಂದ ಅವರ ಆನಂದೋತ್ಸವಗಳಲ್ಲಿ ಹೆಂಗುಸರೇ ಹೆಚ್ಚು ಮುದುಕಿಯರು, ಯುವತಿಯರು, ಬಾಲಕೆಯರು— ಎಲ್ಲ ವಯಸ್ಸಿನ ಹೆಂಗುಸುರು ಅಪೂರ್ವಸುಂದರ ವಸ್ತ್ರಾಲಂಕಾರ ಮಾಡಿಕೊಂಡು ನಗುತ, ಹಾಡುತ, ಮಾತನಾಡುತ ಇಡಿ ಬೀದಿಯನ್ನು ನಲಿಸುತ ಬೆಡಗಿನಿಂದ ಹೋಗುತ್ತಿದ್ದರು. ಅವರೊಳಗೆ ಬಹಳ ಜನರ ಬಣ್ಣವು

ಬಿಳಿದು. ಮೇಘದಂತೆ ಕಪ್ಪಾದ ಕೂದಲಿನ ಭಾರವನ್ನು ಹೊತ್ತುಕೊಂಡು ಹೆಂಗುಸರು ಹೋಗುತ್ತಿದ್ದರು. ನೂರಕ್ಕೆ ತೊಂಬತ್ತೊಂಬತ್ತು ಸ್ತ್ರೀಯರ ಜಡೆಯು ಮೊಳಕಾಲ ಕೆಳಗಿನ ವರೆಗೆ ಜೋತಾಡುತ್ತಿದ್ದಿತು. ಜಡೆಯಲ್ಲಿ ಹೂವು, ಕಿವಿಯಲ್ಲಿ ಹೂವು, ಕೊರಳಲ್ಲಿ ಹೂಮಾಲೆ ಮುಖಾವರಣದ ಜೊಂಜಾಟವಿಲ್ಲ, ಗಂಡುಸರನ್ನು ಕಂಡು ಕೂಡಲೆ ಓಡಿಹೋಗಬೇಕೆನ್ನುವ ಪ್ರವೃತ್ತಿಯಿಲ್ಲ, ಲಜ್ಜೆಯಿಲ್ಲ, ನದಿಯ ಮುಕ್ತ ಪ್ರವಾಹದಂತೆ ಹೊರಟು ಹೋಗುತ್ತಿದ್ದರು ಮೊದಲು ಅವರನ್ನು ನೋಡಿ ಮುಗ್ಧನಾದೆ. ಈ ಹೆಂಗುಸರನ್ನು ನಮ್ಮ ಹೆಂಗುಸರೊಡನೆ ಹೋಲಿಸಿ ನೋಡಿ ಇವರನ್ನು ಹೊಗಳಿದೆ; ಹೀಗೆಯೇ ನಮ್ಮವರೂ ಆಗಬೇಕೆಂದೆ! ಹೀಗಾಗದೆ ಹೋದರೆ ಜೀವನವೇ ಇಲ್ಲ! ಅವರ ಸೌಭಾಗ್ಯವು ನಮ್ಮ ಮನದಲ್ಲಿ ಹೊಟ್ಟೆಯಕಿಚ್ಚನ್ನು ಹೊತ್ತಿಸಿತು. ಈ ಬಗೆಯಾಗಿ ಸುತ್ತಲೂ ಆನಂದದ ಸೃಷ್ಟಿಯನ್ನು ಮಾಡುವವರು ತಿರಸ್ಕಾರಕ್ಕೆ ಯೋಗ್ಯರೇ? ರಮಣಿಯರಿಗೆ ಇಷ್ಟು ಸ್ವಾತಂತ್ರ್ಯವನ್ನು ಕೊಟ್ಟು ಈ ದೇಶದ ಗಂಡುಸರು ಮೋಸಹೋಗಿರುವರೆ? ನೀವು ನಮ್ಮ ಹೆಂಗುಸರಿಗೆ ಸ್ವಾತಂತ್ರ್ಯವನ್ನು ಕೊಡದೆ ಬಂಧನದಲ್ಲಿ ಇಟ್ಟಿರುವುದರಿಂದ ನಮಗೆ ಯಾವ ಲಾಭವಾಗಿದೆ? ನಮ್ಮ ಹೆಂಗುಸರಾದರೂ ಎಂದಾದರೂ ಇಂತಹ ಒಂದು ದಿನ—

ಒಮ್ಮೆಗೇ ಒಂದು ಗೊಂದಲದ ಶಬ್ದವು ಕೇಳಿಸಿತು. ನಾನು ಹಿಂತಿರುಗಿ ಬಂದು ನೋಡಿದೆ. ಅಲ್ಲಿ ನಡೆದ ಸಂಗತಿಯು ಇನ್ನೂ ನನ್ನ ಮನದ ಮೇಲೆ ಮುದ್ರಿತವಾಗಿದೆ. ಜಗಳವಾಗುತ್ತಿತ್ತು ಟಾಂಗಾದ ಬಾಡಿಗೆಯ ವಿಷಯವಾಗಿ. ಟಾಂಗಾದವ ನಮ್ಮ ಕಡೆಯ ಹಿಂದುಸ್ತಾನೀ ಮುಸಲ್ಮಾನ. ಅವನು ಎಂಟು ಆಣೆ ಬಾಡಿಗೆ ಗೊತ್ತಾಗಿದೆ ಎಂದು ಎನ್ನುತ್ತಿದ್ದ. ಮೂವರು ಕುಲೀನ ಬರ್ಮೀ ಹೆಂಗುಸರು ಗಾಡಿಯಿಂದ ಇಳಿದು ಕೂಗಿ ಕೂಗಿ—ಐದಾಣೆ ಬಾಡಿಗೆ ಗೊತ್ತಾಗಿದೆ ಎಂದು ಹೇಳುತ್ತಿದ್ದರು ಎರಡು ಮೂರು ನಿಮಿಷ ಮಾತು-ಕತೆಯಾದ ಬಳಿಕ ಏನು? ಬಲಂ, ಬಲಂ, ಬಾಹುಬಲಂ ಬೀದಿಯ ಒಂದು ಬದಿಯಲ್ಲಿ ಒಬ್ಬ ದಪ್ಪಗಿನ ಕಬ್ಬಿನ ತುಂಡುಗಳನ್ನು ಮಾರುತ್ತಿದ್ದ. ಅಕಸ್ಮಾತ್ ಮೂವರೂ ಮೂರು ಕಬ್ಬಿನ ತುಂಡುಗಳನ್ನು ಹಿರಿದುಕೊಂಡು ಗಾಡಿಯವನ ಮೇಲೆ ಏರಿ ಹೋದರು. ಓಹೊ! ಎಷ್ಟು ಧೈರ್ಯದಿಂದ ಹೋಗುತ್ತಿದ್ದರು ಅವರು! ಪಾಪ, ಸ್ತ್ರೀಯರ ಶರೀರಕ್ಕೆ ಅವನು ಹೇಗೆ ಕೈಹಚ್ಚಬಲ್ಲ,

ತನ್ನ ಆತ್ಮ ರಕ್ಷಣೆಯನ್ನು ಮಾಡಿಕೊಳ್ಳಲು ಒಬ್ಬಳನ್ನು ತಡೆದರೆ ಇನ್ನೊಬ್ಬಳ ಏಟು ಬೀಳುತ್ತಿತ್ತು, ಸುತ್ತಲೂ ಜನರು ಒಟ್ಟುಗೂಡಿದರು ಕೇವಲ ತಮಾಷೆಯನ್ನು ನೋಡಲು. ಆ ಪಾಪ ಬಡ ಟಾಂಗಾದವನ ಟೊಪ್ಪಿಗೆ ಎಲ್ಲಿಗೆ ಹೋಯಿತೊ, ಚಾಬೂಕು ಯಾರ ಕೈಸೇರಿತೊ! ಅವನು ಇನ್ನು ಏಟುಗಳನ್ನು ಸಹಿಸಲಾರದೆ ರಣರಂಗವನ್ನು ಬಿಟ್ಟು, ಪೋಲೀಸ! ಪೊಲೀಸ! ಸಿಪಾಯಿ! ಸಿಪಾಯಿ! ಎಂದು ಕೂಗುತ್ತ ಓಡಿ ಹೋಗತೊಡಗಿದ.

ನಾನು ಇನ್ನೂ ಇನ್ನೂ ಬಂಗಾಲದಿಂದ—ಒಂದು ಹಳ್ಳಿಯಿಂದ ಬಂದಿರುವೆ. ಕಲಕತ್ತೆಯಲ್ಲಿ ಸ್ತ್ರೀ ಸ್ವಾತಂತ್ರವಿದೆ ಎಂಬುದನ್ನು ಕೇಳಿರುವೆ, ಆದರೆ ನೋಡಿಲ್ಲ ಆದರೆ ಸ್ವಾತಂತ್ರ್ಯವನ್ನು ಪಡೆದ ಕುಲೀನ ಮನೆತನದ 'ಅಬಲೆ'ಯರು ರಾಜಮಾರ್ಗದ ಮೇಲೆ ಒಬ್ಬ ಯುವಕನ ಮೇಲೆ ಬಡಿಗೆ ಹಿಡಿದುಕೊಂಡು ಏರಿ ಹೋಗಬಲ್ಲರೆ! ಇಷ್ಟು ಹೆಚ್ಚು ಅವರು 'ಸಬಲೆ'ಯರಾಗಬಹುದೆಂಬ ಮಾತು ನನ್ನ ಕಲ್ಪನೆಯ ಹೊರಗಿನದಾಗಿದೆ. ಸ್ವಲ್ಪ ಹೊತ್ತು ಬುದ್ಧಿಶೂನ್ಯನಾಗಿ ನಾನು ನಿಂತುಕೊಂಡು, ಬಳಿಕ ನನ್ನ ಕೆಲಸಕ್ಕಾಗಿ ಹೋದೆ. ಮನದಲ್ಲಿಯೇ ಎಂದುಕೊಳ್ಳತೊಡಗಿದೆ 'ಸ್ತ್ರೀ ಸ್ವಾತಂತ್ರ್ಯವು ಒಳಿತಾದುದೊ ಕೆಡಕಾದುದೊ? ಸ್ತ್ರೀ ಸ್ವಾತಂತ್ರ್ಯದಿಂದ ಸಮಾಜಕ್ಕೆ ಆನಂದವು ಹೆಚ್ಚಾಗುವುದೊ ಕಡಮೆಯಾಗುವುದೊ?'' ಈ ವಿಚಾರವನ್ನು ಇನ್ನೊಂದು ದಿನ ಮಾಡುವೆ. ಆದರೆ, ಈ ದಿನ ನಾನು ನೋಡಿದ ಸಂಗತಿಯಿಂದ ನನ್ನ ಚಿತ್ತವು ಒಮ್ಮೆಗೆ ಉದ್ಭ್ರಾಂತವಾಗಿ ಹೋಯಿತು.

೬

ಅಭಯಾ ಮತ್ತು ರೋಹಿಣಿಯನ್ನು ಅವರ ಹೊಸ ವಾಸಸ್ಥಾನದಲ್ಲಿ, ಹೊಸ ಗಾರ್ಹಸ್ಥ್ಯದಲ್ಲಿ ಪ್ರತಿಷ್ಠಿತ ಮಾಡಿ ನಾನು ನನ್ನ ಸಲುವಾಗಿ ಆಶ್ರಯವನ್ನು ಹುಡುಕಲು ರಂಗೂನದ ರಾಜಮಾರ್ಗದಲ್ಲಿ ಕಾಲಿಟ್ಟ ದಿನ ಅವರ ಪಾರಸ್ಪರಿಕ ಸಂಬಂಧದ ವಿಷಯವಾಗಿ ನನ್ನ ಮನದಲ್ಲಿ ಎಳ್ಳಷ್ಟೂ ಗ್ಲಾನಿಯಿರಲಿಲ್ಲವೆಂಬುದನ್ನು ನಾನು ಹೇಳಲಾರೆ ಆದರೆ ಈ ಅಪವಿತ್ರ ವಿಚಾರವನ್ನು ದೂರ ಮಾಡಲು ಕೂಡ ನನಗೆ ವೇಳೆ ಹತ್ತಲಿಲ್ಲ ಏಕೆಂದರೆ ಒಂದು ವಿಶಿಷ್ಟ ವಯಸ್ಸಿನ ಸ್ತ್ರೀ ಪುರುಷರನ್ನು ಒಂದು ವಿಶಿಷ್ಟ ಸಮಯದಲ್ಲಿ ನೋಡಿ ಅವರೊಳಗಿನ ಯಾವುದಾದರೊಂದು ವಿಶಿಷ್ಟ ಸಂಬಂಧವನ್ನು ಕಲ್ಪಿಸುವುದು ಭ್ರಮೆ ಎಂದು ನನಗೆ ಈ ಮೊದಲು ಶಿಕ್ಷಣವು ದೊರೆತಿದ್ದಿತು. ಭವಿಷ್ಯತ್ತಿನ

ಜಟಿಲ ಸಮಸ್ಯೆಯನ್ನು ಭವಿಷ್ಯತ್ತಿಗೇ ಒಪ್ಪಿಸಲು ನಾನು ಹಿಂದು ಮುಂದು ನೋಡಬೇಕಾಗುವುದಿಲ್ಲ. ಆದುದರಿಂದ ಕೇವಲ ನನ್ನ ಭಾರವನ್ನು ನಾನೇ ಹೊತ್ತುಕೊಂಡು ಆ ದಿನ ಮುಂಜಾವಿನಲ್ಲಿ ಅವರ ಹೊಸ ವಾಸಸ್ಥಾನದಿಂದ ಹೊರಬಿದ್ದೆ.

ಇಂದಿನಂತೆ ಆಗ ಯಾವನಾದರೂ ಒಬ್ಬ ಬಂಗಾಲಿಯು ಬರ್ಮಾಕ್ಕೆ ಹೋದ ಕೂಡಲೆ ಪೋಲಿಸರು ಬಂದು ಅವನನ್ನು ಸುತ್ತಿ, ಪ್ರಶ್ನೆಯ ಮೇಲೆ ಪ್ರಶ್ನೆಗಳನ್ನು ಕೇಳಿ, ವ್ಯಂಗ್ಯವಾಗಿ ನಗಾಡುತ್ತ, ಅವಮಾನ ಮಾಡಿ, ಯಾವ ಅಪರಾಧ ಮಾಡದಿದ್ದರೂ ಪೋಲಿಸ ಠಾಣೆಗೆ ಕರೆದೊಯ್ದು, ಹೆದರಿಸಿ ತೊಂದರೆ ಕೊಡುತ್ತಿರಲಿಲ್ಲ. ಮನದಲ್ಲಿ ಯಾವ ತರಹದ ಪಾಪವಿಲ್ಲದಿದ್ದರೆ ತೀರಿತು, ಯಾವನಾದರೂ ಪರಿಚಿತ ಅಪರಿಚಿತ ಮನುಷ್ಯನು ನಿರ್ಭಯವಾಗಿ ತಿರುಗಾಡಬಹುದಾಗಿತ್ತು. ಮತ್ತು ಈಗಿನಂತೆ ತನ್ನನ್ನು ನಿರ್ದೋಷಿಯೆಂದು ಸಿದ್ಧ ಮಾಡುವಂಥ ಅತ್ಯಂತ ಅಪಮಾನಕಾರಕ ಭಾರವನ್ನು ಆಗ ಹೊಸದಾಗಿ ಬಂದ ಬಂಗಾಲಿಯು ಹೆಗಲ ಮೇಲೆ ಹೇರುತ್ತಿರಲಿಲ್ಲ. ಆದುದರಿಂದ ನಾನು ಆಶ್ರಯಸ್ಥಾನವನ್ನು ಹುಡುಕಲು ಮುಂಜಾನೆಯಿಂದ ಮಧ್ಯಾಹ್ನದ ವರೆಗೆ ಸ್ವಚ್ಛಂದವಾಗಿ ತಿರುಗಾಡಿದೆನೆಂಬುದು ಇನ್ನೂ ನನಗೆ ಚೆನ್ನಾಗಿ ನೆನಪಿದೆ. ದಾರಿಯಲ್ಲಿ ಒಬ್ಬ ಬಂಗಾಲಿಯೊಡನೆ ಭೇಟಿಯಾಯಿತು. ಅವನು ಒಬ್ಬ ಆಳಿನ ಮೇಲೆ ಕಾಯಿಪಲ್ಯದ ಗಂಟನ್ನು ಹೊರಿಸಿಕೊಂಡು ಮೊಗದ ಮೇಲಿನ ಬೆವರನ್ನು ಒರೆಸಿಕೊಳ್ಳುತ್ತ ಭರದಿಂದ ಹೊರಟಿದ್ದ. ನಾನು ಕೇಳಿದೆ "ಮಹಾಶಯರೆ, ನಂದ ಮಿಸ್ತ್ರಿಯ ಮನೆಯಲ್ಲಿರುವುದೆಂಬುದನ್ನು ತೋರಿಸಬಲ್ಲಿರಾ?"

ಅವನು ನಿಂತು "ಯಾವ ನಂದ? ನೀವು ರಿಬಿಟ್ ಮನೆಯ ನಂದ ಪಾಗಡಿಯನ್ನು ಹುಡುಕುತ್ತಿರುವಿರಾ?" ಎಂದು ಕೇಳಿದ.

"ಅದೇನೊ ನನಗೆ ತಿಳಿಯದು-ಅವರು ಯಾವ ಮನೆಯವರು ಎಂಬುದು. ಅವರು ನಂದ ಮಿಸ್ತ್ರಿಯು ರಂಗೂನಿನ ವಿಖ್ಯಾತ ಮಿಸ್ತ್ರಿ ಎಂದು ಮಾತ್ರ ತಮ್ಮ ಪರಿಚಯ ಮಾಡಿಕೊಟ್ಟಿದ್ದರು."

ಆ ಮನುಷ್ಯನು ಅಸನ್ಮಾನ ಸೂಚಕ ಮುಖಭಾವವನ್ನು ವ್ಯಕ್ತ ಮಾಡುತ್ತ "ಓಃ! ಮಿಸ್ತ್ರಿ! ಹೀಗೆ ಎಲ್ಲರೂ ತಮಗೆ ಮಿಸ್ತ್ರಿ ಎಂದು ಹೇಳಿ

ಕೊಳ್ಳುವರು ಮಹಾಶಯರೆ! ಮಿಸ್ತ್ರೀ ಆಗುವುದು ಸುಲಭವಿಲ್ಲ! ಮರ್ಕಟ ಸಾಹೇಬರು "ಹರಿಪದ, ನಿನ್ನನ್ನು ಬಿಟ್ಟರೆ ಮಿಸ್ತ್ರಿ ಆಗುವ ಯೋಗ್ಯತೆಯುಳ್ಳ ಮನುಷ್ಯನು ಇಲ್ಲಿ ನನಗೆ ಕಾಣಿಸುವುದಿಲ್ಲ" ಎಂದು ಹೇಳಿದ್ದರು ಆಗ ಮರ್ಕಟ ಸಾಹೇಬರ ಬಳಿಗೆ ಎಷ್ಟು ಅರ್ಜಿಗಳು ಬಂದಿದ್ದುವು ಎಂಬುದು ನಿಮಗೆ ಗೊತ್ತಿರುವುದೇನು? ಸುಮಾರು ಒಂದು ನೂರು. ಸರ್ ಮಾತ್ರ ವಸೂಲಿಯು ಬಲವಿದ್ದರೆ ಅರ್ಜಿಗಳು ಏತಕ್ಕೆ ಬೇಕು? ಕತ್ತರಿಸಿ ಪುನಃ ಅಂಟಿಸಬಹುದು! ಆದರೆ ಮಹಾಶಯರೆ, ತಮಗೆ ಗೊತ್ತೇ — " ಎಂದು ಮಾತಾಡುವಾಗ ನಾನು ನಡುವೇ ಅವರನ್ನು ತಡೆದು "ಹಾಗಾದರೆ, ನಂದ ಮಿಶ್ರಿ ಎಂಬವರ ಬಗ್ಗೆ ನಿಮಗೆ ಗೊತ್ತಿಲ್ಲವೇನು?'' ಎಂದು ಕೇಳಿದೆ ನಾನು ತಿಳಿಯದೆ ಅವನ ಒಂದು ಮರ್ಮಸ್ಥಲದ ಮೇಲೆ ಆಘಾತ ಮಾಡಿದಂತೆ ಎನಿಸಿತು

"ತಾವೂ ಒಳ್ಳೇ ಹೇಳಿದಿರಿ! ನಾಲ್ವತ್ತು ವರ್ಷಗಳಿಂದ ನಾನು ರಂಗೂನಿನಲ್ಲಿ ಇರುವೆ ನನಗೆ ಪರಿಚಯವಿಲ್ಲದವರು ಯಾರಿದ್ದಾರೆ ಇಲ್ಲಿ? ನಂದ ಎನ್ನುವವರು ಇಲ್ಲಿ ಒಬ್ಬರೇ ಇರುವರೇನು? ಮೂರು ಮೂರು ನಂದರು ಇರುವರು! ನೀವು ನಂದ ಮಿಶ್ರಿ ಎಂದು ಹೇಳಿದಿರಲ್ಲವೆ? ತಾವು ಎಲ್ಲಿಂದ ಇಲ್ಲಿಗೆ ಬಂದಿರುವಿರಿ?—ಬಹುಶಃ ಬಂಗಾಲದಿಂದ ಅಲ್ಲವೆ? ಓಹೋ, ಟಗರಳ ಗಂಡ ನಂದನನ್ನು ವಿಚಾರಿಸುತ್ತಿರುವೆನೆಂದು ಹೇಳಬಾರದೆ?"

ನಾನು ತಲೆಯಲ್ಲಾಡಿಸುತ್ತ " ಹೌದು, ಹೌದು, ಅವರೇ! " ಎಂದೆ

"ಹೀಗೆ ಹೇಳಿರಿ! ಅವರ ಪರಿಚಯವನ್ನು ಹೇಳದಿದ್ದರೆ ಹೇಗೆ ಗುರುತಿಸಬೇಕು? ಬನ್ನಿರಿ ನನ್ನ ಸಂಗಡ ಭಾಗ್ಯದ ಬಲದಿಂದ ನಂದ ಗಳಿಸಿ ಉಣ್ಣುತ್ತಿದ್ದಾನೆ ಮಹಾಶಯರೆ. ನಂದ ಪಾಗಡಿ ಏನು ಮಿಶ್ರಿಯೆ! ಮಹಾಶಯರೆ, ತಾವು ಯಾರು? (ಯಾವ ಜಾತಿಯರು?) "

" ನಾನು ಬ್ರಾಹ್ಮಣ '' ಎಂದು ಉತ್ತರವಿತ್ತೆ. ಅವನು ದಾರಿಯ ಮೇಲೆಯೆ ಬಾಗಿ ನಮಸ್ಕರಿಸಿ ಎಂದ "ಅವನು ತಮಗೆ ನೌಕರಿ ಕೊಡಿಸುವನೆ? ಸಾಹೇಬರಿಗೆ ಹೇಳಿ ನಿಮಗೆ ಸ್ವಲ್ಪ ವ್ಯವಸ್ಥೆ ಮಾಡಿಕೊಡಬಲ್ಲನೆಂಬುದರಲ್ಲಿ ಸಂದೇಹವಿಲ್ಲ ಆದರೆ ಎರಡು ತಿಂಗಳ ಸಂಬಳ ಮೊದಲೇ ಅವನಿಗೆ ಲಂಚವಾಗಿ ಕೊಡಬೇಕಾಗುವುದು ಕೊಡಬಲ್ಲಿರೇನು ? ಕೊಡಬಲ್ಲಿರಾದರೆ ದಿನ ಒಂದಕ್ಕೆ ಹದಿನೆಂಟು ಇಪ್ಪತ್ತು ಆಣೆಗಳ ನೌಕರಿಯನ್ನು ಹಚ್ಚಿಕೊಡಬಲ್ಲ; ಇದಕ್ಕೂ ಹೆಚ್ಚಿನದನ್ನು ಕೊಡಿಸಲಾರ."

" ಸದ್ಯಕ್ಕೆ ನಾನು ನೌಕರಿಯ ಸಲುವಾಗಿ ಹೊರಟಿಲ್ಲ ಸ್ವಲ್ಪ ಆಶ್ರಯ ಪಡೆಯಬೇಕೆಂಬ ಉದ್ದೇಶದಿಂದ ಹೊರಟಿರುವೆ. ಈ ಆಶ್ರಯದ ಭರವಸೆ ಯನ್ನು ನಂದ ಮಿಸ್ತ್ರಿಯವರು ನನಗೆ ಹಡಗದಲ್ಲಿ ಕೊಟ್ಟಿದ್ದರು "

ಇನ್ನು ಆಲಿಸಿ ಹರಿಪದ ಮೇಸ್ತ್ರಿಯು ಆಶ್ಚರ್ಯದಿಂದ " ತಾವು ಬಹಳ ಸಜ್ಜನರು! ಸಜ್ಜನರ 'ಮೆಸ್'ಗೆ ಏಕೆ ಹೋಗುವುದಿಲ್ಲ?" ಎಂದರು

"ಮೆಸ್ಸು ಎಲ್ಲಿದೆ? ನನಗಂತೂ ಗೊತ್ತೇ ಇಲ್ಲ "

ಅವನಿಗೂ ಗೊತ್ತಿರಲಿಲ್ಲ ಈ ಮಾತನ್ನು ಅವನು ಒಪ್ಪಿಕೊಂಡ, ಸಾಯಂಕಾಲ ಅದರ ವಿಳಾಸವನ್ನು ತಿಳಿಸುವುದಾಗಿ ಹೇಳಿದ ಬಳಿಕ ಅವ ನಿಂದ "ಈಗ ನಂದನ ಭೇಟಿಯಾಗಲಾರದು ಅವನು ಕೆಲಸಕ್ಕೆ ಹೋಗಿ ರುವ, ಟಗರ್ ಚಿಲಕ ಹಾಕಿಕೊಂಡು ಒಳಗೆ ಮಲಗಿರುವಳು ಆಕೆಯನ್ನು ಹೋಗಿ ಎಬ್ಬಿಸಿದರೆ ನಮ್ಮ ಗತಿ ನೆಟ್ಟಗಾಗಲಿಕ್ಕಿಲ್ಲ!"

ಇದು ನನಗೆ ಚೆನ್ನಾಗಿ ಗೊತ್ತು. ಆದುದರಿಂದ ದಾರಿಯಲ್ಲಿ ನಾನು ಕಸಿವಿಸಿಯಿಂದ ಅತ್ತ ಇತ್ತ ನೋಡುತ್ತಿರುವುದನ್ನು ಕಂಡು ಅವನು ನನಗೆ ಧೈರ್ಯವೀಯುತ್ತ "ಅಲ್ಲಿಗೆ ಹೋಗದಿದ್ದರೆ ನಡೆಯದ! ಠಾಕುರ ದಾದಾನ ಹೋಟಲು ಎದುರಿಗೇ ಇದೆ ಅಲ್ಲಿ ಸ್ನಾನಾದಿ ತೀರಿಸಿಕೊಂಡು ಈಗ ಊಟ ಮಾಡಿ ಸ್ವಲ್ಪ ಮಲಗಿರಿ ಸಾಯಂಕಾಲ ಮೆಸ್ಸಿನ ಪತ್ತೆ ಹಚ್ಚಿದರಾಯಿತು" ಎಂದ.

ಹರಿಪದನ ಕೂಡ ನಾನು ಮಾತನಾಡುತ್ತ ಠಾಕೂರ ದಾದಾನ ಹೋಟಲ್ಲಿಗೆ ಹೋದೆ ಆಗ ಅವನ ಹೊಟೆಲ್ಲಿನ 'ಡಾಯನಿಂಗ್ ರೂಮ್' (ಭೋಜನ ಶಾಲಾ) ದಲ್ಲಿ ಸುಮಾರು ಹದಿನೈದು ಜನರು ಉಣ್ಣುತ್ತಿದ್ದರು.

ಇಂಗ್ಲೀಷಿನಲ್ಲಿ ಎರಡು ಶಬ್ದಗಳಿವೆ.'ಇನ್‌ಸ್ಟಿಂಕ್ಟ' ಮತ್ತು 'ಪ್ರಿಜುಡಿಸ್' ಎಂದರೆ ನಮ್ಮ ಭಾಷೆಯಲ್ಲಿ ಒಂದೇ ಶಬ್ದವಿದೆ—'ಸಂಸ್ಕಾರ' ಒಂದು ಇದ್ದುದು ಎರಡಲ್ಲ ಎಂಬುದನ್ನರಿಯುವುದು ಕಠಿನವಿಲ್ಲ. ಎಂದರೆ, ಇಂಗ್ಲೀಷಿನಲ್ಲಿ ಎರಡೂ ಶಬ್ದಗಳು ಭಿನ್ನ ಭಿನ್ನ ಭಾವವಾಚಿಗಳಾಗಿವೆ ಆದರೆ, ನಮ್ಮವರ ಜಾತಿಭೇದ, ಊಟ ಉಡುಗೆ ಮೊದಲಾದುವು 'ಇನ್‌ಸ್ಟಿಂಕ್ಟ'ದ ದೃಷ್ಟಿಯಿಂದ 'ಸಂಸ್ಕಾರ'ಗಳಲ್ಲ ಎಂಬುದು ಮೊಟ್ಟಮೊದಲು ಈ ಠಾಕೂರ ದಾದಾನ ಹೋಟಲಿಗೆ ಬಂದ ಮೇಲೆ ತಿಳಿಯಿತು ಒಂದು ವೇಳೆ ಇವು 'ಸಂಸ್ಕಾರ'

ಗಳಿದ್ದರೂ ಎಷ್ಟು ತುಚ್ಛವಾಗಿವೆ, ಇವುಗಳ ಬಂಧನದಿಂದ ಬಿಡುಗಡೆ ಹೊಂದುವುದು ಎಷ್ಟು ಸುಲಭವಾಗಿದೆಯೆಂಬುದನ್ನು ಕಂಡು ನಾನು ಆಶ್ಚರ್ಯ ಚಕಿತನಾದೆ. ನಮ್ಮ ದೇಶದಲ್ಲಿರುವ ಅಸಂಖ್ಯ ಜಾತಿಭೇದಗಳ ಸಂಕೋಲೆಗಳನ್ನು ಕಾಲಲ್ಲಿ ಬಿಗಿದುಕೊಂಡು ಅದರ ಝಣಂಕಾರ ಮಾಡುತ್ತ ತಿರುಗುವುದರಲ್ಲಿ ಎಷ್ಟು ಗೌರವವಿದೆ, ಎಷ್ಟು ಕಲ್ಯಾಣವಿದೆ ಎಂಬುದನ್ನು ಕುರಿತು ಇಲ್ಲಿ ಈ ದಿನ ವಿಮರ್ಶೆಯನ್ನು ಮಾಡುವುದಿಲ್ಲ. ಬಹಳ ಜನರು ಈ ಜಾತಿಭೇದವು ತಮ್ಮ ಚಿಕ್ಕ ಚಿಕ್ಕ ಊರುಗಳಲ್ಲಿ ತಮ್ಮ ಪೂರ್ವಜರಿಂದ ಬಂದ ಸಂಸ್ಕಾರ ವೆಂದು ಪಾಲಿಸುತ್ತ ಬಂದಿರುವರೋ ಅವರು ಈ ಜಾತಿಭೇದದ ಬಂಧನವನ್ನು ಸಹಜವಾಗಿ ಬಿಸಾಡಿ ಬಿಡುವುದು ಶಕ್ಯ[illegible] ನಂಬಿ ರುವರೋ ಅವರು ಈ ದೊಡ್ಡ (ಜಾತಿಭೇದದ) ಸ್ಪೃಶ್ಯತೆಯನ್ನು [illegible] ತಮ್ಮಲ್ಲಿ ಸಾಕಿಕೊಂಡು ಬಂದಿರುವರು [illegible], ಊಟ ಉಡಿಗೆ ಯಲ್ಲಿ ಸ್ಪೃಶ್ಯಾಸ್ಪೃಶ್ಯತೆಯ ವಿಚಾರಗಳು [illegible] ಪ್ರದೇಶದಲ್ಲಿ ಅಡಿ ಯನ್ನಿಡುತ್ತಲೇ ಈ ಐವತ್ತಾರು ಪೀಳಿಗೆಗಳಿಂದ ಬಂದ ಊಟ ಉಡುಗೆ ಯಲ್ಲಿಯ ಸ್ಪೃಶ್ಯಾಸ್ಪೃಶ್ಯತೆಯು ಸಂಕೋಲೆಯು ಒಂದು ರಾತ್ರಿಯಲ್ಲಿ ಹೇಗೆ ಕಡಿದು ಹೋಗುವವೆಂಬುದನು [illegible] ಜಾತಿಗೆ ಹೋಗು ವ[illegible] ಜಾತಿಯು ಹೋಗುವುದರಿಂದ [illegible] ಏಕೆಂದು ವಿಚಾರಿಸಿ ದರೆ 'ವಿಲಾಯತಿಯಲ್ಲಿ ನಿಷಿದ್ಧ ಮಾಂಸವನ್ನು ತಿನ್ನಬೇಕಾಗುತ್ತದೆ' ಎಂದು ಕಾರಣವನ್ನು ಹೇಳುವರು. ಯಾಗ ತಮ್ಮ ದೇಶದಲ್ಲಿ ಮಾಂಸವನ್ನು ತಿನ್ನು ವುದಿಲ್ಲವೊ ಅವರ ಜಾತಿಯೂ ಹೋಗುತ್ತದೆ—ಮಾಂಸವನ್ನು ತಿನ್ನದಿದ್ದರೂ 'ಅವನು ತಿಂದೇ ತಿನ್ನುತ್ತಾನೆ' ಎಂದು ತಿಳಿದುಕೊಳ್ಳಬೇಕಾಗುತ್ತದೆ. ಏಕೆಂ- ದರೆ ಪಂಚರು ಹೇಳಿದ್ದೇ ನಿಜ. ಪಂಚರು ಇದೇ ರೀತಿ ಹೇಳುತ್ತಿರುತ್ತಾರೆ.

ಅವರು ಹೀಗೆ ಹೇಳುವುದೂ ಸಂಪೂರ್ಣ ಸುಳ್ಳಲ್ಲ. ಬರ್ಮಾಕ್ಕೆ ಹೋಗುವ ಜನರಲ್ಲಿ ಹದಿನೈದಾಣೆ ಬಂಗಾಲಿ ಸದ್ಗೃಹಸ್ಥರು ಇರುವರು, ಅವ ರಲ್ಲಿಯೂ ಬ್ರಾಹ್ಮಣರೇ ಹೆಚ್ಚು—ಏಕೆಂದರೆ ಈ ಯುಗದಲ್ಲಿ ಅವರ ಲೋಭವೇ ಎಲ್ಲರ ಲೋಭವನ್ನು ಮೀರಿಸಿದೆ—ಅವರೇ ಹಡಗದ ಹೋಟಲಿನಲ್ಲಿ ಕಡಮೆ ಖರ್ಚಿನಲ್ಲಿ ಹೊಟ್ಟೆ ತುಂಬಿಕೊಂಡು ಒಣ ಮಣ್ಣಿನ ಮೇಲೆ ಇಳಿಯುವರು. ಆ ಮುಸಲ್ಮಾನ ಮತ್ತು ಗೋವಾನಿ ಅಡುಗೆಯವರು ಏನನ್ನು ಬೇಯಿಸಿ 'ಸರ್ವ' ಮಾಡುವರು?—ಈ ಪ್ರಶ್ನೆಯು ಅಪ್ರಿಯವಾಗಬಹುದು— ಎಂದು

ಕೇಳಿದರೆ ಅವರು ಹವಿಷ್ಯಾನ್ನವನ್ನು ಮಾಡಿ ಬಾಳೆ ಎಲೆಯಲ್ಲಿ ಮಾತ್ರ ಬಡಿಸುವುದಿಲ್ಲ ಎಂದು ನಮ್ಮ ಪ್ರ... ಶ್ರೀ... ಭಟ್ಟಾಚಾರ್ಯರು ಸಹಜವಾಗಿ ಅನುಮಾನ ಮಾಡಬಹುದು. [illegible] ನಾನಂತೂ ಒಬ್ಬ ಕ್ರಿಯಾಣಿಕ! ಇಲ್ಲಿ ಬಡಿಸಿದುದನ್ನು ಉಣ್ಣಲು ಇಚ್ಛೆಯಿಲ್ಲದವರು ನಿರಾಹಾರಿಯಾಗಿ ಚಹಾ-ರೊಟ್ಟಿ ಹಣ್ಣುಹಂಪಲುಗಳನ್ನು ತಿನ್ನುವರು. ಆದರೆ ಒಂದು ವಿಷಯವಿದೆ— ನಿಷಿದ್ಧ ಮಾಂಸವನ್ನು ಕೊಡಲು [illegible] ಶುದ್ಧ ಕ್ರೈಸ್ತ ಬಾಳೆಹಣ್ಣುಗಳನ್ನೂ ಸಹ ಒಯ್ದು [illegible] ಹಡಗದ ಕಂಟ್ರೋಲ್ ರೂಮಿನಲ್ಲಿ ಇಡುವರು ಎಂಬುದನ್ನು ಎಲ್ಲರೂ ನೋಡಬಹುದು ಎಲ್ಲರ ದೃಷ್ಟಿಯಿಂದ ತಪ್ಪಿಸಿ ಈ ಕಾರ್ಯ ಮಾಡಬೇಕೆಂದು ಹಡಗದ ನಿಯಮಗಳಲ್ಲಿ ಇಲ್ಲ ಹೌದು, ಇನ್ನೂ ಒಂದು ವಿಷಯವಿದೆ—ಬರ್ಮಕ್ಕೆ ಹೋಗುವವರ ಜಾತಿಯು ಹೋಗುವುದೆಂಬ ಕಾಯದೆಯು ಶಾಸ್ತ್ರಕಾರರ 'ಕೋಡಿ'ನೊಳಗೆ ಬರದೆ, ತಪ್ಪಿ ಉಳಿದು ಹೋಗಿದ ಇಲ್ಲದಿದ್ದರೆ, ಈ ಬರ್ಮಾ ಯಾತ್ರಿಕರ ಜಾತಿಭ್ರಷ್ಟತೆಯನ್ನು ವಿಚಾರಮಾಡಲು ಒಂದು ಚಿಕ್ಕ ಬ್ರಾಹ್ಮಣ ಸಭೆಯು ನಿರ್ಮಾಣವಾಗದೆ ಇರುತ್ತಿರಲಿಲ್ಲ! ಇರಲಿ, ಈ ಸಭ್ಯಗೃಹಸ್ಥರ ವಿಷಯ ಈ ದಿನ ಇಲ್ಲಿಗೇ ಸಾಕು, ಇಷ್ಟೇನು?

ಹೋಟಲಿನಲ್ಲಿ ಸಾಲಾಗಿ ಊಟಕ್ಕೆ ಕುಳಿತವರು ಸಭ್ಯಗೃಹಸ್ಥರಿದ್ದಿಲ್ಲ ನಾನಂತೂ ಅವರನ್ನು 'ಸಭ್ಯ'ರೆಂದು ತಿಳಿಯುವುದಿಲ್ಲ. ಎಲ್ಲರೂ ಕೈಗಾರಿಕೆ ಮಾಡುವವರು, ಶಿಲ್ಪಿಗಳು, ಹನ್ನೆರೆ ಗಂಟೆಯ ಬಿಡುವಿನಲ್ಲಿ ಊಟಕ್ಕೆ ಬಂದಿರುವರು ಪಟ್ಟಣದ ಈ ಭಾಗದಲ್ಲಿ ಒಂದು ದೊಡ್ಡ ಬಯಲು ಇದೆ ಆದರ ಸುತ್ತು ದಿಕ್ಕುಗಳಲ್ಲಿ ನಾನಾ ಪ್ರಕಾರದ, ಆಕಾರದ ಕಾರಖಾನೆಗಳಿವೆ. ಈ ದಿಕ್ಕಿಗೆ ವಸತಿಯ ನಡುವೆ ಠಾಕುರ ದಾದಾನ ಹೋಟಲು ಇದೆ. ಇದೊಂದು ವಿಚಿತ್ರ ವಸತಿ ಒಂದು ಸಾಲಿನಲ್ಲಿ ಬೀಳಲಾದ ಬಿದರಿನಿಂದ ಕಟ್ಟಿದ ಕೋಣೆಗಳು ಇವೆ. ಇವುಗಳಲ್ಲಿ ಚೀನೀ, ಬರ್ಮೀ, ಮದ್ರಾಸೀ ಉಡಿಯಾ, ತೇಲಂಗಿ, ಚಾಟಿಗಾಂವದ ಹಿಂದೂ ಮತ್ತು ಮುಸಲ್ಮಾನರು ಮೊದಲಾದವರೆಲ್ಲರೂ ಇರುವರು, ನಮ್ಮ ಜಾತಿಯ ಬಂಗಾಲಿಗಳೂ ಇರುವರು ಚಿಕ್ಕ ಜಾತಿಯವನೆಂದು ಹೀಯಾಳಿಸಿ ಮಾನವನನ್ನು ದೂರ ಮಾಡುವ ಕೆಟ್ಟ ಪದ್ಧತಿಯನ್ನು ತ್ಯಜಿಸುವುದೇ ದೊಡ್ಡದಾದ ಮತ್ತು ಕಠಿನವಾದ ಕೆಲಸವಲ್ಲ ಎಂಬುದನ್ನು ನಾನು ಹುಟ್ಟಿಮೊದಲು ಇವರ ಸಾನ್ನಿಧ್ಯದಲ್ಲಿ ಕಲಿತಿರುವೆ.

ಈ ನೀಚ ಜಾತಿಯವರ ಬಗ್ಗೆ ಇರುವ ದೂಷಿತ ಅಭಿಪ್ರಾಯವನ್ನು, ವ್ಯವ ಹಾರವನ್ನು ತ್ಯಜಿಸುವುದು ಅಶಕ್ಯ ಎಂದು ತ್ಯಜಿಸುವುದಿಲ್ಲ ಎಂದು ಕೆಲವರು ಹೇಳುವ ಮಾತು ನಿರರ್ಥಕವಾದುದು ಅವರು ತಮ್ಮ ಈ ಮಾತಿಗೆ ಕಾರಣ ವನ್ನು ಹೇಳುವುದು ಜಗಳಕ್ಕೆ ಕಾರಣವಾಗುವುದು ಎಂದು ಹೇಳುವುದಿಲ್ಲ.

ಠಾಕುರ ದಾದಾ ಹೊರಗೆ ಬಂದು ವಿನಯದಿಂದ ನನ್ನನ್ನು ಸ್ವಾಗತಿಸಿದ ಮತ್ತು ಒಂದು ಚಿಕ್ಕ ಕೋಣೆಯನ್ನು ತೋರಿಸಿ "ಎಷ್ಟು ದಿನ ಬೇಕೊ ಅಷ್ಟು ದಿನ ಈ ಕೋಣೆಯಲ್ಲಿ ಇರಿ ನಮ್ಮ ಹೋಟಲಿನಲ್ಲಿ ಊಟ ಮಾಡಿರಿ. ನೌಕರಿಯು ಸಿಕ್ಕ ಮೇಲೆ ನಮಗೆ ಸಲ್ಲಬೇಕಾದ ಹಣ ಸಲ್ಲಿಸಿರಿ" ಎಂದು ಹೇಳಿದ

"ನಿಮಗೆ ನನ್ನ ಪರಿಚಯವಿಲ್ಲ, ಒಂದು ತಿಂಗಳ ಇದ್ದು ಊಟಮಾಡಿ ನಾನು ನಿಮಗೆ ಹಣ ಕೊಡದೆ ಹಾಗೆಯೆ ಹೋಗಬಹುದಲ್ಲವೇ?"

ಠಾಕುರ ದಾದಾ ತನ್ನ ಹಣೆಯನ್ನು ತೋರಿಸುತ್ತ ನಗುತ್ತ "ಇದನ್ನು ತಾವು ತೆಗೆದುಕೊಂಡು ಹೋಗಲಾರಿರಿ ಮಹಾಶಯರೇ?" ಎಂದ

"ಇಲ್ಲ, ಅದರ ಮೇಲೆ ನನ್ನ ಆಸೆ ಇನಿತೂ ಇಲ್ಲ "

ಠಾಕುರ ದಾದಾ ಈ ಬಾರಿ ತನ್ನ ಮೊಗವನ್ನು ಗಂಭೀರವಾಗಿಸಿ "ನೋಡಿರಿ ಮಹಾಶಯರೆ, ಇದು ಭಾಗ್ಯ! ಇದರ ವಿನಾ ಬೇರೆ ಮಾರ್ಗವೇ ಇಲ್ಲ ಎಂದು ನಾನು ಎಲ್ಲರಿಗೂ ಹೇಳುತ್ತ ಬಂದಿರುವೆ' ಎಂದ

ನಿಜ, ಅವನಾಡುವ ಮಾತುಗಳು ಕೇವಲ ಗಾಳಿಯೊಳಗಿನ ಮಾತು ಗಳಾಗಿರಲಿಲ್ಲ, ಭಾಗ್ಯದ ಸತ್ಯತೆಯ ಮೇಲೆ ತನ್ನ ನಿಷ್ಕಪಟ ವಿಶ್ವಾಸವಿದ್ದಿತು ಎಂಬುದನ್ನು ಸಪ್ರಮಾಣವಾಗಿ ಸಿದ್ಧಮಾಡಿ ತೋರಿಸಲು ಅವನು ನಾಲ್ಕೈದು ತಿಂಗಳ ನಂತರ ಒಂದು ದಿನ ಮುಂಜಾನೆ ಅನೇಕರು ಅವನ ಬಳಿಯಲ್ಲಿ ಅಡವು ಇಟ್ಟ ರೂಪಾಯಿಗಳನ್ನು, ಉಂಗುರ, ಗಡಿಯಾರ ಮೊದಲಾದುವನ್ನು ತೆಗೆದು ಕೊಂಡು ಆ ಜನರಿಗೆ ತಮ್ಮ ಶೂನ್ಯ ಭಾಗ್ಯವನ್ನು ನಿರ್ಜನ ಹೊಟಲಿನ ಮೇಜಿನ ಮೇಲೆ ಅಪ್ಪಳಿಸುವುದಕ್ಕೆ ಅವಕಾಶವನ್ನು ಕೊಟ್ಟು, ಅವರನ್ನು ಬರ್ಮಾದಲ್ಲಿಯೆ ಬಿಟ್ಟು ತನ್ನ ದೇಶಕ್ಕೆ ಹೊರಟು ಹೋದ!

ಏನೇ ಆಗಲಿ, ಆಗ ಠಾಕುರ ದಾದಾನ ಮಾತು ನನಗೆ ಕೆಡಕಾದು ದೆಂದು ಎನಿಸಲಿಲ್ಲ ನಾನೂ ಅವನ ಒಬ್ಬ ಹೊಸ ಗ್ರಾಹಕನಾಗಿ ಅವನ

ಹೋಟೆಲಿನ ಒಂದು ಕೋಣೆಯಲ್ಲಿ ತಳವೂರಿದೆ ರಾತ್ರಿಯಲ್ಲಿ ಕಡಮೆ ವಯಸ್ಸಿನ ಬಂಗಾಲಿ ದಾಸಿಯೊಬ್ಬಳು ನನ್ನ ಕೋಣೆಗೆ ಬಂದು ಮಣೆಯನ್ನು ಹಾಕಿ ಊಟದ ಸಿದ್ಧತೆ ಮಾಡತೊಡಗಿದಳು. ಬಳಿಯಲ್ಲಿದ್ದ ಭೋಜನ ಶಾಲೆಯಿಂದ ಇತರ ಜನರು ಉಣ್ಣುವಾಗ ನಡೆದ ಮಾತಿನ ಶಬ್ದವು ಕೇಳಿಬರುತ್ತಿತ್ತು. ನಾನು "ನನಗೂ ಅಲ್ಲಿಯೆ ಊಟಕ್ಕೆ ಏಕೆ ಹಾಕುವುದಿಲ್ಲ?" ಎಂದು ಕೇಳಿದೆ.

"ಅವರು ಕಡಮೆ ತರಗತಿಯ ಕಬ್ಬಿಣ ಬಡಿಯುವ, ಕತ್ತರಿಸುವ ಕೂಲಿಕಾರರು ಬಾಬೂ, ಅವರ ಸಂಗಡ ನಿಮಗೆ ಊಟಕ್ಕೆ ಹಾಕುವುದು ಹೇಗೆ?" ಎಂದು ದಾಸಿಯು ನುಡಿದಳು.

ಅವರು 'ವರ್ಕಮೆನ್' ಇದ್ದರು, ನಾನಿದ್ದೆ 'ಸಭ್ಯಗೃಹಸ್ಥ' ನಾನು ನಕ್ಕು "ನನಗೂ ಅದೇ ಕೆಲಸ ಮಾಡಬೇಕಾಗುವುದೊ ಏನೊ ಎಂಬುದು ನಿಶ್ಚಿತವಾಗಿಲ್ಲ ಏನಾದರೂ ಆಗಲಿ, ಈ ದಿನ ಇಲ್ಲಿಯೆ ವ್ಯವಸ್ಥೆ ಮಾಡಿರುವೆ, ಊಟಕ್ಕ ಬಡಿಸಿ ಹೋಗಿಬಿಡು ನಾಳೆಯಿಂದ ಅವರ ಕೂಡ ಭೋಜನ ಶಾಲೆಯಲ್ಲೇ ನನ್ನ ಊಟದ ವ್ಯವಸ್ಥೆಯನ್ನು ಮಾಡಿಬಿಡು" ಎಂದೆ.

"ತಾವು ಬ್ರಾಹ್ಮಣರು, ತಾವು ಅಲ್ಲಿ ಊಟಮಾಡಬೇಕಾದ ಆವಶ್ಯಕತೆ ಇಲ್ಲ" ಎಂದ ದಾಸಿಯೆಂದಳು.

"ಏಕೆ?"

ದಾಸಿಯು ತನ್ನ ಕಂಠಸ್ವರ ತಗ್ಗಿಸಿ "ಅವರು ಬಂಗಾಲಿಗಳೇನೊ ನಿಜ, ಆದರೆ ಅವರಲ್ಲಿ ಒಬ್ಬ ಮೋಚಿಯೂ ಇರುವ" ಎಂದಳು.

ಮೋಚಿ! ದೇಶದಲ್ಲಿ ಈ ಜಾತಿಯುವರು ಅಸ್ಪೃಶ್ಯರು. ಇವರನ್ನು ಮುಟ್ಟಿದರೆ ಸ್ನಾನಮಾಡುವುದು 'ಕಂಪಲ್ಸರೀ' (ಅನಿವಾರ್ಯ) ಇದೆಯೊ ಇಲ್ಲವೊ ಗೊತ್ತಿಲ್ಲ; ಆದರೆ ಬಟ್ಟೆ ಬದಲಾಯಿಸಿ, ತಲೆಗೆ ಗಂಗಾಜಲವನ್ನು ಅವಶ್ಯವಾಗಿ ಸಿಂಪಡಿಸಿಕೊಳ್ಳಬೇಕಾಗುವುದೆಂಬುದು ನನಗೆ ಗೊತ್ತಿದೆ. ಅತ್ಯಂತ ಆಶ್ಚರ್ಯದಿಂದ "ಉಳಿದವರು?" ಎಂದು ಕೇಳಿದೆ

ದಾಸಿಯೆಂದಳು "ಉಳಿದವರೆಲ್ಲರೂ ಒಳ್ಳೆ ಜಾತಿಯವರು. ಕಾಯಸ್ಥರು, ಅಂಬಿಗರು, ಗೌಳಿಗರು, ಕಮ್ಮಾರರು—"

"ಇವರು ಯಾರೂ ಅವನ ಬಗ್ಗೆ ತಕರಾರು ಮಾಡುವುದಿಲ್ಲವೆ?"

ದಾಸಿಯು ಸ್ವಲ್ಪ ನಕ್ಕು " ಈ ಪರದೇಶದಲ್ಲಿ ಏಳು ಸಮುದ್ರ ದಾಟಿ ಬಂದ ಬಳಿಕ ಬ್ರಾಹ್ಮಣಿಕೆ ನಡೆಯಬಲ್ಲದೇನು ಬಾಬೂ ? ದೇಶಕ್ಕೆ ಹೋದ ಮೇಲೆ ಗಂಗಾಸ್ನಾನಮಾಡಿ, ಅಂಗಪ್ರಾಯಶ್ಚಿತ್ತವನ್ನು ಮಾಡಿಕೊಂಡರೆ ತೀರಿತು ಎಂದು ಹೇಳುವರು ಅವರು " ಎಂದಳು

ಮಾಡಿಕೊಳ್ಳುತ್ತಿದ್ದರೆ ಮಾಡಿಕೊಳ್ಳುತ್ತಿರಬಹುದು; ಆದರೆ, ಮೂರು ನಾಲ್ಕು ಜನ ಆಗಾಗ್ಗೆ ದೇಶಕ್ಕೆ ತಿರುಗಿ ಬರುತ್ತಿದ್ದರು, ಅವರ ಪರಿಚಯು ನನಗಿದ್ದಿತು. ಆದರೆ ಅವರು ಹೋಗುವಾಗ ಬರುವಾಗ ಸಾಧ್ಯವಾದರೆ ಮಾತ್ರ ಗಂಗಾಸ್ನಾನ ಮಾಡಿದರೆ ಮಾಡಿದರು, ಇಲ್ಲದಿದ್ದರೆ ಇಲ್ಲ ಒಂದೆರಡು ಬಾರಿ ಗಂಗಾಸ್ನಾನ ಅವರು ಮಾಡಿರಬಹುದು. ಆದರೆ ಅಂಗಪ್ರಾಯ-ಶ್ಚಿತ್ತವನ್ನೆಂದಿಗೂ ಮಾಡಿಕೊಂಡಿಲ್ಲವೆಂಬುದು ನನಗೆ ಗೊತ್ತಾಗಿದೆ ಪರದೇಶಗಳ ನೀರು-ಹವೆ ಹತ್ತಿದುದರ ಪರಿಣಾಮವಾಗಿ ಇವರಿಗೆ ಈ ಪ್ರಾಯಶ್ಚಿತ್ತದ ಮೇಲೆ ವಿಶ್ವಾಸವಿಲ್ಲ

ಹೋಟಲದಲ್ಲಿ ಎರಡೇ ಹುಕ್ಕಾ (ಗುಡಗುಡಿ) ಇದ್ದುವು, ಒಂದು ಬ್ರಾಹ್ಮಣರ ಸಲುವಾಗಿ ಇನ್ನೊಂದು ಉಳಿದವರ ಸಲುವಾಗಿ ಊಟವಾದ ಬಳಿಕ ಕಾಯಸ್ಥನ ಕೈಯಿಂದ ಮೋಚಿ ಮೋಚಿಯ ಕೈಯಿಂದ ಕಮ್ಮಾರ ಕೈ ಸೇರಿ ಗುಡಗುಡಿಯನ್ನು ಇಸಕೊಂಡು ಸ್ವಚ್ಛಂದವಾಗಿ ಅದರ ಸೇವನೆಯನ್ನು ಮಾಡಿದರು ಅಲ್ಲಿ ಸಂಕೋಚವೆಂಬುದು ಇರಲೇ ಇಲ್ಲ! ಎರಡು ದಿನಗಳಾದ ಬಳಿಕ ನಾನು ಕಮ್ಮಾರನ ಕೂಡ ಮಾತನಾಡುತ್ತ ಕೇಳಿದೆ "ಒಳ್ಳೇದು, ಹೀಗೆ ಮಾಡಿದರೆ ನಿನ್ನ ಜಾತಿಯು ಹೋಗುವುದಿಲ್ಲವೆ ?"

" ಜಾತಿ ಏಕೆ ಹೋಗುವುದಿಲ್ಲ, ಹೋಗಿಯೆ ಹೋಗುವುದು ಮಹಾ-ಶಯರೆ !"

" ಆ ಮೇಲೆ ?"

" ಅವನು ತಾನು ಮೋಚಿಯೆಂದು ಮೊದಲು ತನ್ನ ಪರಿಚಯುವನ್ನು ಕೊಟ್ಟಿರಲೇ ಇಲ್ಲ; ತಾನು ಕಾಯಸ್ಥನೆಂದು ಹೇಳಿದ್ದ ಆ ಮೇಲೆ ಅವನು ಮೋಚಿಯೆಂದು ತಿಳಿಯಿತು "

" ಆಗ ನೀವು ಏನನ್ನೂ ಹೇಳಲಿಲ್ಲವೆ ?"

“ನಾವು ಏನು ಹೇಳುವೆವು ಮಹಾಶಯರೇ? ಅದುದು ಕೆಟ್ಟದಾಯಿತು, ಎಂದು ನಾವು ಒಪ್ಪಲೇಬೇಕು ಪುನಃ ಅವನು ಬಹಳ ನಾಚಿಕೆ ಪಟ್ಟುಕೊಳ್ಳಬಾರದೆಂದು ನಾವು ಇದ್ದ ಸಂಗತಿಯನ್ನು ಅಲ್ಲಿಯೆ ಹತ್ತಿಕ್ಕಿ ಸುಮ್ಮಗಾಗಿಬಿಟ್ಟೆವು.”

“ಆದರೆ, ನೀವು ದೇಶದಲ್ಲಿ ಇದ್ದಿದ್ದರೆ ಏನಾಗುತ್ತಿತ್ತು?”

ಆ ಮನುಷ್ಯ ಸ್ವಲ್ಪ ನಡುಗಿದ. ಬಳಿಕ ಅವನೆಂದ “ನಮ್ಮ ರಕ್ಷಣೆ ಆಗುತ್ತಿತ್ತೇನು? ಕೊಂದೇ ಬಿಡುತ್ತಿದ್ದರು ನಮ್ಮನ್ನು’ ಸ್ವಲ್ಪ ಹೊತ್ತು ಸುಮ್ಮಗಿದ್ದು ಅವನು ತಾನಾಗಿಯೆ ಹೇಳತೊಡಗಿದ “ಬಾಬೂ, ನಾನು ಬ್ರಾಹ್ಮಣರ ವಿಷಯ ಹೇಳುವುದಿಲ್ಲ—ಅವರು ವರ್ಣಗಳ ಗುರುಗಳು, ಅವರ ಮಾತೇ ಬೇರೆ ಎಂಬುದು ತಮಗೆ ಗೊತ್ತಿದೆ ಅವರನ್ನುಳಿದು ಎಲ್ಲ ಜಾತಿಗಳು ಸರಿಸಮಾನ ಇವೆ ಗಾಣಿಗ, ಮಾಳಿ, ಹುಣಸೆಹಣ್ಣು ಮಾರುವವ, ಗೌಳಿ, ಹಜಾಮ, ಕುಂಬಾರ, ಕಮ್ಮಾರ, ಬುಕ್ಕಿಟಗಾರ, ತಳವಾರ ಮೊದಲಾದವರು ಎಲ್ಲರೂ ಹಿಂದುಗಳೇ, ಇದೊ ನೋಡಿ—ಇವರು ಮೋಚಿಗಳು, ಇವರು ಗೌಳಿಗರು ಎಂದು ಮುಂತಾಗಿ ಅವರ ಶರೀರದ ಮೇಲೆ ಏನೂ ಬರೆದಿರುವುದಿಲ್ಲವಲ್ಲ; ಎಲ್ಲರೂ ದೇವರಿಂದ ಹುಟ್ಟಿಸಲ್ಪಟ್ಟವರು, ಎಲ್ಲರೂ ಒಂದೇ, ಎಲ್ಲರೂ ಹೊಟ್ಟೆಯಲ್ಲಿ ಬೆಂಕಿ ಬಿದ್ದುದರಿಂದ ಅದನ್ನು ನಂದಿಸುವದಕ್ಕಾಗಿ ಪರದೇಶಕ್ಕೆ ಬಂದಿರುವರು ಮತ್ತು ಕಬ್ಬಿಣವನ್ನು ಹಣಿಯುತ್ತಿರುವರು. ಬಾಬೂ ತಾವೇ ವಿಚಾರ ಮಾಡಿ ನೋಡಿರಿ, ಹರಿ ಮೋಡಲ ಮೋಚಿಯಾಗಿದ್ದರೇನಾಯಿತು? ಅವನು ಸಾರಾಯಿ ಕುಡಿಯುವುದಿಲ್ಲ, ಗಾಂಜಿ ಸೇದುವುದಿಲ್ಲ, ಅವನ ಆಚಾರ ವಿಚಾರವನ್ನು ನೋಡಿ ಅವನು ಕೆಳಗಿನ ಜಾತಿಯವ—ಅಸ್ಪೃಶ್ಯ ಎಂದು ಯಾರು ಹೇಳಬಲ್ಲರು? ಆದರೆ ಲಕ್ಷ್ಮಣ, ಕಾಯಸ್ಥ ಹೌದು. ಅವನ ಆಚಾರವಿಚಾರಗಳನ್ನು ಒಂದು ಬಾರಿ ನೋಡಿರಲ್ಲ? ಮಗ ಎರಡೆರಡು ಸಾರೆ ಜೇಲಿಗೆ ಹೋಗುವುದನ್ನು ತಪ್ಪಿಸಿಕೊಂಡು ಉಳಿದಿರುವ. ನಾವೆಲ್ಲರೂ ಅವನನ್ನು ಉಳಿಸಿಕೊಳ್ಳದಿದ್ದರೆ ಇಷ್ಟೊತ್ತಿಗೆ ಅವನು ಜೇಲಿಗೆ ಹೋಗಿ ಹೊಲೆಯರ ಕೈಯಿಂದ ಮಾಡಿದ ರೊಟ್ಟಿಯನ್ನು ತಿನ್ನುತ್ತ ಇರುತ್ತಿದ್ದ!”

ಲಕ್ಷ್ಮಣನನ್ನು ಕುರಿತು ನನಗೆ ಕುತೂಹಲವುಂಟಾಗಿ ಅವನ ಬಗ್ಗೆ ಹೆಚ್ಚಿಗೆ ಅರಿತುಕೊಳ್ಳಬೇಕೆಂಬ ಇಚ್ಛೆಯೂ ಉಂಟಾಗಲಿಲ್ಲ, ಹರಿಮೋಡಲನು

ತನ್ನ ಅಸ್ಪೃಶ್ಯತ್ವವನ್ನು ಬಚ್ಚಿಟ್ಟು ಎಂತಹ ಅಪರಾಧವನ್ನು ಮಾಡಿದನು ಎಂಬುದನ್ನು ಕುರಿತು ಮೀಮಾಂಸೆ ಮಾಡುವ ಪ್ರವೃತ್ತಿಯೂ ಉಂಟಾಗಲಿಲ್ಲ. ನಾನು ಕೇವಲ ಇದನ್ನೇ ಯೋಚಿಸತೊಡಗಿದೆ—ಯಾವ ದೇಶದಲ್ಲಿ ದೊಡ್ಡವರೆನಿಸಿಕೊಳ್ಳುವವರೂ ಗುಪ್ತಚಾರರಿಂದ ತಮ್ಮ ನೆರೆಹೊರೆಯುವರ ಛಿದ್ರಗಳನ್ನು ಹುಡುಕಿಸಿ ಮತ್ತು ಅವರ ಪಿತೃಶ್ರಾದ್ಧವನ್ನು ಕೆಡಿಸಿ ಸಂತುಷ್ಟರಾಗುವರೊ ಅದೇ ದೇಶದ ಈ ಅಶಿಕ್ಷಿತರು ನೀಚ ಜಾತಿಯವರಾದಾಗ್ಯೂ ಒಬ್ಬ ಅಪರಿಚಿತ ಬಂಗಾಲಿಯ ಮಹಾಪರಾಧವನ್ನು ಕ್ಷಮಿಸಿದರು, ಇಷ್ಟೇ ಅಲ್ಲ, ಆ ಮೇಲೆ ಅವನು ಈ ಪರದೇಶದಲ್ಲಿ ನಾಚಿಕೆಗೇಡಿಯಾಗಿ, ಹೀನನಾಗಿ ಇರಬಾರದೆಂದು ಆ ಜಾತಿಯ ಮಾತನ್ನೇ ಎತ್ತದೆ ಮುಚ್ಚಿಟ್ಟುಬಿಟ್ಟರು! ಇದೆಲ್ಲ ಅಸಂಭವ ಕಾರ್ಯವು ಹೇಗೆ ಸಂಭವವಾಯಿತು? ವಿದೇಶಿಯರಿಗೆ ಬಹುಶಃ ಇದು ತಿಳಿಯಲಿಕ್ಕಿಲ್ಲ, ಆದರೆ, ಇದಕ್ಕಾಗಿ ಅದೆಷ್ಟು ಹೃದಯದ ವೈಶಾಲ್ಯ, ಮನದ ಔದಾರ್ಯ ಬೇಕೆಂಬುದನ್ನು ನಾವು ತಿಳಿದುಕೊಳ್ಳಬಲ್ಲೆವು! ಅವರು ತಮ್ಮ ದೇಶವನ್ನು ಬಿಟ್ಟು ವಿದೇಶಕ್ಕೆ ಬಂದುದರ ಫಲವೇ ಇದು ಎಂಬುದರಲ್ಲಿ ಸಂದೇಹವಿಲ್ಲ ಇದರ ಬಗೆಯ ಶಿಕ್ಷಣವು ಈಗ ನಮ್ಮ ದೇಶಕ್ಕೆ ಅವಶ್ಯವಾಗಿ ಬೇಕು ಎಂಬ ವಿಚಾರವು ಬಂದಿತು. ತನ್ನ ದೇಶದ ಒಂದು ಚಿಕ್ಕ ಹಳ್ಳಿಯಲ್ಲಿಯೆ ಇದ್ದುಕೊಂಡು ಇಡಿ ಆಯುಷ್ಯವನ್ನು ಕಳೆಯುತ್ತ ಕುಳಿತುಕೊಳ್ಳುವುದೇ ಮನುಷ್ಯನನ್ನು ಸಂಕುಚಿತಭಾವನೆಯುಳ್ಳವನನ್ನಾಗಿ ಮಾಡುವ ಪರಮ ಶತ್ರುವು ಎಂಬುದರಲ್ಲಿ ಸಂದೇಹವೇನಿದೆ? ಇರಲಿ ಬಿಡಿರಿ ಈ ಮಾತು

ಈ ಜನರ ಕೂಡ ನಾನು ಬಹಳ ದಿನಗಳ ವರೆಗೆ ಇದ್ದೆ ಆದರೆ,ಎಲ್ಲಿಯ ವರೆಗೆ ನಾನು ಹೆಚ್ಚು ಓದುಬರೆಹ ಬಲ್ಲವನೆಂದು ಗೊತ್ತಾಗಲಿಲ್ಲವೊ ಅಲ್ಲಿಯ ವರೆಗೆ ಈ ಜನರೊಡನೆ ಹೆಚ್ಚು ಸ್ನೇಹ ಸಲಿಗೆಯಿಂದ ಇರುವ ಸೌಭಾಗ್ಯವು ದೊರೆಯುತ್ತಲಿತ್ತು ಮತ್ತು ನಾನೂ ಅವರ ಸುಖದುಃಖದಲ್ಲಿ ಪಾಲುಗಾರನಾಗಿರುತ್ತಿದ್ದೆ, ಎಂದಿನಿಂದ ಅವರಿಗೆ ನಾನು ಸಭ್ಯಗೃಹಸ್ಥ ಮತ್ತು ಇಂಗ್ಲೀಷು ಬಲ್ಲವ ಎಂದು ಗೊತ್ತಾಯಿತೊ ಅಂದಿನಿಂದ ಅವರು ನನ್ನನ್ನು ಪರಕೀಯನ ಹಾಗೆ ಕಾಣತೊಡಗಿದರು ಇಂಗ್ಲೀಷು ಬಲ್ಲ ಸದ್ಗೃಹಸ್ಥರ ಬಳಿಗೆ ಇವರು ಆಪತ್ಕಾಲದಲ್ಲಿ ಹೋಗುವರೆಂಬುದು ನಿಜ, ಶಿಕ್ಷಣಪಡೆದವರಿಂದ ಸಲಹೆ ಕೇಳುವರೆಂಬುದೂ ಸತ್ಯ; ಆದರೆ, ಇವರು ಅವರ ಮೇಲೆ ವಿಶ್ವಾಸವನ್ನು

ಇಡುವದಿಲ್ಲ. ಅವರನ್ನು ತಮ್ಮವರೆಂದೂ ತಿಳಿಯುವುದಿಲ್ಲ. ನಾನು ಅವರು ಕೀಳರೆಂದು ತಿಳಿದು ಮನದಲ್ಲಿಯೆ ತಿರಸ್ಕಾರ ದೃಷ್ಟಿಯಿಂದ ಕಾಣುವುದಿಲ್ಲ, ಅವರ ಬೆನ್ನ ಹಿಂದೆ ಅವರನ್ನು ಉಪಹಾಸ್ಯಮಾಡುವುದಿಲ್ಲ ಆದಾಗ್ಯೂ ಅವರು ತಮಗೆ ದೊರೆತ ಒಂದು ಈ ಕುಸಂಸ್ಕಾರವನ್ನು ಇಂದಿಗೂ ತಮ್ಮ ಮನದಿಂದ ದೂರ ಮಾಡಲು ಸಮರ್ಥರಾಗಲಿಲ್ಲ ಕೇವಲ ಈ ಕಾರಣದಿಂದ ನನ್ನವೆಷ್ಟೋ ಸೀಮಾತೀತಸತ್ಯಸಂಕಲ್ಪಗಳು ಈ ಜನರ ಮಧ್ಯದಲ್ಲಿ ವಿಫಲ ವಾಗಿವೆ ಎಂಬುದನ್ನು ನಾನೇ ಬಲ್ಲೆ —ಆದರೆ, ಇರಲಿ ಈ ಮಾತು ಇಷ್ಟಕ್ಕೇ ಈ ದಿನ.

ಈ ಕಡೆಯಲ್ಲಿ ಬಂಗಾಲಿ ಹೆಂಗುಸರ ಸಂಖ್ಯೆಯೂ ಕಡಿಮೆಯಿಲ್ಲವೆಂಬು ದನ್ನು ಕಂಡೆ ಆದರೆ, ಅವರ ಕುಲಗಳ ಪರಿಚಯವನ್ನು ಇಲ್ಲಿ ಕೊಡದಿರು ವುದೇ ವಿಹಿತ; ಆದರೆ, ಅವರು ಇಲ್ಲಿ ಮತ್ತಾವುದೋ ಒಂದು ರೂಪದಲ್ಲಿ ಪರಿವರ್ತಿತರಾಗಿ ಶುದ್ಧ ಗೃಹಸ್ಥರ ಧರ್ಮಪತ್ನಿಯರು ಆಗಿಬಿಟ್ಟಿರುವರು ! ಪುರುಷರ ಮನದಲ್ಲಿ ಅದೇನೊ ಅಷರೂಪವಾಗಿ 'ಜಾತಿಯ'ಯ ಹಳೆಯ ಸ್ಮೃತಿಯು ಉಳಿದಿದೆ. ಆದರೆ ಈ ಸ್ತ್ರೀಯರು ತಮ್ಮ ದೇಶಕ್ಕೂ ಬರುವುದಿಲ್ಲ, ತಮ್ಮ ದೇಶದ ಕೂಡ ಯಾವ ಸಂಪರ್ಕವನ್ನೂ ಇಟ್ಟುಕೊಂಡಿಲ್ಲ ಅವರ ಮಕ್ಕಳು ಮರಿಗಳನ್ನು ವಿಚಾರಿಸಿದರೆ ಇಷ್ಟೇ ಹೇಳುವರು 'ನಾವು ಬಂಗಾಲಿ ಗಳು' ಎಂದರೆ? ಮುಸಲ್ಮಾನ್, ಕ್ರಿಶ್ಚಿಯನ್, ಬರ್ಮೀ ಮೊದಲಾದವರು ಅಲ್ಲ, ಬಂಗಾಲೀ ಹಿಂದುಗಳಿದ್ದೇವೆ ಎಂದು ಅರ್ಥ. ಇವರಲ್ಲಿ ವಿವಾಹಾದಿ ಆದಾನ ಪ್ರದಾನವು ಸ್ವಚ್ಛಂದವಾಗಿ ಆಗುವುದು—ಆದರೆ ಅವರು 'ಬಂಗಾಲಿ' ಗಳಿದ್ದರಾಯಿತು. ಯಾವನಾದರೂ ಚಟಗಾಂವದ ಬಂಗಾಲಿ ಬ್ರಾಹ್ಮಣ ನಿಂದ ಮಂತ್ರ ಹೇಳಿಸಿ ಕೈಕೈ ಹಿಡಿಸಿದರೆ ಆಯಿತು ಮದುವೆ ವಿಧವಾ ವಿವಾಹದ ಪದ್ಧತಿಯೂ ಇಲ್ಲಿ ಇಲ್ಲ, ವಿಧವಾ ವಿವಾಹಕ್ಕೆ ಮಂತ್ರ ಹೇಳಲು ಬ್ರಾಹ್ಮಣರು ಒಪ್ಪಲಿಕ್ಕಿಲ್ಲವೆಂದು ಆ ಪದ್ಧತಿಯನ್ನೇ ಇಲ್ಲಿಯವರು ಇಟ್ಟು ಕೊಂಡಿಲ್ಲ. ಆದರೆ ಇಲ್ಲಿಯ ಹೆಂಗುಸರು ವೈಧವ್ಯವನ್ನು ಬಯಸುವುದೇ ಇಲ್ಲ, ವೈಧವ್ಯವು ಅವರಿಗೆ ಸೇರಿಕೆಯಿಲ್ಲ ಆದುದರಿಂದ ವಿಧವೆಯಾದ ಹೆಂಗುಸರು ಕೂಡಲೇ ಒಂದು ಹೊಸ ಸಂಸಾರವನ್ನು ಹೂಡಿಕೊಂಡು ಇದ್ದು ಬಿಡುವರು. ಅವರಿಗೂ ಮಕ್ಕಳು ಮರಿಗಳು ಆಗುವುವು; ಅವೂ 'ನಾವು ಬಂಗಾಲಿಗಳು' ಎಂದು ಹೇಳುವುವು. ಅವರ ಮದುವೆಗೂ ಅದೇ ಪುರೋಹಿತ

ಬಂದು ಮಂತ್ರವನ್ನು ಹೇಳಿ ಮದುವೆಮಾಡಿಸಿ ಹೋಗುತ್ತಾನೆ. ಎರಡನೆ ಬಾರಿ ಗೊತ್ತಾದಂತೆ ವಿಧವೆಯು ಸಧವೆಯಂತೆ ಸಂಸಾರಮಾಡಿಕೊಂಡು ಇರುವಾಗ ಹುಟ್ಟಿದ ಮಕ್ಕಳ ವಿವಾಹವನ್ನು ಮಾಡಿಸಲು ಪುರೋಹಿತರಿಗೆ ತಿಲಮಾತ್ರವಾದರೂ ಅಡ್ಡಿ ಇಲ್ಲ. ಒಬ್ಬ ಗಂಡನು ಅತ್ಯಂತ ಕಷ್ಟಕೊಡಲಾರಂಭಿಸಿದರೆ ಅವನನ್ನು ಬಿಟ್ಟು ಇನ್ನೊಬ್ಬನ ಆಶ್ರಯಕ್ಕೆ ಹೋಗುವರು. ಆದರೆ ಹೀಗೆ ಅಪರಾಧ ಮಾಡುವುದು ಅತ್ಯಂತ ನಾಚಿಕೆಯ ಸಂಗತಿಯೆಂದೂ ಅವರಿಗೆ ದುಃಖವು ಅಧಿಕವಾಗಬೇಕೆಂದೂ ತಿಳಿಯುವರು. ಈ ರೀತಿಯ ಸಮಾಜ ಜೀವಿಗಳಾಗಿದ್ದರೂ ವಾಸ್ತವಿಕವಾಗಿ ಅವರು ಹಿಂದುಗಳು, ದುರ್ಗಾ ಪೂಜೆಯಿಂದ ಪ್ರಾರಂಭಗೊಂಡು ಷಷ್ಠೀ ಮಹಾಕಾಲ ಪೂಜಾದ ವರೆಗೆ ಯಾವ ಪೂಜೆಯನ್ನೂ ಅವರು ಬಿಡುವುದಿಲ್ಲ, ಎಲ್ಲ ಪರ್ವಗಳಲ್ಲಿ ದೇವರ ಪೂಜೆಯನ್ನು ಮಾಡುವರು.

— ೭ —

ಮಾರ್ಗದಲ್ಲಿ ಯಾರ ಸುಖದುಃಖಗಳೊಡನೆ ಬೆರೆತು ಈ ಪರದೇಶಕ್ಕೆ ಬಂದೆನೊ ಅವರು ಈ ಪಟ್ಟಣದ ಒಂದು ಮೂಲೆಯಲ್ಲಿ ಇದ್ದರು ಮತ್ತು ನನಗೆ ಆಶ್ರಯ ಸಿಕ್ಕಿದುದು ಇನ್ನೊಂದು ಮೂಲೆಯಲ್ಲಿ. ಆದುದರಿಂದ ಈ ಹದಿನೈದು ದಿನಗಳಲ್ಲಿ ಒಂದು ಬಾರಿಯಾದರೂ ಅವರನ್ನು ಕಾಣಲು ನನಗೆ ಹೋಗಲಿಕ್ಕಾಗಲಿಲ್ಲ. ಮೇಲಾಗಿ ನೌಕರಿಯನ್ನು ಹುಡುಕುತ್ತ ಹುಡುಕುತ್ತ ಬೇಸತ್ತು ದಣಿದು ಮನೆಗೆ ಬರುತ್ತಿದ್ದೆ. ವಿಶ್ರಾಂತಿಯನ್ನು ಪಡೆದು ಪುನಃ ಸಾಯಂಕಾಲ ಹೊರಗೆ ಹೋಗಲು ಮನಸ್ಸೇ ಆಗುತ್ತಿರಲಿಲ್ಲ. ಕ್ರಮೇಣವಾಗಿ ಈ ದೂರದೇಶದಲ್ಲಿ ನನಗೆ ನೌಕರಿ ಸಿಕ್ಕುವುದು ಅತ್ಯಂತ ಕಷ್ಟಸಾಧ್ಯವಾದುದೆಂದೂ ಸಿಕ್ಕಲಿಕ್ಕೇ ಇಲ್ಲ ಎಂದೂ ಎನಿಸ ತೊಡಗಿತು.

ಅಭಯಾಳ ನೆನಪು ಬಂದಿತು. ಯಾವ ಮನುಷ್ಯನ ಮೇಲೆ ಭರವಸೆಯನ್ನಿಟ್ಟುಕೊಂಡು ಮನೆಯನ್ನು ತೊರೆದು ಆಕೆಯು ಗಂಡನನ್ನು ಹಡುಕಲು ಬಂದಿದ್ದಳೊ ಆ ಮನುಷ್ಯನ ಪರಿಸ್ಥಿತಿ ಏನಾಗುವುದು! ಮನೆಯನ್ನು ಬಿಟ್ಟು ಹೊರಬೀಳುವಾಗ ತೆರೆದ ಬಾಗಿಲು ಪುನಃ ಅಷ್ಟೇ ಚೆನ್ನಾಗಿ ತಿರುಗಿ ಮನೆಗೆ ಹೋದಾಗಲೂ ತೆರೆದಿರುವುದು ಎಂದು ಯೋಚಿಸುವ ಸಾಹಸವೂ ಬಂಗಾಲದ ಹವೆ-ನೀರುಂಡ ಜನರಲ್ಲಿ ಇರಲಿಲ್ಲ. ಬಹಳ ದಿನಗಳ ವರೆಗೆ ತಮ್ಮ

ಉಪಜೀವನವನ್ನು ಸಾಗಿಸಲಿಕ್ಕೆ ಬರುವಷ್ಟು ಹಣ ಸಂಗ್ರಹವನ್ನು ಒಳಿಯುಲ್ಲಿಟ್ಟುಕೊಂಡು ಅವರು ಇತ್ತ ತಮ್ಮ ಅಧಿಕಾರವನ್ನು ಮುಂದಿಟ್ಟಿಲ್ಲ ಎಂದು ಅನುಮಾನ ಮಾಡುವುದು ಕಠಿನವಾದ ಮಾತಲ್ಲ ನನಗೆ ಒಂದು ಮಾರ್ಗ ಮಾತ್ರ ನಮ್ಮೀ ಬಂಗಾಲಿಗಳಿಗೆ ತೆರೆದಿರುವುದು— ಹತ್ತು ಹದಿನೈದು ದಿನಗಳಾದ ಬಳಿಕ ಪರಕೀಯರ ನೌಕರಿಯನ್ನು ಮಾಡುವುದು; ನೌಕರಿಯನ್ನು ಮಾಡುತ್ತ ಈ ಶರೀರದಲ್ಲಿ ಎಲಬು ಸ್ವಲ್ಪ ರಕ್ತ ಮಾಂಸ ಉಳಿಸಿಕೊಂಡಿರುವುದು ರೋಹಿಣಿಸಿಂಹನಿಗೂ ಈ ಮಾರ್ಗದ ವಿನಾ ಗತ್ಯಂತರವೇ ಇರಲಿಲ್ಲವೆಂಬುದನ್ನು ಹೇಳುವುದು ಅಗತ್ಯವಿಲ್ಲ ಆದರೆ ರಂಗೂನದ ಈ ಪೇಟೆಯಲ್ಲಿ ನನಗೆ ಹೊಟ್ಟೆ ಹೊರಕೊಳ್ಳುವುದಕ್ಕಾಗಿ ನೌಕರಿಯನ್ನು ಹುಡುಕಲು ಇಷ್ಟು ಕಷ್ಟವಾಗುತ್ತಿರುವುದೆಂದ ಬಳಿಕ ಒಬ್ಬ ಹೆಂಗಸಿನ ಭಾರವನ್ನು ತನ್ನ ಮೇಲೆ ಹೊತ್ತುಕೊಂಡ ಆ ಪಾಪ ಅಭಾಗಾಳ ಬಡ 'ಅಣ್ಣಾ'ನ ಗತಿ ಏನು ಎಂಬ ವಿಚಾರವು ಮನದಲ್ಲಿ ಬಂದೊಡನೆ ನನ್ನ ಎದೆ ನಡುಗತೊಡಗಿತು ನಾಳೆ ಹೇಗಾದರೂ ಮಾಡಿ ಅವರನ್ನು ಕಂಡೇ ಬರಬೇಕೆಂದು ನಿಶ್ಚಯಿಸಿದೆ

ಮರುದಿನ ಸುಮಾರು ಎರಡು ಹಾದಾರಿ ನಡೆದು ಸಾಯಂಕಾಲಕ್ಕೆ ಅವರ ಮನೆಗೆ ಹೋದೆ, ಹೊರಗೆ ರೋಹಿಣಿಭೈಯ್ಯಾ ಒಂದು ಚಿಕ್ಕ ಮಣೆಯ ಮೇಲೆ ಕುಳಿತಿರುವುದನ್ನು ಕಂಡೆ, ಅವನ ಮುಖ ಮಂಡಲವನ್ನು 'ಆಷಾಢಸ್ಯ ಪ್ರಥಮ ದಿವಸೆ'ಯಂತೆ ಮೋಡಗಳು ಆವರಿಸಿದ್ದುವು ಅವನು ನನ್ನನ್ನು ನೋಡಿದೊಡನೆ "ಓಹೋ, ಶ್ರೀಕಾಂತ ಬಾಬೂ! ನೀವು ಚೆನ್ನಾಗಿದ್ದೀರಿ ತಾನೆ?" ಎಂದ.

"ಹೂ, ಚೆನ್ನಾಗಿರುವೆ "

"ಹೋಗಿರಿ, ಒಳಗೆ ಹೋಗಿ ಕುಳಿತುಕೊಳ್ಳಿರಿ "

ನಾನು ಸ್ವಲ್ಪ ಅಂಜುತ್ತ "ನೀವೆಲ್ಲರೂ ಚೆನ್ನಾಗಿದ್ದೀರಿ ತಾನೆ?" ಎಂದೆ

"ಹೂ, ಒಳಗೆ ಹೋಗಿರಲ್ಲ, ಆಕೆ ಒಳಗೆ ಇದ್ದಾಳೆ."

"ಒಳ್ಳೇದು, ಹೋಗುವೆ; ನೀನೂ ಬಾ ಅಲ್ಲ?"

"ಇಲ್ಲ ನಾನು ಇಲ್ಲೇ ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳುವೆ. ಪರಿಶ್ರಮ ಮಾಡಿಮಾಡಿ ನಾನು ಒಂದು ಬಗೆಯಿಂದ ಸತ್ತೇ ಹೋಗುತ್ತಿದ್ದೇನೆ, ಒಂದೇ-

ರಡು ನಿಮಿಷ ಕಾಲುಚಾಚಿಕೊಂಡು ವಿಶ್ರಾಂತಿಯನ್ನಾದರೂ ತೆಗೆದು ಕೊಳ್ಳುವೆ ”

‘ಪರಿಶ್ರಮದಿಂದ ಸತ್ತು ಹೋಗುತ್ತಿದ್ದೇನೆ’ ಎಂದು ಅವನು ಆಡಿದ ಮಾತು ಅವನ ಮುಖ ನೋಡಿದರೆ ನಿಜ ಎಂದು ಎನಿಸುತ್ತಿರಲಿಲ್ಲ,ಆದಾಗ್ಯೂ ನಾನು ಮನದಲ್ಲಿಯೆ ಉದ್ವಿಗ್ನನಾದೆ ರೋಹಿಣಿಭೈಯಾನಲ್ಲೂ ಇಷ್ಟು ಗಾಂಭೀರ್ಯವು ಇಷ್ಟು ದಿನಗಳಿಂದ ಗುಪ್ತರೀತಿಯಲ್ಲಿ ಮನೆಮಾಡಿಕೊಂಡು ಇರುವುದೆಂಬುದನ್ನು ಕಣ್ಣಾರೆ ಕಾಣದ ಹೊರತು ನಂಬುವುದು ಕಷ್ಟ ಆದರೆ ಆದುದಾದರೂ ಏನು? ನಾನೂ ಬೀದಿ ಬೀದಿ ಅಲೆದು ದಾರಿಯ ಹುಡಿಯನ್ನು ವೈತುಂಬ ಮಾಡಿಕೊಂಡಿರುವೆ ನನ್ನ ಈ ರೋಹಿಣಿಭೈಯಾನಾದರೂ ಏನು—

ಬಾಗಿಲ ಸಂದಿನೊಳಗಿಂದ ತನ್ನ ನಗುಮೊಗವನ್ನು ಹೊರಕ್ಕೆ ಹಾಕಿ ಸುಮ್ಮಗೆ ಸನ್ನೆಯಿಂದ ಅಭಯಾ ನನ್ನನ್ನು ಕರೆದಳು ನಾನು ಧರ್ಮ ಸಂಕಟದಲ್ಲಿ ಬಿದ್ದು “ರೋಹಿಣಿಭೈಯಾ, ನೀನೂ ಒಳಗೆ ನಡೆಯಲ್ಲ, ಒಳಗೇ ಹರಟೆ ಹೊಡೆಯೋಣ!” ಎಂದ.

“ಹರಟೆ! ಈಗ ನಾನು ಸತ್ತರೆ ಬಹಳ ಒಳ್ಳೆಯದು, ಗೊತ್ತೇನು ಶ್ರೀಕಾಂತಬಾಬೂ?”

“ಗೊತ್ತಿಲ್ಲ” ಎಂದು ಒಪ್ಪಿಕೊಳ್ಳಬೇಕಾಯಿತು ನಾನು. ಅವನು ಒಂದು ಅತ್ಯಂತ ದೀರ್ಘವಾದ ಉಸಿರನ್ನು ಬಿಟ್ಟು “ಎರಡು ದಿನಗಳ ನಂತರವೇ ಗೊತ್ತಾಗುವುದು’’ ಎಂದ.

ಪುನಃ ಸನ್ನೆಯಿಂದ ಅಭಯಾ ಕರೆದಳು. ನಾನು ಬಹಳ ಹೊತ್ತು ಹೊರಗೆ ನಿಲ್ಲಲಿಲ್ಲ, ಒಳಗೆ ಹೋದೆ ಒಳಗೆ ಅಡುಗೆಯ ಮನೆಯ ಹೊರತು ಇನ್ನೂ ಎರಡು ಕೋಣೆಗಳಿವೆ ಅವು ಮಲಗುವ ಕೋಣೆಗಳು. ಎದುರಿಗಿರುವ ಕೋಣೆಯೇ ದೊಡ್ಡದು, ಅದರಲ್ಲಿಯೆ ರೋಹಿಣಿಬಾಬೂ ಮಲಗುವ ಒಂದು ಬದಿಯಲ್ಲಿ ಅವನ ಮಂಚವಿದೆ, ಆದರ ಮೇಲೆ ಹಾಸುಗೆಯಿದೆ. ಒಳಗೆ ಹೋಗಿ ನೋಡಿದೆ. ನೆಲದ ಮೇಲೆ ಒಂದು ಆಸನವಿದೆ—ಅದರ ಎದುರಿಗೆ ತಟ್ಟೆಯಲ್ಲಿ ಪುರೆಪಲ್ಯ, ಸ್ವಲ್ಪ ಸೀ-ಸಜ್ಜಿಗೆ; ಒಂದು ತಾಲಿಯಲ್ಲಿ ನೀರು ಇಟ್ಟಿವೆ. ಜೋತಿಷಿಯನ್ನು ಕೇಳಿ ನನಗಾಗಿ ಇಷ್ಟೆಲ್ಲ ಮಾಡಿ ಇಡಲಾಗಿದ್ದಿಲ್ಲ

ಎಂಬುದರಲ್ಲಿ ಸಂದೇಹವಿಲ್ಲ. ಕ್ಷಣದಲ್ಲಿ ಏನೋ ಜಗಳ ನಡೆದಿದೆ ಎಂದು ನಾನು ತಿಳಿದುಕೊಂಡೆ. ಆದುದರಿಂದಲೇ ರೋಹಿಣಿಭೈಯಾನ ಮುಖದ ಮೇಲೆ ಮೋಡಗಳು ಕವಿದಿವೆ. ಆದುದರಿಂದಲೇ ಅವನು ತಾನು ಸತ್ತರೆ ಒಳ್ಳೆಯದು ಎಂದು ಹೇಳಿದ್ದ! ನಾನು ಸುಮ್ಮನೆ ಹೋಗಿ ಮಂಚದ ಮೇಲೆ ಕುಳಿತೆ ಅಭಯಾ ಸ್ವಲ್ಪ ದೂರದಲ್ಲಿ ನಿಂತು "ನೀವು ಒಳಿತಾಗಿದ್ದೀರಾ? ಇಷ್ಟು ದಿವಸಗಳಾದ ಬಳಿಕ ಒಡವರ ನೆನಪು ಬಂದಿತೆ?' ಎಂದಳು.

ಊಟದ ತಟ್ಟೆಯನ್ನು ತೋರಿಸಿ "ನನ್ನ ಮಾತು ಆಮೇಲೆ; ಆದರೆ ಇದೇನು?" ಎಂದು ಕೇಳಿದೆ.

ಅಭಯಾ ನಕ್ಕಳು ಮತ್ತು ಸ್ವಲ್ಪ ಸಮಯ ಸುಮ್ಮಗಿದ್ದು "ಇದೇನೂ ಇಲ್ಲ, ಮೊದಲು ನೀವು ಹೇಗಿರುವಿರಿ ಹೇಳಿರಿ?'' ಎಂದಳು.

"ನಾನು ಹೇಗಿದ್ದೇನೆಂಬುದು ನನಗೇ ಗೊತ್ತಿಲ್ಲ ಎಂದ ಮೇಲೆ ಬೇರೆ ಯವರಿಗೆ ಹೇಗೆ ಹೇಳಲಿ?'' ಎಂದು ಸ್ವಲ್ಪ ಯೋಚಿಸಿ "ನೌಕರಿ ಎಲ್ಲಿಯ ವರೆಗೆ ಸಿಗುವುದಿಲ್ಲವೊ ಅಲ್ಲಿಯ ವರೆಗೆ ಈ ಮಾತಿಗೆ ಉತ್ತರ ಕೊಡುವುದು ಸ್ವಲ್ಪ ಕಷ್ಟ ರೋಹಿಣಿಬಾಬೂ ಅನ್ನುತ್ತಿದ್ದ—''ಎಂದು ಏನೋ ಹೇಳ ಬೇಕೆಂದು ಮಾಡಿದ್ದೆ, ಆದರೆ ಮಾತು ಹೊರಗೆ ಬರಲೇ ಇಲ್ಲ ರೋಹಿಣಿ ಭೈಯಾ ತನ್ನ ಹರಿದ ಜೋಡುಗಳಿಂದ ಚಪ್ ಚಪ್ ಶಬ್ದಮಾಡುತ್ತ ಒಳಗೆ ಬಂದ ಮತ್ತು ಒಂದು ಥಾಲಿ ನೀರನ್ನು ಒಂದೇ ಗುಟಕಿನಲ್ಲಿ ಕುಡಿದುಬಿಟ್ಟ. ಬಳಿಕ ಥಾಲಿಯನ್ನು ಮೇಜಿನ ಮೇಲೆ ಇಟ್ಟು "ಹೋಗಲಿ ಬಿಡು, ಕೇವಲ ನೀರನ್ನೇ ಕುಡಿದು ಹೊಟ್ಟೆ ತುಂಬಿಕೊಂಡರಾಯಿತು! ಹೊಟ್ಟೆ ಹಸಿದಾಗ ಊಟಕ್ಕೆ ಹಾಕುವಂಥವರು ನನ್ನವರು ಇಲ್ಲಿ ಯಾರಿದ್ದಾರೆ?" ಎನ್ನುತ್ತ ಎನ್ನುತ್ತ ಹೊರಗೆ ಹೋದ.

ನಾನು ಮೂಕನಂತಾಗಿ ಅಭಯಾನ ಕಡೆಗೆ ನೋಡಿದೆ. ಕ್ಷಣಮಾತ್ರ ದಲ್ಲಿ ಆಕೆಯ ಮುಖವು ಕೆಂಪಾಯಿತು ಆದರೆ ಅದೇ ವೇಳೆಯಲ್ಲಿ ತನ್ನನ್ನು ಸಂಬಾಳಿಸಿಕೊಂಡು ನಗುತ್ತ 'ಹೊಟ್ಟೆ ಹಸಿದರೆ ಮನುಷ್ಯನಿಗೆ ನೀರಿನ ಥಾಲಿ ಗಿಂತ ಬಡಿಸಿದ ತಟ್ಟೆಯೆ ಮೊದಲು ಕಾಣಿಸುವುದು." ಎಂದಳು.

ರೋಹಿಣಿಬಾಬೂ ಈ ಮಾತನ್ನು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ, ಹಾಗೆಯೆ ಹೊರಗೆ ಹೊರಟುಹೋದ ಪುನಃ ಅರ್ಧ ನಿಮಿಷದಲ್ಲಿ ಒಳಗೆ

ಬಂದ ಮತ್ತು ಬಾಗಿಲ ಬಳಿಯಲ್ಲಿ ನಿಂತು ನನ್ನನ್ನು ಸಂಬೋಧಿಸಿ "ಇಡಿ ದಿನ ಆಫೀಸಿನಲ್ಲಿ ಪರಿಶ್ರಮಮಾಡಿದ ಮೇಲೆ ಹಸಿವಿನಿಂದ ತಲೆ ತಿರುಗುತ್ತಿತ್ತು ಶ್ರೀಕಾಂತಬಾಬೂ, ಆದ್ದರಿಂದಲೇ ನಿಮ್ಮ ಕೂಡ ಮಾತನಾಡಲಾರದವನಾದೆ. ಮನಸ್ಸಿನಲ್ಲಿ ಹಿಡಿಯಬೇಡಿರಿ!" ಎಂದ.

"ಇಲ್ಲ"

"ನೀವು ಇದ್ದಲ್ಲಿಯೆ ನನಗೂ ವ್ಯವಸ್ಥೆಯನ್ನು ಮಾಡಿಕೊಡಬಲ್ಲಿರಾ?" ಅವನ ಮುಖ-ಭಂಗಿಯನ್ನು ನೋಡಿ ನಾನು ನಕ್ಕು ಬಿಟ್ಟೆ. ಬಳಿಕ "ಅಲ್ಲಿ ಪುರಿ, ಮೋಹನಭೋಗ (ಹಲ್ವ=ಸೀಸಜ್ಜಿಗೆ) ಮೊದಲಾದವುಗಳ ವ್ಯವಸ್ಥೆ ಇಲ್ಲ" ಎಂದು ಹೇಳಿದೆ.

"ಅವು ಏತಕ್ಕೆ ಬೇಕು! ಹಸಿವಾದಾಗ ಯಾರಾದರೂ ಸ್ವಲ್ಪ ಬೆಲ್ಲ ಮತ್ತು ನೀರು ಕೊಟ್ಟರೆ ಅದೇ ಅಮೃತವಾಗುವುದು! ಇಲ್ಲಿ ಅಷ್ಟನ್ನಾದರೂ ಯಾರು ಕೊಡುವರು?"

ನಾನು ತಿಳಿದುಕೊಳ್ಳಬೇಕೆಂಬ ಉದ್ದೇಶದಿಂದ ಅಭಯಾನ ಕಡೆಗೆ ನೋಡಿದೆ. ಕೂಡಲೆ ಆಕೆಯು ಮೆಲ್ಲಗೆ "ತಲೆನೋವು ಬಂದಿತ್ತು, ಸ್ವಲ್ಪ ಅವೇಳೆಯಲ್ಲಿ ಮಲಗಿಕೊಂಡೆ, ಆದುದರಿಂದ ಅಡುಗೆ ಮಾಡಲು ಸ್ವಲ್ಪ ತಡ ವಾಗಿ ಹೋಯಿತು ಶ್ರೀಕಾಂತಬಾಬೂ" ಎಂದಳು

ನಾನು ಆಶ್ಚರ್ಯದಿಂದ "ಸರಿ, ಇದೇ ಏನು ಅಪರಾಧ?" ಎಂದೆ. ಅಭಯಾ ಅದೇ ರೀತಿಯಾಗಿ ಶಾಂತಚಿತ್ತದಿಂದ "ಇದೇನು ತುಚ್ಛ ಅಪರಾಧವೆ ಶ್ರೀಕಾಂತ ಬಾಬೂ?" ಎಂದಳು.

"ತುಚ್ಛವಲ್ಲದಿದ್ದರೆ ಮತ್ತೇನು?"

"ನಿಮ್ಮ ನೋಟದಲ್ಲಿ ತುಚ್ಛವಾಗಬಹುದು, ತಾನಾಗಿಯೆ ಕೊರಳಿಗೆ ಬಿದ್ದವಳಿಗೆ ಊಟಕ್ಕೆ ಹಾಕುವವರಿಗೆ ತುಚ್ಛ; ಅವರು ಅದನ್ನು ಹೇಗೆ ಕ್ಷಮಿಸ ಬಲ್ಲರು? ನನಗೆ ತಲೆನೋವಾದರೇನು? ಅವರ ಕೆಲಸ ಸರಿಯಾಗಿ ಸಾಗ ಬೇಕಲ್ಲವೆ?"

ರೋಹಿಣೀ ಬಾಬೂ ಒಮ್ಮೆಗೆ ಗರ್ಜಿಸಿ "ನೀನು ಕೊರಳಿಗೆ ಬಿದ್ದಾಕೆ ಎಂದು ನಾನಾವಾಗ ಹೇಳಿದೆ?" ಎಂದ.

"ಹೇಳಬೇಕಾಗಿಲ್ಲ, ಸಾವಿರಾರು ಸಲ ಈ ಭಾವವನ್ನು ಕಾರ್ಯರೂಪ ದಲ್ಲಿ ತೋರಿಸುತ್ತಿದ್ದೀರಿ !"

"ತೋರಿಸುತ್ತಿದ್ದೇನೆ! ಓಹೋ, ನಿನ್ನ ಮನದಲ್ಲಿ ಜಲೇಬಿಯಂತೆ ಚಕ್ರವ್ಯೂಹವಿದೆ! ತಲೆನೋಯುತ್ತಿದೆಯೆಂದು ನೀನು ನನಗೆ ಹೇಳಿದ್ದೆಯಾ?"

"ಹೇಳಿದ್ದರೇನು ಲಾಭವಾಗುತ್ತಿತ್ತು? ನೀನು ವಿಸ್ವಾಸವಿಡುತ್ತಿ-ದ್ದೆಯಾ?"

ರೋಹಿಣಿ ಭೈಯಾ ನನ್ನ ಕಡೆಗೆ ಗರಕ್ಕನೆ ತಿರುಗಿ ಉಚ್ಚಸ್ವರದಿಂದ "ಕೇಳಿರಿ ಶ್ರೀಕಾಂತ ಬಾಬೂ, ಈ ಎಲ್ಲ ಮಾತುಗಳನ್ನು ಕೇಳಿಟ್ಟಿರಿ. ಈಕೆಯ ಸಲುವಾಗಿಯೇ ನಾನು ಮನೆಯನ್ನು ಬಿಟ್ಟೆ, ಮನೆಗೆ ಹಿಂತಿರುಗುವ ದಾರಿಯು ಕಟ್ಟಾಗಿ ಹೋಯಿತು-ಈಗ ಈಕೆಯ ಬಾಯ ಮಾತು ಕೇಳಿರಿ,ಓಹೋ-"ಎಂದ.

ಅಭಯಾ ಕೂಡ ಈ ಬಾರಿ ಸಿಟ್ಟಿನಿಂದ ಉತ್ತರವಿತ್ತಳು "ನನಗೇ ನೇನು ಆಗುವುದೋ ಆಗಲಿ, ನೀನು ಮನಸ್ಸಿಗೆ ಬಂದಾಗ ಇನ್ನು ದೇಶಕ್ಕೆ ತಿರುಗಿ ಹೋಗಬಹುದು! ನನಗಾಗಿ ನೀನಿಷ್ಟು ಕಷ್ಟ ಸಹಿಸುವುದೇಕೆ? ನಾನೇನಾಗಬೇಕು ನಿನಗೆ? ಈ ರೀತಿ ವ್ಯಂಗ್ಯವಾಗಿ ನುಡಿಯುವುದಕ್ಕಿಂತ—"

ಆಕೆಯ ಮಾತು ಮುಗಿದಿತ್ತೋ ಇಲ್ಲವೊ ರೋಹಿಣಿ ಭೈಯಾ ಚೀರಿ, "ಕೇಳಿರಿ ಶ್ರೀಕಾಂತ ಬಾಬೂ, ಎರಡು ರೊಟ್ಟಿಗಳನ್ನು ಬೇಯಿಸಿ ಹಾಕುವು ದಕ್ಕಾಗಿ— ಈ ಮಾತುಗಳನ್ನು ಕೇಳಿಟ್ಟಿರಿ! ಒಳ್ಳೇದು, ಇವೊತ್ತಿನಿಂದ ನೀನು ಎಂದಾದರೂ ನನ್ನ ಸಲುವಾಗಿ ಅಡುಗೆ ಮನೆಯಲ್ಲಿ ಕಾಲಿಟ್ಟರೆ ನೀನು ಬಹಳ ದೊಡ್ಡ— ಆದರೆ ಹೋಟೆಲಿನಲ್ಲಿ—" ಎನ್ನುತ್ತಿರುವಾಗ ಅವನ ಕಂಠ ಬಿಗಿದು ಬಂದಿತು. ಅವನು ದೋತರದ ಚುಂಗನ್ನು ಮೋರೆಯ ಮೇಲೆ ಇಟ್ಟು ಕೊಂಡು ಬೇಗ ಬೇಗ ಹೊರಗೆ ಹೋಗಿಬಿಟ್ಟ. ಅಭಯಾ ತನ್ನ ನಿಸ್ತೇಜ ಮುಖವನ್ನು ಕೆಳಗೆ ಬಾಗಿಸಿದಳು— ಕಂಬನಿಗಳನ್ನು ಮುಚ್ಚಿಕೊಳ್ಳುವುದಕ್ಕೊ ಅಥವಾ ಹೀಗೆಯೊ ಹೇಳಲಾರೆ ಆದರೆ ನಾನು ಮಾತ್ರ ದಿಗ್ಭ್ರಮೆಗೊಂಡು ಕುಳಿತೆ. ಕೆಲವು ದಿನಗಳಿಂದ ಇಬ್ಬರಲ್ಲಿಯೂ ಸ್ವಲ್ಪ ಮನಸ್ತಾಪವಾಗುತ್ತಿ ರುವುದು ಎಂಬುದು ಕಣ್ಣಿಗೇ ಕಾಣುತ್ತಿದ್ದಿತು. ಇದರ ಮೂಲಕಾರಣ ದೃಷ್ಟಿಗೆ ಅಗೋಚರವಾಗಿದ್ದರೂ ಹಸಿವು ಮತ್ತು ಅಡುಗೆ ಅಲ್ಲ ಎಂಬುದನ್ನು ಅರಿ ಯಲು ತಡ ಹಿಡಿಯಲಿಲ್ಲ ನನಗೆ. ಆಗ — ಪತಿಯನ್ನು ಹುಡುಕುವ ವಿಷಯ ಸಹ--

ನಾನು ಎದ್ದು ನಿಂತೆ. ಆಗಿನ ಶಾಂತಿಯನ್ನು ಭಂಗಮಾಡಲು ಏನಗೆ ಸ್ವಲ್ಪ ಸಂಕೋಚವೆನಿಸತೊಡಗಿತು. ಸ್ವಲ್ಪ ಅತ್ತಿತ್ತ ನೋಡಿ "ನಾನು ಬಹಳ ದೂರ ಹೋಗಬೇಕು—ಈಗ ಹೊರಡುವೆ" ಎಂದೆ.

ಅಭಯಾ ತಲೆಯೆತ್ತಿ "ಇನ್ನು ಯಾವಾಗ ಬರುವಿರಿ?" ಎಂದು ಮೆಲ್ಲಗೆ ಕೇಳಿದಳು.

"ಬಹಳ ದೂರ—"

"ಹಾಗಾದರೆ ಸ್ವಲ್ಪ ನಿಲ್ಲಿರಿ" ಎಂದು ಅಭಯಾ ಹೊರಗೆ ಹೋದಳು. ಐದಾರು ನಿಮಿಷಗಳ ನಂತರ ಹಿಂತಿರುಗಿ ಬಂದಳು. ನನ್ನ ಕೈಯಲ್ಲಿ ಒಂದು ಕಾಗದವನ್ನು ಕೊಟ್ಟು "ನಾನು ಇಲ್ಲಿಗೆ ಯಾವ ಕಾರ್ಯಕ್ಕಾಗಿ ಬಂದಿರುವೆನೊ ಅದರ ವಿಷಯವನ್ನು ಸಂಕ್ಷೇಪದಲ್ಲಿ ಈ ಪತ್ರದಲ್ಲಿ ಬರೆಯಲಾಗಿದೆ. ಅದನ್ನು ಓದಿ, ಸರಿತೋರಿದಂತೆ ಮಾಡಿರಿ. ನಾನು ಇದಕ್ಕೂ ಹೆಚ್ಚಿಗೆ ನಿಮಗೆ ಏನನ್ನೂ ಹೇಳಲಾರೆ" ಎಂದು ಸೆರಗನ್ನು ಕುತ್ತಿಗೆಗೆ ಸುತ್ತಿಕೊಂಡು ಬಾಗಿ ನನ್ನ ಅಡಿಗೆರಗಿದಳು. ಬಳಿಕ ಎದ್ದು "ನೀವು ಇರುವುದೆಲ್ಲಿ?" ಎಂದು ಕೇಳಿದಳು.

ಪ್ರಶ್ನೆಗೆ ಉತ್ತರವಿತ್ತು ನಾನು ಕಾಗದವನ್ನು ಮುಷ್ಟಿಯಲ್ಲಿ ಮುಚ್ಚಿಕೊಂಡು ಮೆಲ್ಲ ಮೆಲ್ಲಗೆ ಹೊರಟೆ ಹೊರಗಿನ ಭಾಗ ಈಗ ಶೂನ್ಯವಾಗಿದ್ದಿತು. ರೋಹಿಣಿ ಭೈಯಾ ನನಗೆ ಅಲ್ಲಿ ಎಲ್ಲಿಯೂ ಕಾಣಿಸಲಿಲ್ಲ. ನನ್ನ ಮನೆಯನ್ನು ಮುಟ್ಟುವತನಕ ನಾನು ನನ್ನ ಕುತೂಹಲವನ್ನು ಹತ್ತಿಕ್ಕದಾದೆ. ಹತ್ತಿರದಲ್ಲಿಯೇ ಒಂದು ಚಹಾದ ಅಂಗಡಿಯಿದ್ದಿತು. ಅದನ್ನು ಹೊಕ್ಕೆ. ದೀಪದ ಬೆಳಕಿನಲ್ಲಿ ಮೇಜಿನ ಮೇಲೆ ಆ ಪತ್ರವನ್ನು ತೆರೆದು ನನ್ನ ಮುಂದೆ ಇಟ್ಟುಕೊಂಡೆ ಸೀಸ ಕಡ್ಡಿಯಿಂದ ಬರೆದ ಪತ್ರವದು, ಕೆಳಗೆ ಪುರುಷರಂತೆ ಹಸ್ತಾಕ್ಷರ! ಮೊಟ್ಟ ಮೊದಲು ಆಕೆಯು ತನ್ನ ಗಂಡನ ಹೆಸರು ಮತ್ತು ವಿಳಾಸವನ್ನು ಬರೆದು ಕೆಳಗೆ ಈ ಸಂಗತಿಯನ್ನು ಬರೆದಿದ್ದಳು "ಈ ದಿನ ನೀವು ನಿಮ್ಮ ಮನಸ್ಸಿನಲ್ಲಿ ಏನು ಧಾರಣೆ ಮಾಡಿಕೊಂಡು ಹೋಗುತ್ತಿರುವಿರೊ ಅದನ್ನು ನಾನು ಬಲ್ಲೆ. ಈ ವಿಪತ್ತಿನಲ್ಲಿ ನನಗೆ ನಿಮ್ಮ ಭರವಸೆಯೆಷ್ಟಿದೆ ಎಂಬುದನ್ನು ನೀವೂ ಬಲ್ಲಿರಿ. ಅದಕ್ಕಾಗಿಯೆ ನಾನು ನಿಮ್ಮ ವಿಳಾಸವನ್ನು ಕೇಳಿರುವೆ?"

ಅಭಯಾಳ ಪತ್ರವನ್ನು ನಾನು ಬಾರಿ ಬಾರಿ ಓದಿದೆ, ಆದರೆ ಅದರಲ್ಲಿ ಈ ಕೆಲವು ಮಾತುಗಳನ್ನುಳಿದು ಬೇರೆ ಯಾವುದಾದರೂ ಮಾತು ಇರಬಹುದು

ಧೆಂದು ಯೋಚಿಸಲು ನಾನು ಅಸಮರ್ಥನಾದೆ. ಈ ದಿನ ಈ ಇರ್ವರ ಪರಸ್ಪರ ವ್ಯವಹಾರವನ್ನು ಕಣ್ಣಾರೆ ಕಂಡ ಹೊರಗಿನ ಮನುಷ್ಯನು ಏನೆಂದು ತಿಳಿದುಕೊಳ್ಳುವನು ಎಂಬುದರ ಕಲ್ಪನೆಯನ್ನು ಮಾಡುವುದು ಅಭಯಾಳಂತಹ ಬುದ್ಧಿಮತಿಗೆ ಅತ್ಯಂತ ಕಠಿನವಾದ ವಿಷಯವಲ್ಲ ಆದರೆ ಹೀಗಿದ್ದಾಗ್ಯೂ ಈ ಕಲ್ಪನೆಯು ಸರಿಯೊ ಅಲ್ಲವೊ ಎಂಬುದನ್ನು ತಿಳಿಸಿಕೊಡಲು ಆಕೆಯು ಸ್ವಲ್ಪಾದರೂ ಅವಕಾಶವನ್ನು ಕೊಡಲಿಲ್ಲ. ಆಕೆಯ ಗಂಡನ ಹೆಸರನ್ನು ಮತ್ತು ವಿಳಾಸವನ್ನು ನಾನು ಮೊದಲೇ ಆಕೆಯಿಂದ ತಿಳಿದುಕೊಂಡಿದ್ದೇನೆ. ವಿಪತ್ಕಾಲದಲ್ಲಿ ಆಕೆಯು ನನ್ನ ಮೇಲೆ ಅವಲಂಬಿಸಿರುವುದನ್ನೂ ಕಂಡಿರುವೆ; ಆದರೆ, ಆ ಮೇಲೆ ಏನು? ಈಗ ಆಕೆಯು ತನ್ನ ಗಂಡನನ್ನು ಹುಡುಕ ಬಯಸುವಳೊ ಇಲ್ಲವೊ ಅಥವಾ ಮತ್ತಾವ ಸಂಭವಿಸಬಹುದಾದ ವಿಪತ್ತಿನಲ್ಲಿ ನನ್ನ ಆಶ್ರಯ, ಸಹಾಯ ಬಯಸುತ್ತಿರುವಳು ಎಂಬುದರ ಕಲ್ಪನೆಯು ನನಗೆ ಆ ಪತ್ರದಲ್ಲಿ ಎಲ್ಲಿಯೂ ಎಷ್ಟು ಹುಡುಕಿದರೂ ಸಿಕ್ಕಲಿಲ್ಲ. ಮಾತು ಕತೆಯಿಂದ ರೋಹಿಣಿ ಭೈಯಾಗೆ ಯಾವುದೊ ಒಂದು ಆಫೀಸಿನಲ್ಲಿ ನೌಕರಿಯು ಸಿಕ್ಕಿದೆ ಎಂಬುದು ತಿಳಿಯಿತು. ಆದರೆ ಅವನಿಗೆ ನೌಕರಿ ಹೇಗೆ ಸಿಕ್ಕಿತು ಎಂಬುದು ನನಗೆ ಗೊತ್ತಾಗಲಿಲ್ಲ. ಆದರೆ ಇಷ್ಟು ಮಾತ್ರ ನಿಜ, ಊಟ-ಉಡುಗೆಯ ಚಿಂತೆ ನನ್ನಂತೆ ಅವರಿಗಿಲ್ಲ, ಪುರಿ-ಪಲ್ಯ ಅವರಿಗೆ ತಿನ್ನಲು ಸಿಕ್ಕುವುದು ಎಂಬುದೂ ಗೊತ್ತಾಯಿತು. ಆದರೆ ಅಭಯಾ ಯಾವ ಸಂಭವನೀಯ ಸಂಕಟಕ್ಕಾಗಿ ನನ್ನನ್ನು ಸಿದ್ಧಗೊಳಿಸಿ ಇಟ್ಟಿರುವಳು ಎಂಬುದು ಆಕೆಗೇ ಗೊತ್ತು, ನನಗೆ ಮಾತ್ರ ಎಷ್ಟೂ ಗೊತ್ತಾಗಲಿಲ್ಲ.

ಹೋಟೆಲಿನಿಂದ ಹೊರಬಿದ್ದು ದಾರಿಯುದ್ದಕ್ಕೂ ಇವರ ವಿಷಯವನ್ನೇ ವಿಚಾರ ಮಾಡುತ್ತ ಮನೆಯನ್ನು ಮುಟ್ಟಿದೆ. ಯಾವ ನಿರ್ಧಾರಕ್ಕೂ ನಾನು ಬರದಾದೆ. ಆದರೆ ಇಷ್ಟನ್ನು ಮಾತ್ರ ನಾನು ನಿರ್ಧರಿಸಿದೆ—ಅಭಯಾನ ಪತಿ ಯಾರೇ ಇರಲಿ, ಎಲ್ಲಾದರೂ ಇರಲಿ, ಹೇಗಾದರೂ ಇರಲಿ, ಆಕೆಯ ಒಪ್ಪಿಗೆಯನ್ನು ಪಡೆಯದೆ ನಾನು ಅವನನ್ನು ಹುಡುಕಿ ತೆಗೆಯಬೇಕೆನ್ನುವ ನನ್ನ ಕುತೂಹಲವನ್ನು ಹತ್ತಿಕ್ಕಿಡಬೇಕು.

ಮರುದಿನದಿಂದ ಪುನಃ ನಾನು ನನ್ನ ನೌಕರಿಯನ್ನು ಹುಡುಕುವ ಉದ್ಯೋಗದಲ್ಲಿ ತೊಡಗಿದೆ. ಆದರೆ ಸಾವಿರಾರು ಚಿಂತೆಗಳಲ್ಲಿ ಅಭಯಾಳ

ಚಿಂತೆಯನ್ನು ಪೂರ್ತಿಯಾಗಿ ನನ್ನ ಮನದಿಂದ ಹೊಡೆದೋಡಿಸಲಾಗಲಿಲ್ಲ.

ನಾನೆಷ್ಟು ಚಿಂತಿಸಿದರೇನು? ದಿನಗಳ ಮೇಲೆ ದಿನಗಳು ಉರುಳಿ ಹೋಗತೊಡಗಿದುವು. ಇತ್ತ ಭಾಗ್ಯವಾದೀ ಠಾಕುರ ದಾದಾನ ಮುಖವು ಮೇಘಾಚ್ಛನ್ನವಾಗತೊಡಗಿತು. ಊಟದಲ್ಲಿ ಕಾಯಿಪಲ್ಯಗಳ ಸಂಖ್ಯೆಯೂ ಪರಿಮಾಣವೂ ಮೆಲ್ಲ ಮೆಲ್ಲಗೆ ಕಡಿಮೆಯಾಗತೊಡಗಿದುವು. ಆದರೆ ನೌಕರಿಯು ನನ್ನ ವಿಷಯದಲ್ಲಿ ತನ್ನ ಮತಪರಿವರ್ತನೆಯನ್ನು ಇನಿತೂ ಮಾಡಲಿಲ್ಲ. ಅದು ಮೊದಲು ಎಂತಹ ದೃಷ್ಟಿಯಿಂದ ನೋಡಿದ್ದಿತೋ ಅದೇ ದೃಷ್ಟಿಯಿಂದ ಒಂದು ತಿಂಗಳು ಕಳೆದರೂ-ನೋಡತೊಡಗಿದ್ದಿತು. ಆಗ ನಾನು ಕ್ರಮಶಃ ಆದಾರ ಬಗ್ಗೆಯೂ ಉತ್ಸುಕನೂ ವಿರಕ್ತನೂ ಆಗತೊಡಗಿದೆ. ನನಗೆ ನೌಕರಿಯು ಅತ್ಯಂತ ಅಗತ್ಯವು ಎಲ್ಲಿಯ ತನಕ ಇಲ್ಲವೋ ಅಲ್ಲಿಯ ತನಕ ಅದು ನನಗೆ ತನ್ನ ದರ್ಶನದ ಲಾಭವನ್ನು ಕೊಡದು ಎಂದು ನಾನು ಈ ವರೆಗೆ ತಿಳಿದುಕೊಂಡಿರಲಿಲ್ಲ. ನನಗೆ ಈ ಜ್ಞಾನವು ಒಂದು ದಿನ ಆದುದು ರೋಹಿಣಿ ಬಾಬೂನನ್ನು ದಾರಿಯಲ್ಲಿ ಕಂಡಾಗ. ಅವನು ಪೇಟೆಯಲ್ಲಿ ಕಾಯಿಪಲ್ಯವನ್ನು ಕೊಂಡುಕೊಳ್ಳುತ್ತಿದ್ದ. ನಾನು ಅವನನ್ನು ಕೂಗದೆ ಸುಮ್ಮಗೆ ಅವನ ಬಳಿಗೆ ಹೋಗಿ ನಿಂತು ನೋಡುತ್ತಿದ್ದೆ. ಅವನ ಎಲ್ಲ ಬಟ್ಟೆಗಳು ಹರಿದು ಹೋಗಿದ್ದುವು, ಕಾಲ್ಮರಿಗಳು ಪೆನ್ಶನ್ನಿಗೆ ಬಂದಿದ್ದುವು, ಬಿಸಿಲು ಅತ್ಯಂತ ಪ್ರಖರವಾಗಿದ್ದರೂ ತಲೆಯ ಮೇಲೆ ಟೊಪ್ಪಿಗೆ ಇರಲಿಲ್ಲ; ಆದಾಗ್ಯೂ ಅವನು ದೊಡ್ಡ ಮನುಷ್ಯರಂತೆ ವಸ್ತುಗಳನ್ನು ಕೊಳ್ಳುತ್ತಿದ್ದ. ಸಾಮಾನುಗಳನ್ನು ಹುಡುಕುವುದರಲ್ಲಿ, ಆರಿಸುವುದರಲ್ಲಿ ನಿಷ್ಣಾತ. ತೊಂದರೆಯು ಬೇಕಾದಷ್ಟು ಆದರೂ ಪರವಾಯಿಲ್ಲ, ಅತ್ಯಂತ ಒಳ್ಳೆಯ ಪದಾರ್ಥಗಳನ್ನು ಕೊಳ್ಳುವುದರಲ್ಲಿ ತನ್ನ ತನಮನಗಳನ್ನು ತೊಡಗಿಸಿದ್ದ. ಕಣ್ಣು ಮುಚ್ಚಿ ಕಣ್ಣು ತೆರೆಯುವಷ್ಟರಲ್ಲಿ ಅವನ ವ್ಯಾಪಾರವು ನನ್ನ ಕಣ್ಣು ಮುಂದೆ ತೇಲತೊಡಗಿತು. ಈ ಕೊಂಡುಕೊಳ್ಳುವಿಕೆಯಲ್ಲಿ ಅವನ ವ್ಯಗ್ರ ವ್ಯಾಕುಲ ಪ್ರೇಮವು ಯಾವ ಮಟ್ಟವನ್ನು ಮುಟ್ಟಿದೆ ಎಂಬುದು ಸೂರ್ಯಪ್ರಕಾಶದಂತೆ ನನಗೆ ಸ್ಪಷ್ಟವಾಗಿ ಕಾಣಿಸಿತು. ಇದೆಲ್ಲವನ್ನು ತೆಗೆದುಕೊಂಡು ಅದೇಕೆ ಅವನು ತನ್ನ ಮನೆಗೆ ಹೋಗಲೇಬೇಕು ಮತ್ತು ಅದೇಕೆ ಎಲ್ಲ ವಸ್ತುಗಳಿಗೆ ಬೆಲೆಯನ್ನು ಕೊಡುವುದಕ್ಕಾಗಿ ನೌಕರಿಯನ್ನು ಹುಡುಕಲೇಬೇಕಾಯಿತು ಎಂಬುದರ ಮೀಮಾಂಸೆಯನ್ನು ಮಾಡಲು ನನಗೆ ವೇಳೆ ಬೇಕಾಗಲಿಲ್ಲ. ಈ ಮನುಷ್ಯರ ಅಡವಿಯಲ್ಲಿ

ಯಲ್ಲಿ ಅದೇಕೆ ಅವನು ಒಂದು ಮಾರ್ಗಕ್ಕೆ ಹತ್ತಿದ ಮತ್ತು ಅದೇಕೆ ಒಂದು ಮಾರ್ಗಕ್ಕೆ ಇನ್ನೂ ಹತ್ತಲಿಲ್ಲ ಎಂಬುದನ್ನು ನಾನು ಈ ದಿನ ಸ್ಪಷ್ಟವಾಗಿ ಅರಿತುಕೊಂಡೆ

ಈ ನಿರ್ಬಲ ಮನುಷ್ಯ ರಂಗೂನಿನ ರಾಜ ಮಾರ್ಗದಲ್ಲಿ ಹತ್ತೆಂಟು ಕಡೆ ಹರಿದ ಬಟ್ಟೆಗಳನ್ನು ಧರಿಸಿಕೊಂಡು ಈ ಎಲ್ಲ ವಸ್ತುಗಳ ದೊಡ್ಡ ಗಂಟೊಂದನ್ನು ಕೈಯಲ್ಲಿ ಹಿಡಿದುಕೊಂಡು ತನ್ನ ಮನೆಗೆ ಹೋಗುತ್ತಿದ್ದ-ಅವನ ತೃಪ್ತ ಮುಖದ ಕಡೆಗೆ ಮರೆಯಲ್ಲಿ ನಿಂತುಕೊಂಡು ನೋಡಿದೆ ತನ್ನ ಸ್ಥಿತಿಯ ಕಡೆಗೆ ನೋಡಿಕೊಳ್ಳುವಷ್ಟು ಅವನಿಗೆ ಅವಕಾಶವೇ ಇರಲಿಲ್ಲವೇನೊ! ಯಾವ ವಸ್ತುವಿನಿಂದ ಅವನ ಹೃದಯವು ಪರಿಪೂರ್ಣವಾಗಿದೆಯೊ ಆ ವಸ್ತುವಿನ ಎದುರು ಬಟ್ಟೆಬರೆಗಳ ಪ್ರಶ್ನೆ ಅತ್ಯಂತ ಹೀನವಾಗಿಹೋಗಿರುವುದು! ಆದರೆ ನಾನು ನನ್ನ ಬಟ್ಟೆಗಳು ಕಿಚಿಂತ್ತಾದರೂ ಹೊಲಸಾದರೆ ನಾಚಿಕೆಯಿಂದ ಬಳಲುತ್ತಿರುವೆ! ಅಪರಿಚಿತ ಮನುಷ್ಯನು ನನ್ನನ್ನು ನೋಡಿದ ಕೂಡಲೆ ನಾಚಿಕೆಯಿಂದ ನನಗೆ ಜೀವಹೋದಂತೆ ಆಗುವುದು.

ರೋಹಿಣಿ ಭೈಯಾ ಹೊರಟುಹೋದ—ನಾನು ಅವನನ್ನು ಕೂಗಲಿಲ್ಲ, ಅವನು ಕ್ಷಣಮಾತ್ರದಲ್ಲಿ ಜನಗಳ ಮಧ್ಯದಲ್ಲಿ ಲೀಲನಾಗಿಹೋದ ಏಕೆ? ನನಗೆ ತಿಳಿಯದು, ಈ ಬಾರಿ ನನ್ನ ನಯನಗಳು ನೀರುದುಂಬಿ ಒಂದುವು. ನನ್ನ ಸೆಲ್ಲೆಯ ಅಂಚಿನಿಂದ ಅವನ್ನು ಒರಿಸುತ್ತ ಮಾರ್ಗದ ದಂಡೆಗುಂಟ ಮೆಲ್ಲಗೆ ಹೆಜ್ಜೆಯಿಕ್ಕುತ್ತ ಮನೆಗೆ ಮರಳಿ ಬಂದೆ. ಮನದಲ್ಲಿಯೆ ಬಾರಿ-ಬಾರಿಗೂ ಎಂದುಕೊಳ್ಳತೊಡಗಿದೆ—ಈ ಪ್ರೇಮಕ್ಕಿಂತಲೂ ಹೆಚ್ಚಿನ ಶಕ್ತಿ, ಮತ್ತು ಈ ಪ್ರೇಮಕ್ಕಿಂತಲೂ ಶ್ರೇಷ್ಠನಾದ ಶಿಕ್ಷಕ ಪ್ರಪಂಚದಲ್ಲಿ ಬಹುಶಃ ಬೇರೊಬ್ಬ ಇರಲಿಕ್ಕಿಲ್ಲ! ಜಗತ್ತಿನಲ್ಲಿ ಇದರಿಂದ ಆಗದ ಕೆಲಸ ಯಾವುದೂ ಇರಲಿಕ್ಕಿಲ್ಲ!!

ಆದಾಗ್ಯೂ ಬಹಳ ದಿನಗಳಿಂದ ಏಕೆ, ಯುಗಗಳಿಂದ ನನ್ನಲ್ಲಿ ಸಂಚಿತವಾದ ಅಂಧಸಂಸ್ಕಾರ ನನ್ನ ಕಿವಿಗಳಲ್ಲಿ ಮೆಲ್ಲನೆ ಹೇಳ ತೊಡಗಿತು—ಇದು ಶುಭವಾದುದಿಲ್ಲ ಪ್ರವಿತ್ರವಿಲ್ಲ—ಕೊನೆಯ ವರೆಗೂ ಇದರ ಪರಿಣಾಮ ಚೆನ್ನಾಗಲಿಕ್ಕಿಲ್ಲ!

ಮನೆಯನ್ನು ಮುಟ್ಟುತ್ತಲೇ ಒಂದು ದೊಡ್ಡ ಪಾಕೀಟು ಸಿಕ್ಕಿತು. ತೆರೆದು ನೋಡಿದೆ—ನನ್ನ ನೌಕರಿಯ ಅರ್ಜಿ ಮಂಜೂರಾಗಿದ್ದಿತು. ಸಾಗವಾನಿ

ಕಟ್ಟೆಗೆಯ ಒಬ್ಬ ದೊಡ್ಡ ವ್ಯಾಪಾರಿಯು ಅನೇಕ ಜನಗಳಿಂದ ಅರ್ಜಿಗಳು ಬಂದಿದ್ದರೂ ಈ ಬಡವನ ಮೇಲೆ ಕರುಣೆತೋರಿರುವ, ಸಂತುಷ್ಟನಾಗಿರುವ. ದೇವರು ಅವನಿಗೆ ಕಲ್ಯಾಣಮಾಡಲಿ.

ನೌಕರಿ ಎಂಬ ವಸ್ತುವಿನ ಪರಿಚಯ ಈ ಮೊದಲು ನನಗಿರಲಿಲ್ಲ; ಅದನ್ನು ಪಡೆದಾಗ್ಯೂ ಬಹಳ ದಿವಸ ಉಳಿಯುವುದೊ ಇಲ್ಲವೊ ಎಂಬ ಸಂದೇಹವು ಮನದಲ್ಲಿ ಹುಟ್ಟಿತು. ಆದಾಗ್ಯೂ ನಾನು ನೌಕರಿಗೆ ಹೋದೆ. ನನ್ನ ಸಾಹೇಬರು,ದೇಶೀ'ಸಾಹೇಬರಲ್ಲ, ನಿಜವಾದ ಸಾಹೇಬರು—ಇಂಗ್ರೇಜಿ ಮನುಷ್ಯರು ಅವರು ಇಂಗ್ರೇಜಿಯವರು ಇದಾಗ್ಯೂ ಬಂಗಾಲಿ ಭಾಷೆಯನ್ನು ಚೆನ್ನಾಗಿ ಬಲ್ಲವರಿದ್ದರು. ಏಕೆಂದರೆ ಅವರು ಕಲಕತ್ತೆಯ ಆಫೀಸಿನಿಂದ ವರ್ಗವಾಗಿ ಬರ್ಮಾಕ್ಕೆ ಬಂದಿದ್ದರು.

ಎರಡುವಾರ ನೌಕರಿಯನ್ನು ಮಾಡಿದ ಬಳಿಕ ಅವರು ನನ್ನನ್ನು ಕರೆದು ಎಂದರು "ಶ್ರೀಕಾಂತಬಾಬೂ, ನೀವು ಈ ಮೇಜಿಗೆ ಬಂದು ಕೆಲಸಮಾಡಿರಿ, ಸಂಬಳವೂ ನಿಮಗೆ ಈಗ ಸಿಕ್ಕುವ ಸಂಬಳಕ್ಕಿಂತ ಸುಮಾರು ಎರಡುಪರೆಪಟ್ಟು ಹೆಚ್ಚು ಸಿಗುವುದು"

ನಾನು ಪ್ರಕಟವಾಗಿಯೂ ಮನದಲ್ಲೂ ಸಾಹೇಬರಿಗೆ ಲಕ್ಷಾಂತರ ಧನ್ಯವಾದ-ಆಶೀರ್ವಾದಗಳನ್ನು ಕೊಡುತ್ತ ಆ ಮುರುಕು ಮೇಜನ್ನು ತೊರೆದು, ಒಮ್ಮೆಗೆ ಹಸಿರು ಹೊದ್ದಿಕೆ ಹೊದಿಸಿದ ಸುಂದರ ಮೇಜಿಗೆ ಹೋಗಿ ನನ್ನ ಕೆಲಸ ಮಾಡಲು ಪ್ರಾರಂಭಿಸಿದೆ. ಮನುಷ್ಯನಿಗೆ ಕಲ್ಯಾಣವಾಗುವುದಿದ್ದರೆ ಹೀಗೆಯೆ ಆಗುತ್ತದೆ. ನಮ್ಮ ಹೋಟೆಲಿನ ಠಾಕುರದಾದಾನು ಎಳ್ಳಷ್ಟೂ ಸುಳ್ಳು ಹೇಳಿರಲಿಲ್ಲ.

ಒಂದು ಗಾಡಿಯನ್ನು ಬಾಡಿಗೆ ಹಿಡಿದು ಈ ಸಮಾಚಾರವನ್ನು ಅಭ-ಯಾಗೆ ತಿಳಿಸಲು ಹೋದೆ. ರೋಹಿಣಿ ಭೈಯಾ ಆಫೀಸಿನಿಂದ ಬಂದು ಅಲ್ಪ ಆಹಾರಕ್ಕೆ ಕುಳಿತಿದ್ದ. ಆದರೆ ಈ ದಿನ ಅವನು ಕೇವಲ ನೀರು ಕುಡಿದು ತನ್ನ ಹಸಿವನ್ನು ಹಿಂಗಿಸಿಕೊಳ್ಳುತ್ತಿರಲಿಲ್ಲವೆಂಬುದನ್ನು ನೋಡಿದೆ. ಆದರೆ, ಈ ದಿನ ಅವನು ತನ್ನ ಹಸಿವನ್ನು ಹಿಂಗಿಸುತ್ತಿರುವ ರೀತಿಯನ್ನು ನೋಡಿ ಪ್ರಪಂಚವು ಅಡ್ಡಿ ಮಾಡಬಹುದು, ಆದರೆ ನಾನು ಮಾತ್ರ ಮಾಡಲಾರೆ. ಆದುದರಿಂದ ಅಭಯಾ ನನಗಾಗಿಯೂ ಈ ದಿನ ಅಡುಗೆ ಮಾಡುವೆನೆಂದು

ಹೇಳಿದಳು, ಆದಕ್ಕೆ ನಾನು ಬೇಡವೆಂದು ಹೇಳಲಿಲ್ಲ. ಊಟವಾದಕೂಡಲೆ ರೋಹಿಣಿ ಭೈಯಾ ಕೋಟನ್ನು ಧರಿಸತೊಡಗಿದ. ಅಭಯಾ ದುಃಖಮಿಶ್ರಿತ ದನಿಯಲ್ಲಿ "ರೋಹಿಣಿಭೈಯಾ, ಈ ಕ್ಷೀಣಕಾಯವನ್ನು ಇಷ್ಟು ದುಡಿಸಬೇಡ ಎಂದು ನಾನು ನಿನಗೆ ಎಷ್ಟು ಹೇಳಿದರೂ ನೀನು ಕೇಳುವುದೇ ಇಲ್ಲವಲ್ಲ ? ಒಳ್ಳೇದು, ಹೆಚ್ಚು ರೂಪಾಯಿಗಳನ್ನು ತೆಗೆದುಕೊಂಡು ನಾವೇನು ಮಾಡಬೇಕಾಗಿದೆ? ಈಗ ನಮ್ಮ ದಿನಗಳು ಚೆನ್ನಾಗಿ ಕಳೆಯುತ್ತಿರುವುವು" ಎಂದಳು.

ರೋಹಿಣಿ ಭೈಯಾನ ನಯನಗಳಿಂದ ಸ್ನೇಹವು ಝರಿಯಂತೆ ಜುಳು ಜುಳು ಹರಿಯತೊಡಗಿತು. ಅವನು ಸ್ವಲ್ಪ ನಕ್ಕು "ಒಳ್ಳೇದು, ನೀನು ಹೇಳುವುದು ಸರಿ ಒಬ್ಬ ಅಡುಗೆಯವನನ್ನು ಇಡಲಾರದವನಾಗಿರುವೆ. ನೀನಂತೂ ಎರಡೂ ಹೊತ್ತು ಒಲೆಯ ಮುಂದೆ ಕುಳಿತುಕೊಂಡು ದೇಹವನ್ನು ಎಷ್ಟು ಒಣಗಿಸಿಕೊಂಡಿರುವೆ ನೋಡು" ಎಂದು ಎಲೆ ಅಡಿಕೆಯನ್ನು ತಿಂದು ದೊಡ್ಡ ದೊಡ್ಡ ಹೆಜ್ಜೆಯಿಕ್ಕುತ್ತ ಹೊರಗೆ ಹೋಗಿಬಿಟ್ಟ.

ಅಭಯಾ ಒಂದು ಕಿರಿಯುಸಿರನ್ನು ಹತ್ತಿಕ್ಕಿ, ಸ್ವಲ್ಪ ನಕ್ಕು "ನೋಡಿರಿ ಶ್ರೀಕಾಂತ ಬಾಬೂ, ಇವನ ಅನ್ಯಾಯ! ದಿನವೆಲ್ಲ ಮೈತುಂಬ ದುಡಿದು ಬಂದು ಸ್ವಲ್ಪಾದರೂ ವಿಶ್ರಾಂತಿಯನ್ನು ತೆಗೆದುಕೊಳ್ಳುವುದಿಲ್ಲ. ಈಗ ರಾತ್ರಿ ಒಂಬತ್ತರ ವರೆಗೆ ಹುಡುಗರಿಗೆ ಟ್ಯೂಶನ್ ಹೇಳಲು ಹೋಗಿರುವ. ನಾನೆಷ್ಟು ಹೇಳಿದರೂ ಕೇಳುವುದೇ ಇಲ್ಲ. ಇಬ್ಬರಿಗಾಗಿ ಅಡುಗೆಯವನನ್ನು ಇಟ್ಟುಕೊಳ್ಳುವ ಅಗತ್ಯವಾದರೂ ಏನಿದೆ ಹೇಳಿರಿ? ಇದೆಲ್ಲವೂ ಅವನ ಬಲಾತ್ಕಾರವಲ್ಲವೆ?" ಎಂದು ಮತ್ತೊಂದು ಬದಿಗೆ ತನ್ನ ಕಣ್ಣುಗಳನ್ನು ತಿರುಗಿಸಿದಳು.

ನಾನು ಮೆಲ್ಲಗೆ ಸ್ವಲ್ಪ ನಕ್ಕೆ. 'ಸರಿ' ಅಥವಾ 'ಸರಿಯಲ್ಲ' ಎಂದು ಉತ್ತರವೀಯುವುದು ನನ್ನಿಂದಾಗಲಿಲ್ಲ. ನನ್ನ ವಿಧಾತನಾದರೂ ಉತ್ತರವೀಯಬಲ್ಲನೆಂಬುದರಲ್ಲಿ ನನಗೆ ಸಂದೇಹವೇ.

ಅಭಯಾ ಎದ್ದು ಹೋದಳು ಮತ್ತು ಒಂದು ಪತ್ರವನ್ನು ತಂದು ನನ್ನ ಕೈಗೆ ಕೊಟ್ಟಳು. ಕೆಲವು ದಿನಗಳ ಹಿಂದೆ ಅದು ಬರ್ಮಾ ರೇಲ್ವೆ ಕಂಪನಿಯಿಂದ ಬಂದಿತ್ತು. ಹಿರಿಯ ಸಾಹೇಬರು ದುಃಖವನ್ನು ಪ್ರಕಟಿಸುತ್ತ ಬರೆದಿದ್ದರು.

ಅಭಯಾಳ ಗಂಡನು ಒಂದು ದೊಡ್ಡ ಅಪರಾಧವನ್ನು ಮಾಡಿದ್ದಕ್ಕಾಗಿ ಎರಡು ವರ್ಷಗಳ ಮೊದಲೇ ನೌಕರಿಯಿಂದ ತೆಗೆಯಲ್ಪಟ್ಟಿದ್ದಾನೆ ಆ ದಿನದಿಂದ ಅವನು ಎಲ್ಲಿಗೆ ಹೋಗಿರುವರೋ ತಿಳಿಯದು.

ನಾವಿಬ್ಬರೂ ಬಹಳ ಹೊತ್ತಿನ ವರೆಗೆ ಸಿಡಿಲು ಬಡಿದಂತಾಗಿ ಕುಳಿತಿದ್ದೆವು. ಕೊನೆಗೆ ಅಭಯಾನೇ ಶಾಂತಿಯನ್ನು ಭಂಗಮಾಡಿ—"ಈಗ ನೀವೇನು ಸಲಹೆ ಕೊಡುವಿರಿ?" ಎಂದು ಕೇಳಿದಳು.

ನಾನು ಮೆಲ್ಲಗೆ "ನಾನೇನು ಸಲಹೆ ಕೊಡಲಿ?' ಎಂದೆ

ಅಭಯಾ ತಲೆಯಲ್ಲಾಡಿಸಿ "ಉಹುಂ, ಇಂತಹ ಪರಿಸ್ಥಿತಿಯಲ್ಲಿ ನೀವೇ ನನ್ನ ಕರ್ತವ್ಯವನ್ನು ತಿಳಿಸಿಕೊಡಬೇಕು. ಈ ಪತ್ರವು ಮುಟ್ಟಿದ ಮೇಲೆ ನಾನು ಬಹಳ ಆಸೆಯಿಂದ ನಿಮ್ಮ ದಾರಿ ಕಾಯುತ್ತಿದ್ದೆ." ಎಂದಳು

ನಾನು ಮನದಲ್ಲಿಯೆ ಎಂದು ಕೊಂಡೆ— ಬಹಳ ಒಳ್ಳೇದು! ನನ್ನ ಅಭಿಪ್ರಾಯವನ್ನು ಕೇಳಿಯೆ ಮನೆಯನ್ನು ಬಿಟ್ಟು ಹೊರಟಿದ್ದಯಲ್ಲವೆ? ನನ್ನದೇ ಅಭಿಪ್ರಾಯವನ್ನು ಕೇಳಬೇಕೆಂದು ಅಲ್ಲಿಯೆ ಸಂಕಲ್ಪಿಸಿಕೊಂಡು ಹೊರಟಿದ್ದೆಯೇನು?

ಬಹಳ ಹೊತ್ತು ಸುಮ್ಮಗಿದ್ದು "ತಿರುಗಿ ಊರಿಗೆ ಹೋಗುವುದು ಒಳ್ಳೆಯದು, ನಿಮ್ಮ ಅಭಿಪ್ರಾಯ ಹೇಗೆ ಇದೆ ಹೇಳಿ?" ಎಂದೆ

"ನನ್ನದೇನೂ ಇಲ್ಲ, ನೀವು ಹೇಳಿದರೆ ಹೋಗುವೆ, ಆದರೆ ಅಲ್ಲಿ ನನ್ನವರೆನ್ನುವವರು ಯಾರೂ ಇಲ್ಲ"

"ರೋಹಿಣಿ ಬಾಬೂ ಏನೆನ್ನುವನು?"

"ಹಿಂತಿರುಗಿ ಹೋಗುವಂತಿಲ್ಲ. ಕನಿಷ್ಟ ಹತ್ತು ವರ್ಷಗಳ ವರೆಗೆ ಊರಿಗೆ ಮುಖವನ್ನು ತೋರಿಸುವುದಿಲ್ಲವೆಂದು ಹೇಳುವ"

ಬಹಳ ಹೊತ್ತು ನಾನು ಸುಮ್ಮನಿದ್ದು "ಅಲ್ಲಿಯ ವರೆಗೂ ನಿಮ್ಮ ಭಾರವನ್ನು ಅವನು ಹೊತ್ತುಕೊಂಡಿರುವನೆ?" ಎಂದು ಕೇಳಿದೆ.

"ಅನ್ಯರ ಮನದೊಳಗಿನ ಮಾತನ್ನು ಹೇಗೆ ಹೇಳಲಿ, ಹೇಳಿರಿ? ಅಲ್ಲದೆ, ಅವನಾದರೂ ಹೇಗೆ ತಿಳಿದುಕೊಳ್ಳಬಲ್ಲ" ಎಂದು ಕ್ಷಣಹೊತ್ತು ಸುಮ್ಮಗಿದ್ದಳು ಅಭಯಾ ಬಳಿಕ "ಇನ್ನೊಂದು ಮಾತಿದೆ. ನನ್ನ ಬಗ್ಗೆ ಅವರು

ಎಳ್ಳಷ್ಟೂ ಆವನು ಹೊಣೆಗಾರನಿಲ್ಲ. ದೋಷವೆಂದು ಹೇಳಿರಿ, ತಪ್ಪು ಎಂದು ಹೇಳಿರಿ, ಏನೆಂದಾದರೂ ಹೇಳಿ, ಎಲ್ಲವೂ ನನ್ನದೇ " ಎಂದಳು

ಗಾಡಿಯವನು ಹೊರಗಿನಿಂದ " ಬಾಬೂ, ಇನ್ನೂ ಎಷ್ಟು ಹೊತ್ತು ಬೇಕ?" ಎಂದ

ನನ್ನ ಜೀವ ಉಳಿದಂತಾಯಿತು ಈ ಧರ್ಮ—ಸಂಕಟದೊಳಗಿಂದ ಪಾರಾಗಲು ನನಗೆ ಮಾರ್ಗವೇ ಕಾಣುತ್ತಿರಲಿಲ್ಲ ಅಭಯಾ ಅಪಾರಸಾಗರದಲ್ಲಿ ಬಿದ್ದು ಮುಳುಗೇಳುತ್ತಿದ್ದಾಳೆಂಬ ವಿಷಯದ ಮೇಲೆ ವಿಶ್ವಾಸವಿಡಲು ನನ್ನ ಮನಸ್ಸು ಒಪ್ಪುತ್ತಿರಲಿಲ್ಲವೆಂಬುದು ನಿಜ ಆದಾಗ್ಯೂ, ನಾನು ಸ್ತ್ರೀಯರ ಈ ಬಗೆಯ ಅನೇಕ ತಿರುವುಮುರುವಿನ ಅವಸ್ಥೆಗಳನ್ನು ನೋಡಿದ್ದೇನೆ; ಈಗ ನನಗುಂಟಾದ ಅನುಭವದಿಂದ ನಾನು ಹೀಗೆ ಹೇಳಬಲ್ಲೆ—ಹೊರಗಿನಿಂದ ನೋಡಿ ಈ ಕಣ್ಣುಗಳ ಮೇಲೆ ವಿಶ್ವಾಸವಿಡುವುದು ಎಷ್ಟು ದೊಡ್ಡ ಅನ್ಯಾಯವಿರುವುದು ಎಂಬುದನ್ನು ನಾನು ನಿಸ್ಸಂದಿಗ್ಧವಾಗಿ ತಿಳಿದುಕೊಂಡಿದ್ದೇನೆ.

ಗಾಡಿಯವನು ಮತ್ತೊಮ್ಮೆ ಕೂಗಿದ ಕೂಡಲೆ ನಾನು ಕ್ಷಣಮಾತ್ರವಾದರೂ ವಿಲಂಬಮಾಡದೆ ಎದ್ದು ನಿಂತು " ನಾನು ಇನ್ನೊಂದು ದಿನ ಬೇಗ ಬರುವೆ " ಎಂದು ಭರದಿಂದ ಹೊರಗೆ ಹೋಗಿಬಿಟ್ಟೆ ಅಭಯಾ ಮತ್ತೇನನ್ನೂ ಹೇಳಲಿಲ್ಲ, ಕೇಳಲಿಲ್ಲ ನಿಶ್ಚಲ ಮೂರ್ತಿಯಂತೆ ಭೂಮಿಯ ಕಡೆಗೆ ನೋಡುತ್ತ ನಿಂತುಬಿಟ್ಟಳು.

೮

ಗಾಡಿಯಲ್ಲಿ ಕುಳಿತುಕೊಳ್ಳುತ್ತಲೇ ಅದು ಹೊರಟಿತು ಐದು ಮಾರು ಹೋಗಿರಬಹುದು, ಛಡಿಯನ್ನು ಮರೆತುಬಂದುದು ನೆನಪಿಗೆ ಬಂದಿತು ಕೂಡಲೆ ಗಾಡಿಯನ್ನು ನಿಲ್ಲಿಸಿ ಮನೆಯಲ್ಲಿ ಹೊಕ್ಕೆ ಬಾಗಿಲೆದುರಿಗೇ ಅಭಯಾ ಮುಖ ಕೆಳಗೆ ಮಾಡಿಕೊಂಡು ಬಿದ್ದಿದ್ದಳು ಬಾಣದಿಂದ ಹೊಡೆಯಲ್ಪಟ್ಟ ಪಶುವಿನಂತೆ ಅವ್ಯಕ್ತ ವೇದನೆಯಿಂದ ಬಳಲುತ್ತ ಬಿದ್ದಿದ್ದಳು. ಏನೆಂದು ಆಕೆಗೆ ಸಮಾಧಾನ ಹೇಳಲಿ? ಸಮಾಧಾನದ ಮಾತುಗಳು ನನ್ನ ಬುದ್ಧಿಯ ಎಲ್ಲೆಯಾಚೆ ಇದ್ದುವು. ವಜ್ರಾಘಾತವಾದವನಂತೆ ಸ್ವಲ್ಪ ಹೊತ್ತು ದಿಗ್ಭ್ರಮೆಗೊಂಡು ನಿಂತೆ. ಬಳಿಕ ಹಾಗೆಯೇ ಹಿಂತಿರುಗಿದೆ ಅಭಯಾ ಅಳುತ್ತಿದ್ದಳು. ಮೊಗಲಿನಂತೆಯೆ ಆಕೆಯ ಈ ಮೌನ ಸೀಮಾತೀತ ವೇದನೆಗೆ ಒಬ್ಬ ಮೌನ

ಸಾಕ್ಷೀದಾರ ಈ ಜಗತ್ತಿನಲ್ಲಿ ಇರುವ ಎಂಬುದು ಆಕೆಗೆ ಗೊತ್ತಾಗದೆ ಹೋಯಿತು.

ರಾಜಲಕ್ಷ್ಮಿಯು ಕಾಗದವನ್ನು ಬರೆಯಲು ಆಗ್ರಹ ಮಾಡಿದ್ದಳು. ಅದನ್ನು ನಾನು ಮರೆತಿರಲಿಲ್ಲ, ಪಾಟನಾಕ್ಕೆ ಪತ್ರವನ್ನು ಬರೆಯಬೇಕೆಂದು ನಾನು ವಿಚಾರ ಮಾಡಿದ್ದೆ. ಪತ್ರ ಬರೆಯುವುದೂ ಪ್ರಪಂಚದ ಕಠಿಣ ಕೆಲಸಗಳಲ್ಲಿ ಒಂದು ಎಂದು ನನಗೆ ತೋರುವುದು ಮೇಲಾಗಿ ನಾನು ಬರೆಯುವುದಾದರೂ ಏನು? ಆದರೆ ಅಭಯಾಳ ಅಳುವು ನನ್ನ ಹೃದಯದಲ್ಲಿ ತುಂಬಿಕೊಂಡು ಭಾರವಾಗುತ್ತ ನಡೆದಿತ್ತು. ಅದನ್ನು ಹೊರಗೆ ಹಾಕದಿದ್ದರೆ ನಾನು ಬದುಕಲಿಕ್ಕಿಲ್ಲ ಎಂದು ಎನಿಸತೊಡಗಿತು ಆದುದರಿಂದ ಮನೆಗೆ ಬಂದೊಡನೆಯೆ ಲೇಖನ ಸಾಮಗ್ರಿಯನ್ನು ಸಂಗ್ರಹಿಸಿ ಬಾಯೀಗೆ ಪತ್ರ ಬರೆಯಲು ಕುಳಿತೆ. ಆಕೆಯನ್ನು ಬಿಟ್ಟರೆ ನನ್ನ ದುಃಖದಲ್ಲಿ ಭಾಗಿಯಾಗುವವರು ಯಾರಿರುವರು? ಎರಡುಮೂರು ಗಂಟೆಗಳ ಕಾಲ ಈ 'ಸಾಹಿತ್ಯ ಚರ್ಚೆ' ಯನ್ನು ಮುಗಿಸಿ ನಾನು ಲೆಕ್ಕಣಿಕೆಯನ್ನು ಕೆಳಗಿಟ್ಟಾಗ ರಾತ್ರಿ ಹನ್ನೆರಡು ಬಾರಿಸಿತ್ತು. ಬೆಳಿಗ್ಗೆ ಆ ಕಾಗದವನ್ನು ಟಪಾಲು ಪೆಟ್ಟಿಗೆಯಲ್ಲಿ ಹಾಕಲು ನಾಚಿಕೆ ಬಂದೀತೆಂದು ಬಗೆದು ಪ್ರಕೃತಿ ಸ್ವಲ್ಪ ಬಿಸಿಯಾಗಿರುವಾಗಲೇ ಅದನ್ನು ಟಪಾಲು ಪೆಟ್ಟಿಗೆಯಲ್ಲಿ ಹಾಕಿಬಿಟ್ಟೆ

ಒಬ್ಬ ಕುಲೀನ ಹೆಂಗುಸಿನ ದಾರುಣ ದುಃಖದ ಗುಪ್ತ ಇತಿಹಾಸವನ್ನು ಮತ್ತೊಬ್ಬ ಪರಕೀಯ ನಾರಿಗೆ ತಿಳಿಸುವುದು ಒಳ್ಳೆಯದೊ ಕೆಟ್ಟದೊ ನನಗೆ ತಿಳಿಯದು. ಆದರೆ, ಅಭಯಾಳ ಈ ಪರಮ ಮತ್ತು ಚರಮ ಸಂಕಟ ಸಮಯದಲ್ಲಿ ಪ್ಯಾರೀಬಾಯಿಯ ಮರ್ಮಾಘಾತಕ ತೃಷ್ಣೆಯನ್ನು ಹತ್ತಿಕ್ಕಿದ್ದ ರಾಜಲಕ್ಷ್ಮಿಯು ಈ ಅಭಯಾಳಿಗೆ ಯಾವ ಸತ್ಸಲಹೆಯನ್ನು ಕೊಡುವಳೊ ಎಂಬುದನ್ನು ತಿಳಿದುಕೊಳ್ಳಬೇಕೆಂಬ ಆಕಾಂಕ್ಷೆಯು ನನ್ನನ್ನು ಪರವಶಮಾಡಿಬಿಟ್ಟಿತು. ಆದರೆ, ಈ ವಿಷಯವನ್ನು ನಾನು ಸಾಧಕ ಬಾಧಕ ಕಾರಣಗಳಿಂದ ಒಮ್ಮೆಯೂ ವಿಚಾರಮಾಡಲಿಲ್ಲವೆಂಬುದು ಒಂದು ಆಶ್ಚರ್ಯದ ಸಂಗತಿ ನನಗೆ, ಅಭಯಾಳ ಪತಿಯು ಪತ್ತೆ ಹತ್ತದೆ ಇರುವದೊಂದು ಪ್ರಶ್ನೆಯೂ ನನ್ನ ಮನದಲ್ಲಿ ಬಾರಿಬಾರಿಗೂ ಏಳುತ್ತಿದ್ದಿತು. ಪತ್ತೆ ಹತ್ತಿದ ಬಳಿಕ ಈ ಪ್ರಶ್ನೆಯು ಇನ್ನೂ ಜಟಿಲವಾಗಬಹುದು ಎಂಬ ಚಿಂತೆಯು ಒಂದು ಸಲವೂ ಮನದಲ್ಲಿ ಏಳಲಿಲ್ಲ ಈ ಬಗೆಯ ಸಮಸ್ಯೆಗಳನ್ನು ಬಿಡಿಸುವ

ಭಾರವನ್ನು ದೇವರು ನನ್ನ ಮೇಲೆಯೆ ಹೊರಿಸಿರುವನೆಂಬುದನ್ನು ಯಾರು ಯೋಚಿಸಿದ್ದರು!

ಮೂರುನಾಲ್ಕು ದಿನಗಳ ನಂತರ ನನ್ನ ಒಬ್ಬ ಬರ್ಮೀ ಕಾರಕೂನ ನನ್ನ ಮೇಜಿನ ಮೇಲೆ ಒಂದು ಫಾಯಲನ್ನು ಇಟ್ಟು ಹೋದ. ಅದರ ಮೇಲೆ ಹಿರಿಯ ಸಾಹೇಬರು ನೀಲೀ ಪೆನ್ಸಿಲಿನಿಂದ ಬರೆದ ಒಂದು 'ನೋಟ್' ಇದ್ದಿತು. ಅವರು ನನಗೆ ಈ 'ಕೇಸ್' ತೀರ್ಮಾನ ಮಾಡಲು ಅಪ್ಪಣೆ ಕೊಟ್ಟಿದ್ದರು. ದಾವೆಯನ್ನು ಮೊದಲಿಂದ ಕೊನೆಯ ವರೆಗೆ ಓದಿ ನಾನು ದಿಙ್ಮೂಢನಾದೆ. ಕೇಸಿನ ವಿಷಯ ಸಂಕ್ಷೇಪದಲ್ಲಿ ಈ ರೀತಿ ಇದ್ದಿತು— ನಮ್ಮ ಪ್ರೋಮ ಕಚೇರಿಯ ಒಬ್ಬ ಕಾರಕೂನನನ್ನು ಅಲ್ಲಿಯ ಇಂಗ್ರೇಜಿ ಅಧಿಕಾರಿಯೊಬ್ಬರು ಕಟ್ಟಿಗೆಯನ್ನು ಕಳವುಮಾಡಿದುದಕ್ಕಾಗಿ ಕೆಲಸದಿಂದ ತಳ್ಳಿ ಹಾಕಿದ ಬಗ್ಗೆ ವರದಿಯನ್ನು ಕಳಿಸಿದ್ದರು. ಕಾರಕೂನನ ಹೆಸರನ್ನು ಓದಿದ ಕೂಡಲೆ ಇವನೇ ನಮ್ಮ ಅಭಯಾನ ಗಂಡನೆಂದು ತಿಳಿದುಬಂದಿತು. ಅವನೂ ಮೂರು ನಾಲ್ಕು ಪುಟಗಳಷ್ಟು ತನ್ನ ಹೇಳಿಕೆಯನ್ನು ಬರೆದು ಕಳುಹಿದ್ದ ಬರ್ಮಾ ರೇಲ್ವೆ ಕಂಪನಿಯಲ್ಲಿಯೂ ಯಾವುದಾದರೊಂದು ಗಂಭೀರ ಅಪರಾಧವನ್ನು ಮಾಡಿದ್ದರಿಂದಲೇ ಕೆಲಸದಿಂದ ಈ ವ್ಯಕ್ತಿಯನ್ನು ತಳ್ಳಿಹಾಕಿರಬಹುದೆಂಬುದನ್ನು ಊಹಿಸಲು ನನಗೆ ವೇಳೆ ಬೇಕಾಗಲಿಲ್ಲ.

ಸ್ವಲ್ಪ ಹೊತ್ತಿನಲ್ಲಿಯೆ ಆ ಕಾರಕೂನ ಹಿಂತಿರುಗಿ ಬಂದು 'ಒಬ್ಬ ಸದ್ಗೃಹಸ್ಥರು ತಮ್ಮನ್ನು ಕಾಣಬಯಸುವರು' ಎಂದು ಹೇಳಿದ. ಅದಕ್ಕಾಗಿ ನಾನು ಸಿದ್ಧನೇ ಇದ್ದೆ. ಅವನು ಪ್ರೋಮದಿಂದ ತನ್ನ ಮನವಿಯನ್ನು ಹೇಳಲು ಬರುವನೆಂದು ನಾನು ನಿಶ್ಚಯವಾಗಿ ತಿಳಿದಿದ್ದೆ. ಅವನು ಸ್ವಲ್ಪ ಹೊತ್ತಿನ ಬಳಿಕ ನನಗೆ ದರ್ಶನವಿತ್ತು, ಆಗ ಅವನೇ ಅಭಯಾನ ಪತಿಯೆಂದು ತಿಳಿದುಕೊಂಡುಬಿಟ್ಟೆ. ಅವನನ್ನು ನೋಡಿದೊಡನೆ ನನ್ನ ಮೈಯೆಲ್ಲ ತಿರಸ್ಕಾರದಿಂದ ಉರಿಯತೊಡಗಿತು. ಅವನು ಬೂಟು-ಸೂಟು-ಹ್ಯಾಟು-ಧರಿಸಿದ್ದ. ಅವು ಹಳೆಯವಿದ್ದಷ್ಟೇ ಹೊಲಸೂ ಇದ್ದುವು. ಮುಖವು ಮೀಸೆ ಮತ್ತು ಗಡ್ಡದಿಂದ ಮುಚ್ಚಿತ್ತು. ಕೆಳದುಟಿ ಒಂದೂವರೆ ಇಂಚು ದಪ್ಪವಿತ್ತು. ಬಣ್ಣ ಅವನದು ಕಪ್ಪು. ಆ ಮುಖದ ಆ ತುಟಿಯ ಎರಡೂ ಮಗ್ಗಲಲ್ಲಿ ತಾಂಬೂಲ ರಸ ಹತ್ತಿದ್ದಿತು. ಅವನು ಮಾತನಾಡುವಾಗ ತಾಂಬೂಲರಸದ ಹನಿಗಳು ಎಲ್ಲಿ ಸಿಡಿಯುವುವೊ ಎಂದು ಎನಿಸುತ್ತಿದ್ದಿತು.

ಗಂಡನು ಹೆಂಡತಿಯ ದೇವರು ಎಂಬುದನ್ನು ನಾನು ಬಲ್ಲೆ. ಅವನೇ ಆಕೆಯ ಇಹಲೋಕ, ಪರಲೋಕ. ಆದರೆ ಈ ಮನುಷ್ಯನ ನೀಚತನದ ಕೂಡ ಅಭಯಾಳನ್ನು ಹೋಲಿಸಿ ನೋಡಲು ನನಗೆ ತೀರ ಕೆಡುಕೆನಿಸಿತು. ಅಭಯಾ ಯಾರೇ ಇರಲಿ, ಒರ್ವ ಸುಂದರ ದೇಹದ, ಸುರುಚಿ ಸಂಪನ್ನ ಕುಲೀನ ಮಹಿಳೆ ಇವನು ಒಬ್ಬ ಶುದ್ಧ ಕಾಡುಕೋಣ, ಇದೇ ಈಗ ಬರ್ಮಾದ ಅಡವಿಯೊಳಗಿಂದ ಹೊರಬಿದ್ದು ಬಂದಿರುವ ಯಾವ ಬ್ರಹ್ಮದೇವನು ಇವನನ್ನು ನಿರ್ಮಿಸಿದನೋ !

ನಾನು ಅವನಿಗೆ ಕುಳಿತುಕೊಳ್ಳಲು ಹೇಳಿ 'ನಿಮ್ಮ ವಿರುದ್ಧ ಕೊಟ್ಟ ಹೇಳಿಕೆಯು, ನಿಮ್ಮ ಮೇಲೆ ಹೊರಿಸಿದ ಅಪರಾಧವು ನಿಜವಿರುವದೇನು ?' ಎಂದು ಕೇಳಿದೆ ಅವನು ಇದಕ್ಕೆ ಉತ್ತರವಾಗಿ ಹತ್ತು ನಿಮಿಷಗಳ ವರೆಗೆ ತುದಿಮೊದಲಿಲ್ಲದ ಮಾತುಗಳನ್ನಾಡಿದ ಅವನ ಮಾತಿನ ಭಾವಾರ್ಥ ಇಷ್ಟೇ ಇದ್ದಿತು—ನಾನು ನಿರ್ದೋಷಿ ನಾನು ಆಫೀಸಿನಲ್ಲಿ ಇರುವಾಗ ಪ್ರೋಮ್‌ನ ಆಫೀಸಿನ ಸಾಹೇಬ ಎರಡೂ ಕೈಯಿಂದ ಲೂಟಿಮಾಡುತ್ತಲಿದ್ದಾರ ನನ್ನನ್ನು ತೆಗೆದು ಹಾಕಲು ಇದೇ ಕಾರಣ ಯಾವುದಾದರೂ ಒಂದು ಕಾರಣದಿಂದ ನನ್ನನ್ನು ತೆಗೆದುಹಾಕಿ ತನ್ನ ಮನುಷ್ಯನೊಬ್ಬನನು ನೇಮಿಸಿಕೊಳ್ಳಬೇಕೆಂದು ಮಾಡಿದ್ದ ಆದರಂತೆ ಮಾಡಿರುವ ನನಗೆ ಅವನ ಮಾತಿನ ಮೇಲೆ ಎಳ್ಳಷ್ಟೂ ವಿಶ್ವಾಸವಿಲ್ಲ ನಾನೆಂದೆ "ನಿಮ್ಮ ನೌಕರಿಯು ಹೋದರೆ, ನಿಮ್ಮಂತಹ ಬುದ್ಧಿವಂತರಿಗೆ ಬರ್ಮಾದಲ್ಲಿ ಚಿಂತೆಮಾಡುವ ಕಾರಣವಿಲ್ಲ ರೇಲ್ವೆದಲ್ಲಿ ನೌಕರಿಯು ಹೋದ ಮೇಲೆ ನಿಮಗೆಷ್ಟು ದಿವಸ ನಿರುದ್ಯೋಗಿಯಾಗಿ ಕುಳಿತುಕೊಳ್ಳಬೇಕಾಗಿತ್ತು ?'

ಅವನು ಸ್ವಲ್ಪ ಬೆಚ್ಚಿದ; ಬಳಿಕ ಹೀಗೆ ನುಡಿದ "ನೀವು ಹೇಳುವುದು ಸುಳ್ಳೇನೂ ಅಲ್ಲ ಆದರೆ, ಮಹಾಶಯರೆ, ನಾನು ಕುಟುಂಬವುಳ್ಳ ಮನುಷ್ಯ ಎಂಬುದನ್ನು ನೀವು ಬಲ್ಲಿರಿ. ನನಗೆ ಮಕ್ಕಳೂ ಮರಿಗಳೂ—"

"ನೀವು ಬರ್ಮೀ ಸ್ತ್ರೀಯೊಡನೆ ಮದುವೆ ಮಾಡಿಕೊಂಡಿದ್ದೀರಾ?"

"ಸಾಹೇಬ ರಿಪೋರ್ಟಿನಲ್ಲಿ ಬರೆದುಬಿಟ್ಟಿರುವನೇನು ? ಇದರಿಂದಲೇ ನಿಮಗೆ ಅವನ ಕೋಪದ ಕಾರಣ ಗೊತ್ತಾಗಬಹುದು.' ಹೀಗೆಂದು ಅವನು

ನನ್ನ ಮುಖದ ಕಡೆಗೆ ನೋಡಿ ಸ್ವಲ್ಪ ಮೆತ್ತಗಾಗಿ, ಮತ್ತೆ "ನೀವು ಈ ಮಾತಿನ ಮೇಲೆ ವಿಶ್ವಾಸವಿಡುವಿರಾ?" ಎಂದು ನುಡಿದ

ನಾನು ತಲೆಯಲ್ಲಾಡಿಸಿ "ಇದರಲ್ಲಿ ದೋಷವೇನಿದೆ?" ಎಂದೆ.

ಅವನು ಉತ್ಸಾಹಗೊಂಡು "ನೀವು ಹೇಳುವುದು ಸರಿ ಮಹಾಶಯರೆ, ನಾನು ಮಾಡಬೇಕಾದುದನ್ನು ಧೈರ್ಯವಾಗಿ ಮಾಡುವೆನೆಂದು ಎಲ್ಲರಿಗೂ ಹೇಳುವೆನು. ನಾನು ಒಳಗೊಂದು ಹೊರಗೊಂದು ಇಲ್ಲ. ನಾನು ಗಂಡಸು—ತಾವು ಬಲ್ಲಿರಷ್ಟೆ? ಮಾಡಿದುದನ್ನು ಸ್ಪಷ್ಟವಾಗಿ ಹೇಳುವೆ ಇದರಲ್ಲಿ ಮುಚ್ಚು ಮರೆಯೇನಿದೆ? ನನ್ನ ದೇಶದಲ್ಲಿ ನನ್ನಾಕೆ ಯಾರೂ ಇಲ್ಲ—ಇಲ್ಲಿಯೇ ಚಿರಕಾಲವಿದ್ದು ನೌಕರಿಯನ್ನು ಮಾಡಿ ಹೊಟ್ಟೆ ತುಂಬಿಕೊಳ್ಳುವುದು ಇದೆ ಎಂದ ಬಳಿಕ—ಮಹಾಶಯರೆ, ತಮಗೆ ಗೊತ್ತೇ ಇದೆ." ಎಂದ

ನಾನು ತಲೆಯಲ್ಲಾಡಿಸಿ "ನಾನೆಲ್ಲವನ್ನೂ ಬಲ್ಲೆ" ಎಂದು, ಪುನಃ ವಿಚಾರಿಸಿದೆ "ನಿಮಗೆ ದೇಶದಲ್ಲಿ ಯಾರೂ ಇಲ್ಲವೆ?"

ಅವನು ಮುಖದ ಮೇಲೆ ಯಾವ ಭಾವವನ್ನೂ ತೋರಗೊಡದೆ "ಇಲ್ಲ, ಎಲ್ಲಿಯೂ ಯಾರೂ ಇಲ್ಲ—'ಶಾಕಲ್ಯ ಪರಿವೇದನಾ' ಯಾರಾದರೂ ಇದ್ದಿದ್ದರೆ ನಾನು ಈ ಸೂರ್ಯಮಾಮಾನ ದೇಶಕ್ಕೆ ಬರುತ್ತಿದ್ದೆನೆ? ಮಹಾಶಯರೆ, ನಾನು ಹೇಳಿದರೆ ನಿಮಗೆ ವಿಶ್ವಾಸವಾಗಲಿಕ್ಕಿಲ್ಲ, ನಾನು ಅಂತಿಂತಹರ ಮಗನಲ್ಲ. ನಾವೂ ಜಮೀನುದಾರರಿದ್ದೆವು! ಇಂದಿಗೂ ನಮ್ಮ ದೇಶದಲ್ಲಿ ನಮ್ಮ ಮನೆಯನ್ನು ನೋಡಿದರೆ ನಿಮ್ಮ ಕಣ್ಣು ಕುಕ್ಕಬಹುದು. ಆದರೆ, ಚಿಕ್ಕ ವಯಸ್ಸಿನಲ್ಲಿಯೆ ಎಲ್ಲರೂ ಸತ್ತುಹೋದರು. ನಾನೆಂದೆ, ಈ ಮನೆ, ಸಂಪತ್ತು, ಭೂಮಿ ಯಾರ ಸಲುವಾಗಿ? ಹೋಗಲಿ ಬಿಡು.' ಇದ್ದುದೆಲ್ಲವನ್ನು ನೆಂಟರಲ್ಲಿ ಹಂಚಿಕೊಟ್ಟು, ಬರ್ಮಾಕ್ಕೆ ಹೊರಟು ಬಂದೆ" ಎಂದ

ನಾನು ಸ್ವಲ್ಪ ಸ್ಥಿರವಾಗಿ "ನಿಮಗೆ ಅಭಯಾ ಯಾರೆಂಬುದು ಗೊತ್ತೆ?" ಎಂದು ವಿಚಾರಿಸಿದೆ.

ಅವನು ಬೆಚ್ಚಿದ ಮತ್ತು ಸ್ವಲ್ಪ ಹೊತ್ತು ಸುಮ್ಮಗಿದ್ದು "ನಿಮಗೆ ಆಕೆಯ ವಿಷಯ ಹೇಗೆ ಗೊತ್ತಾಯಿತು? ಎಂದು ಕೇಳಿದ.

"ನಿಮ್ಮ ಪತ್ತೆಯನ್ನು ಹಚ್ಚಿ, ತನ್ನ ಹೊಟ್ಟೆ ಹೊರಕೊಳ್ಳುವುದಕ್ಕಾಗಿ ಈ ಆಫೀಸಿಗೆ ಅರ್ಜಿ ಹಾಕಿರಬಹುದು, ಅಲ್ಲವೆ?"

ಅವನು ಸ್ವಲ್ಪ ಹೆಚ್ಚು ಪ್ರಸನ್ನನಾಗಿ "ಓಹೋ, ಇದೇ ಎಂದು ಹೇಳಿರಲ್ಲ! ಒಂದು ಕಾಲದಲ್ಲಿ ಆಕೆ ನನ್ನ ಹೆಂಡತಿಯಾಗಿದ್ದಳು— ಎಂದು ನಾನು ಒಪ್ಪುವೆ" ಎಂದು ನುಡಿದ.

" ಈಗ? ".

" ಏನೂ ಇಲ್ಲ, ನಾನು ಆಕೆಯುನ್ನು ಬಿಟ್ಟು ಇಲ್ಲಿಗೆ ಬಂದಿರುವೆ? "

" ಆಕೆ ಮಾಡಿದ ಅಪರಾಧ?"

ಆ ಮನುಷ್ಯ ತನ್ನ ಮುಖದ ಮೇಲೆ ಕೃತ್ರಿಮ ದುಃಖವನ್ನು ವ್ಯಕ್ತಗೊಳಿಸುತ್ತ " ಮಹಾಶಯರೆ, 'ಫ್ಯಾಮಿಲಿ ಸಿಕ್ರೇಟ್' ಹೇಳುವುದು ಉಚಿತವಲ್ಲ ಎಂಬುದನ್ನು ತಾವು ಬಲ್ಲಿರಿ. ಆದರೆ, ಈಗ ನೀವು ನನ್ನ ಆತ್ಮೀಯರಂತೆ ಇರುವಿರಿ. ಆದುದರಿಂದ ಆಕೆ ಒಬ್ಬ ದುಶ್ಚರಿತ್ರ ಹೆಂಗುಸೆಂದು ಹೇಳುವುದರಲ್ಲಿ ನಾಚಿಕೆಯಿಲ್ಲ ಇದೇ ಮಾನಸಿಕ ತಿರಸ್ಕಾರದಿಂದ ನಾನು ಮನೆಯನ್ನೂ ದೇಶವನ್ನೂ ಬಿಡಬೇಕಾಯಿತು. ಇಲ್ಲದೆ ಹೋದರೆ, ಯಾವನಾದರೂ ಪ್ರೀತಿಯಿಂದ ಈ ದೇಶದಲ್ಲಿ ಕಾಲಿಡಲು ಬಯಸುವನೇ? ತಾವೇ ಹೇಳಿರಲ್ಲ, ಇದೇನು ಸಾಮಾನ್ಯವಾದ ತಿರಸ್ಕಾರದ, ನಾಚಿಕೆಗೇಡಿತನದ ಮಾತೆ?" ಎಂದ.

ಉತ್ತರ ಏನೆಂದು ಕೊಡಲಿ?—ನಾಚಿಕೆಯಿಂದ ನನ್ನ ತಲೆ ತಾನಾಗಿಯೆ ಬಾಗಿತು. ಮೊದಲಿನಿಂದಲೂ ಈ ಒಂದನೇ ನಂಬರಿನ ಸಟೆಯಾಡುವವನ ಮಾತಿನ ಮೇಲೆ ಎಳ್ಳಷ್ಟೂ ವಿಶ್ವಾಸವನ್ನಿಟ್ಟಿರಲಿಲ್ಲ. ಆದರೆ ಈಗ ಇವನು ನೀಚನಿರುವಷ್ಟೇ ಕ್ರೂರನೂ ಇರುವನೆಂದು ನಿಸ್ಸಂದಿಗ್ಧವಾಗಿ ನನಗೆ ಗೊತ್ತು ಆಯಿತು

ಅಭಯಾಳ ವಿಷಯವಾಗಿ ನನಗೆ ಹೆಚ್ಚು ಗೊತ್ತಿಲ್ಲ. ಪತಿಯಾಗಿಯೂ ಅವನು ತನ್ನ ಹೆಂಡತಿಯ ಮೇಲೆ ಇಂತಹ ಮಹಾಪರಾಧವನ್ನು ಶಪಥ ಮಾಡಿ ಹೊರಿಸಿದ, ಆದರೆ ನಾನು ಪರಕೀಯನಾಗಿ ಆಕೆಯ ಮೇಲೆ ಈ ತರದ ಅಪರಾಧವನ್ನು ಹೊರಿಸಲಾರೆ. ಸ್ವಲ್ಪ ಸಮಯದ ನಂತರ ನಾನೆಂದೆ "ನೀವು ಬರುವಾಗ ಈ ಅಪರಾಧವನ್ನು ಆಕೆಯ ಮೇಲೆ ಹೊರಿಸಿ ಇಲ್ಲಿಗೆ ಬಂದಿರಲಿಲ್ಲ, ಇಲ್ಲಿಗೆ ಬಂದ ಬಳಿಕ ಸಹ ಕೆಲವು ದಿನ ಆಕೆಗೆ ಪತ್ರವನ್ನು ಬರೆಯುತ್ತಿದ್ದಿರಿ ಮತ್ತು ರೂಪಾಯಿಗಳನ್ನು ಕಳಿಸುತ್ತಿದ್ದಿರಿ. ನೀವು ಪತ್ರದಲ್ಲಾದರೂ ಬರೆದು ಈ ಬಗೆಯ ಅಪರಾಧವನ್ನು ಆಕೆಯ ಮೇಲೆ ಹೊರಿಸಿಲ್ಲ."

ಆ ಮಹಾ ಪಾಪಿಯು ಸ್ವಚ್ಛಂದವಾಗಿ ತನ್ನ ದೊಡ್ಡ ತುಟಿಗಳನ್ನು ಹಿಗ್ಗಿಸಿ ಗಟ್ಟಿಯಾಗಿ ನಕ್ಕು "ಸರಿ, ಮಹಾಶಯರೇ! ನೀವು ಬಲ್ಲಿರಿ, ನಾವು ಸದ್ಗೃಹಸ್ಥರು ಎಲ್ಲವನ್ನು ಸಹಿಸಿಕೊಳ್ಳುತ್ತೇವೆ, ಆದರೆ ಕೀಳು ಜನರಂತೆ ನಮ್ಮ ಹೆಂಡಂದಿರ ಕಲಂಕದ ಡಂಗುರವನ್ನು ಹೊಡೆಯುತ್ತ ತಿರುಗುವುದಿಲ್ಲ. ಇರಲಿ, ಈ ದುಃಖದ ಮಾತುಗಳನ್ನು ಒಂದು ಬದಿಗೆ ಇರಿಸಿಬಿಡಿರಿ ಮಹಾಶಯರೆ—ಇಂತಹ ಹೆಂಗುಸರ ಹೆಸರು ಉಚ್ಚರಿಸುವುದರಿಂದಲೂ ಪಾಪ ತಗಲುವುದು.—ಹಾಗಾದರೆ ನನ್ನ 'ಕೇಸನ್ನು' ತಾವೇ 'ಡಿಸ್ಪೋಜ್' (ನಿರ್ಣಯ) ಮಾಡುವಿರಲ್ಲವೆ? ನನ್ನ ಜೀವ ಉಳಿಯಿತು, ಕಲ್ಯಾಣವಾಯಿತು; ಆದರೆ, ಆ ಸಾಹೇಬನನ್ನು ಹೀಗೆಯೆ ಬಿಡಬೇಡಿರೆಂದು ಹೇಳುವೆ. ಅವರಿಗೆ ಪುನಃ ನನ್ನ ಬೆನ್ನು ಹತ್ತದಂತೆ ಪಾಠ ಕಲಿಸಿಬಿಡಬೇಕು ನೀವು ಅವನಿಗೂ ನನ್ನ ಶಕ್ತಿ ಎಷ್ಟಿದೆಯೆಂಬುದು ಗೊತ್ತಾಗಲಿ. ತಿಳಿಯಿತಲ್ಲವೆ ನಿಮಗೆ?— ಒಳ್ಳೇದು, ಆ ಸಾಹೇಬನನ್ನು ಈ ಹೆಡ್ ಆಫೀಸಿಗೆ ಕರೆಯಿಸಿಕೊಳ್ಳಲಿಕ್ಕೆ—ಜಗ್ಗಲಿಕ್ಕೆ ಆಗುವುದಿಲ್ಲವೆ?" ಎಂದ.

"ಇಲ್ಲ."

ಅವನು ನಗುತ್ತ ಫೈಲುಗಳನ್ನು ಮುಂದಕ್ಕೆ ಸರಿಸುತ್ತ "ಇರಲಿಬಿಡಿರಿ ತಮಾಷೆ. ನಿಮ್ಮ ಕೈಯಲ್ಲಿಯೆ ಹಿರಿಯ ಸಾಹೇಬರು ಇದ್ದಾರೆಂಬ ಸುದ್ದಿಯನ್ನು ತಿಳಿದುಕೊಳ್ಳದೆ ನಾನು ಇಲ್ಲಿಗೆ ಬಂದಿರುವೆನೇನು? ಇನ್ನೊಮ್ಮೆ ಅವನು ನನಗೆ ಗಂಟು ಬೀಳಲಿ, ಸತ್ತು ಹೋಗಲಿ. ಈ ದಿನವೇ ಹಿರಿಯ ಸಾಹೇಬರಿಂದ ಅಪ್ಪಣೆಯನ್ನು ಕೊಡಿಸಿ ನನ್ನನ್ನು ಕಳಿಸಲಿಕ್ಕಾಗುವುದಿಲ್ಲವೆ? ರಾತ್ರಿಯ ೯ ಗಂಟೆಯ ಗಾಡಿಗೆ ಹೋಗಿಬಿಟ್ಟರೆ ತೊಂದರೆಯಾಗುವುದಿಲ್ಲ. ತಾವು ಏನು ಹೇಳುವಿರಿ?" ಎಂದ.

ನಾನು ಒಮ್ಮೆಗೆ ಉತ್ತರವೀಯದಾದೆ. ಏಕೆಂದರೆ ಪ್ರಶಂಸೆ-ಶ್ಲಾಘನೆ ಮನುಷ್ಯನನ್ನು ಇಂತಹ ಸಮಯದಲ್ಲಿ ಧರ್ಮಸಂಕಟದಲ್ಲಿ ಹಾಕಿಬಿಡುವುದು. ಶ್ಲಾಘನೆಯಲ್ಲಿ ಅಂತಹ ಶಕ್ತಿಯುಂಟು. ಅವನ ವಿರುದ್ಧವಾಗಿ ಮಾತನಾಡಲು ಸಂಕೋಚವೆನಿಸಿತು ಆದರೆ ನಾನು ಮಾತ್ರ ಸಂಕೋಚವನ್ನು ದೂರಮಾಡಿ ನನ್ನನ್ನು ಸ್ವಲ್ಪ ಕಠೋರನನ್ನಾಗಿ ಮಾಡಿಕೊಂಡು ಹೇಳಿಯೇ ಬಿಟ್ಟೆ, "ಹಿರಿಯ ಸಾಹೇಬರ ಅಪ್ಪಣೆಯನ್ನು ಪಡೆದು-

ಕೊಂಡು ಹೋಗುವುದು ನಿಮಗೆ ಲಾಭದಾಯಕವಾಗಲಿಕ್ಕಿಲ್ಲ ನೀವು ಎಲ್ಲಾದರೂ ಯಾವುದಾದರೊಂದು ನೌಕರಿಯನ್ನು ಹುಡುಕಿಕೊಳ್ಳಿರಿ"

ಮುಹೂರ್ತ ಮಾತ್ರದಲ್ಲಿ ಅವನು ಕಟ್ಟಿಗೆಯ ಗೊಂಬೆಯಂತೆ ಕುಳಿತುಬಿಟ್ಟ. ಬಳಿಕ ಕೇಳಿದ "ಎಂದರೆ?"

"ಎಂದರೆ, ನಿಮಗೆ 'ಡಿಸ್‌ಮಿಸ್' ಮಾಡುವ 'ನೋಟ್' ನಾನೇ ಕೊಡುವೆ ನನ್ನಿಂದ ನಿಮಗೆ ಯಾವ ಬಗೆಯದೂ ಅನುಕೂಲತೆಯಾಗದು"

ಅವನು ಎದ್ದು ನಿಂತ—ಪುನಃ ಕುಳಿತ, ಅವನ ಎರಡೂ ಕಣ್ಣುಗಳಲ್ಲಿ ನೀರು ತುಂಬಿಬಂದುವು ಕೈಜೋಡಿಸಿ ಅವನೆಂದ "ಬಂಗಾಲಿಯಾಗಿ ಬಂಗಾಲಿಯನ್ನು ಕೊಲ್ಲಬೇಡಿರಿ ಬಾಬೂ, ನಾನು ಮಕ್ಕಳು ಮರಿ ಇದ್ದವ, ಸತ್ತು ಹೋಗುವೆ!"

"ಇದೆಲ್ಲವನ್ನು ನೋಡಿಕೊಳ್ಳುವ ಭಾರ ನನ್ನ ಮೇಲೆ ಇಲ್ಲ ಮೇಲಾಗಿ ನಿಮ್ಮ ವಿಷಯ ನನಗೆ ಗೊತ್ತು ಇಲ್ಲ ನಿಮ್ಮ ಸಾಹೇಬರ ವಿರುದ್ಧವಾಗಿಯೂ ನಾನು ಹೋಗಲಾರೆ"

ಅವನು ತನ್ನ ದೃಷ್ಟಿಯನ್ನು ನನ್ನ ಮೇಲೊಂದು ಬಾರಿ ಬೀರಿ ನಾನು ತಮಾಷೆ ಮಾಡುತ್ತಿಲ್ಲವೆಂಬುದನ್ನು ಅರಿತ. ನಾನೂ ಸ್ವಲ್ಪ ಹೊತ್ತು ಸುಮ್ಮಗೇ ಕುಳಿತಿದ್ದೆ. ಸ್ವಲ್ಪ ಹೊತ್ತಿನ ಮೇಲೆ ಅವನು ಅಕಸ್ಮಾತ್ ಗಟ್ಟಿಯಾಗಿ ಅಳತೊಡಗಿದ ನನಗೆ ನಾಚಿಕೆ ಬಂದಂತಾಯಿತು. ಅವನ ಅಳುವನ್ನು ತಡೆಯುವುದಕ್ಕಾಗಿ "ಅಭಯಾ ನಿಮಗಾಗಿಯೇ ಬರ್ಮಾಕ್ಕೆ ಬಂದಿರುವಳು; ದುರ್ನಡತೆಯ ಹೆಂಡತಿಯನ್ನು ಗ್ರಹಿಸಲಿಕ್ಕೇಬೇಕೆಂದು ನಾನು ಹೇಳುವುದಿಲ್ಲ. ಆದರೆ, ನಿಮ್ಮ ಎಲ್ಲ ಸಂಗತಿಗಳನ್ನು ಆಕೆಯು ಕೇಳಿದ ಮೇಲೆ ಸಹ ನಿಮ್ಮನ್ನು ಕ್ಷಮಿಸಿದರೆ—ಕ್ಷಮಿಸಿದ ಬಗ್ಗೆ ನೀವು ಆಕೆಯಿಂದ ಚೀಟಿಯನ್ನು ತಂದರೆ—ನಿಮ್ಮ ನೌಕರಿಯನ್ನು ಉಳಿಸಲು ನಾನು ಯತ್ನ ಮಾಡಿ ನೋಡುವೆ, ಇಲ್ಲದೆ ಹೋದರೆ ಮತ್ತೊಮ್ಮೆ ನೀವು ನನ್ನನ್ನು ಭೆಟ್ಟಿಯಾಗಿ ಲಜ್ಜಿತಗೊಳಿಸಬೇಡಿರಿ. ನಾನು ಸುಳ್ಳು ಹೇಳುವುದಿಲ್ಲ, ವ್ಯರ್ಥವಾಗಿ ಮಾತನ್ನು ಆಡುವುದಿಲ್ಲ." ಎಂದೆ.

ಈ ಕೀಳು ನಡತೆಯ ಜನರು ಬಹಳ ಅಂಜುಬುರುಕರಿರುವುದೆಂಬುದು ನನಗೆ ಗೊತ್ತಿದ್ದಿತು. ಅವನು ಕಣ್ಣೊರಸಿಕೊಂಡು "ಆಕೆ ಎಲ್ಲಿದ್ದಾಳೆ?" ಎಂದು ಕೇಳಿದ.

"ನಾಳೆ ಇದೇ ವೇಳೆಗೆ ಇಲ್ಲಿಗೆ ಬಂದರೆ ನಾನು ಪತ್ರ ಕೊಡುವೆ."

ಅವನು ಏನನ್ನೂ ಮಾತನಾಡದೆ ದೀರ್ಘ ನಮಸ್ಕಾರ ಮಾಡಿ ಹೊರಟು ಹೋದ

ಸಾಯಂಕಾಲ ಅಭಯಾ ಕೆಳಗೆ ಮುಖಮಾಡಿಕೊಂಡು ನಾನು ಹೇಳುವ ಮಾತುಗಳನ್ನು ಸುಮ್ಮಗೆ ಕೇಳುತ್ತಿದ್ದಳು ಕೇವಲ ತನ್ನ ಕಂಬನಿಗಳನ್ನು ಆಕೆಯು ಒರಸಿಕೊಂಡಳು, ಏನನ್ನೂ ಮಾತನಾಡಲಿಲ್ಲ ನನಗೆ ಬಂದ ಸಿಟ್ಟಿನ ಬಗ್ಗೆಯೂ ಮಾತನಾಡಲಿಲ್ಲ ಬಹಳ ಹೊತ್ತಿನ ನಂತರ ನಾನೇ ಕೇಳಿದೆ "ನೀನು ಅವನನ್ನು ಕ್ಷಮಿಸಬಲ್ಲೆಯಾ?"

ಅಭಯಾ ಕೇವಲ ತಲೆಯಲ್ಲಾಡಿಸಿ ತನ್ನ ಒಪ್ಪಿಗೆಯನ್ನಿತ್ತಳು.

"ನಿನ್ನನ್ನು ಅವನು ಕರೆದುಕೊಂಡು ಹೋದರೆ ನೀನು ಅವನ ಕೂಡ ಹೋಗುವೆಯಾ?"

ಮೊದಲಿನಂತೆ ತನ್ನ ತಲೆಯಲ್ಲಾಡಿಸಿ ಒಪ್ಪಿಗೆಯಿತ್ತಳು

"ಬರ್ಮಾ ಹೆಂಗುಸರ ಸ್ವಭಾವ ಎಂತಹುದು ಎಂಬುದನ್ನು ನೀನು ಮೊದಲನೆಯ ದಿನವೇ ತಿಳಿದುಕೊಂಡಿರುವೆ. ಆದಾಗ್ಯೂ ನೀನು ಅಲ್ಲಿಗೆ ಹೋಗಲು ಸಾಹಸಮಾಡುವೆಯಾ?"

ಈ ಬಾರಿ ಆಕೆಯು ತನ್ನ ಮುಖವನ್ನು ನೋಡಿಕ್ಕೆತ್ತಿದಳು ಆಕೆಯ ಕಣ್ಣುಗಳಿಂದ ಅಶ್ರುಧಾರೆಯು ಹರಿಯುತ್ತಿದ್ದಿತು ಆಕೆಯು ಮಾತನಾಡಲು ಪ್ರಯತ್ನಿಸಿದಳು. ಆದರೆ, ಮಾತನಾಡಲಿಕ್ಕಾಗಲಿಲ್ಲ. ಬಳಿಕ ಆಗಾಗ್ಗೆ ಕಂಬನಿಗಳನ್ನು ತನ್ನ ಸೀರೆಯ ಸೆರಗಿನಿಂದ ಒರೆಯಿಸಿಕೊಳ್ಳುತ್ತ ಗದ್ಗದ ಸ್ವರದಲ್ಲಿ "ಹೋಗದಿದ್ದರೆ ನನಗೆ ಬೇರೆ ಉಪಾಯವೇನಿದೆ ಹೇಳಿರಿ" ಎಂದಳು.

ಆಕೆಯ ಮಾತನ್ನು ಕೇಳಿ ನಾನು ಸಂತೋಷಪಡಬೇಕೋ ಅಥವಾ ಕಣ್ಣೀರು ಸುರಿಸಬೇಕೊ ಎಂಬುದು ತಿಳಿಯದಾಯಿತು. ಆದರೆ ಈ ಮಾತಿಗೆ ನನ್ನಿಂದ ಉತ್ತರಕೊಡುವುದು ಮಾತ್ರ ಸಾಧ್ಯವಾಗಲಿಲ್ಲ.

ಆ ದಿನ ಮತ್ತೇನೂ ಮಾತುಕತೆಯಾಗಲಿಲ್ಲ. ಮನೆಗೆ ಹೋಗುವಾಗ ದಾರಿಯುದ್ದಕ್ಕೂ ನಾನು ಯೋಚಿಸುತ್ತಲೇ ಹೋದೆ—ನಾನು ಈಕೆಯ ಮಾತಿಗೆ ಏನೆಂದು ಉತ್ತರಕೊಡಲಿ? ನನ್ನ ಮನಸ್ಸು ಒಂದು ಬಾರಿ ಯಾರ

ಮೇಲೆಯೊ ನಿಷ್ಫಲ ಕ್ರೋಧಗೊಳ್ಳುತ್ತಿದ್ದಿತು, ಒಂದು ಬಾರಿ ನಿರು ಪಾಯಳಾದ ನಿರಾಶ್ರಯಳಾದ ನಾರಿಯ ಪ್ರಶ್ನೆಯಿಂದ ನನ್ನ ಮನ ನೊಂದು ಭಾರವಾಗುತ್ತಿದ್ದಿತು. ಮರುದಿನ ಆ ಮನುಷ್ಯ ಅಭಯಾನ ವಿಳಾಸವನ್ನು ಕೇಳಲಿಕ್ಕೆ ನನ್ನ ಎದುರಿಗೆ ಬಂದು ನಿಂತ. ತಿರಸ್ಕಾರದಿಂದ ನನ್ನ ತಲೆಯನ್ನು ನಾನು ಕೆಳಗೆ ಮಾಡಿಕೊಂಡು ಕುಳ್ಳಿರಬೇಕಾಯಿತು ನನ್ನ ಮನದ ಭಾವ ವನ್ನು ಅರಿತು ಅವನು ಹೆಚ್ಚು ಮಾತನಾಡದೆ ವಿಳಾಸವನ್ನು ತೆಗೆದುಕೊಂಡು ನಮ್ರತೆಯಿಂದ ಹೊರಟು ಹೋದ ಆದರೆ ಮರುದಿನ ಅವನು ನನ್ನನ್ನು ಭೆಟ್ಟಿಯಾಗಲು ಬಂದಾಗ ಅವನ ಮುಖದ ಮೇಲಿನ ಭಾವ ಬದಲಾಗಿದ್ದುದು ಕಾಣಿಸಿತು. ಕಣ್ಣುಗಳ ದೃಷ್ಟಿಯೂ ಪರಿವರ್ತನೆಗೊಂಡಿದ್ದಿತು. ಅವನು ನಮಸ್ಕರಿಸಿ ಅಭಯಾಳು ಬರೆದ ಒಂದು ಸಾಲಿನ ಕಾಗದವನ್ನು ನನ್ನ ಮುಂದಿಟ್ಟು "ನೀವು ನನಗೆ ಮಾಡಿದ ಉಪಕಾರವನ್ನು ನಾನು ಬಾಯಿಂದ ಹೇಗೆ ವರ್ಣಿಸಲಿ? ಇದ್ದಷ್ಟು ದಿನ, ಬದುಕಿದಷ್ಟು ಕಾಲ ನಾನು ನಿಮ್ಮ ಗುಲಾಮನಾಗಿರುವೆ" ಎಂದ

ಅಭಯಾಳ ಬರೆಹದ ಮೇಲೆ ನೋಟವನ್ನಿರಿಸಿಯೆ ನಾನೆಂದೆ "ಹೋಗಿರಿ, ನೀವು ನಿಮ್ಮ ಕೆಲಸಕ್ಕೆ ತೊಡಗಿರಿ. ಸಾಹೇಬರು ಈ ಬಾರಿ ನಿಮ್ಮನ್ನು ಕ್ಷಮಿಸುವರು."

ಅವನು ನಕ್ಕು ನುಡಿದ "ನಾನು ಹಿರಿಯ ಸಾಹೇಬರ ಬಗ್ಗೆ ಚಿಂತೆ ಮಾಡುವುದಿಲ್ಲ, ಕೇವಲ ತಾವು ನನ್ನನ್ನು ಕ್ಷಮಿಸಿದರೆ ಸಾಕು, ಬದುಕುವೆ. ನಾನು ತಮ್ಮ ಶ್ರೀಚರಣಗಳಲ್ಲಿ ಮಹಾ ಮಹಾಪರಾಧಿ ಎಂದು ಹೇಳುವೆ." ಇಷ್ಟು ಮಾತುಗಳ ನಂತರ ಅವನು ಮತ್ತೆ ತನ್ನ ನಾಲಿಗೆಗೆ ಚಾಲನೆಯನ್ನು ಕೊಟ್ಟ. ಅದೇ ಮಾತು, ಹೊಗಳಿಕೆಯ ಮಾತು—ಸುಳ್ಳು ಸೊಲ್ಲು. ಮಧ್ಯಮಧ್ಯದಲ್ಲಿ ಕರವಸ್ತ್ರದಿಂದ ಕಣ್ಣುಗಳನ್ನೂ ಅವನು ಒರೆಸಿಕೊಳ್ಳುತ್ತಿದ್ದ. ಅವನು ಆಡಿದ ಮಾತುಗಳೆಲ್ಲವನ್ನು ಕೇಳುವಷ್ಟು ಧೈರ್ಯ ನಿಮಗಾರಿಗೂ ಇರಲಿಕ್ಕಿಲ್ಲ ಅವನಾಡಿದ ಮಾತುಗಳೆನ್ನೆಲ್ಲ ಇದ್ದಕ್ಕೆ ಇದ್ದಂತೆ ಹೇಳುವು ದೆಂದರೆ ನಿಮಗೆ ನಾನು ದಂಡವನ್ನು ವಿಧಿಸಿದಂತೆ. ನಾನು ಹಾಗೆ ಮಾಡದೆ ಸಂಕ್ಷೇಪದಲ್ಲಿಯೆ ಅವನು ಹೇಳಿದ ಮಾತುಗಳ ಸಾರ ಹೇಳುವೆ:— ಅವನು ತನ್ನ ಹೆಂಡತಿಯ ಮೇಲೆ ಹೊರೆಸಿದ ಅಪವಾದ ಸುಳ್ಳು,ತೀರಸುಳ್ಳು.

ಅವನು ಕೇವಲ ನಾಚಿಕೆಯ ಜಾಲದಲ್ಲಿ ಸಿಕ್ಕು ಹಾಗೆ ಹೇಳಿದ್ದ. ಇಲ್ಲದೆ ಹೋಗಿದ್ದರೆ ಇಂತಹ ಸತಿ-ಲಕ್ಷ್ಮಿ ಜಗತ್ತಿನಲ್ಲಿ ಎಲ್ಲಿಯೂ ಇಲ್ಲ! ಅವನು ಚಿರ ಕಾಲದಿಂದಲೂ ಅಭಯಾಳನ್ನು ಪ್ರಾಣಕ್ಕಿಂತ ಹೆಚ್ಚು ಪ್ರೀತಿಸುತ್ತಿರುವ. ಇಲ್ಲಿಗೆ ಬಂದ ಮೇಲೆ ಅವನು ಕೇವಲ ಬರ್ಮೀಯರಿಂದ ಪ್ರಾಣವನ್ನು ಉಳಿಸಿ ಕೊಳ್ಳುವುದಕ್ಕಾಗಿ ಮನಸ್ಸಿಲ್ಲದೆ ಬರ್ಮೀ ಹೆಂಗುಸನ್ನು ಮದುವೆಯಾಗಿರುವ. (ಈ ಮಾತು ಸ್ವಲ್ಪ ನಿಜವಿದ್ದರೂ ಇರಬಹುದು.) ಈ ದಿನ ರಾತ್ರಿ ಅವನು ತನ್ನ ಲಕ್ಷ್ಮಿಯನ್ನು ಮನೆಗೆ ಕರೆದುಕೊಂಡು ಹೋಗುವ, ಮನೆಗೆ ಹೋದ ಬಳಿಕ ಆ ಬರ್ಮೀ ಹೆಂಡತಿಯನ್ನು ದೂರವಿಡಲು ತಡ ಹಿಡಿಯದು! ಇನ್ನು ಉಳಿಯಿತು ಮಕ್ಕಳ ವ್ಯವಸ್ಥೆ—ಓಹೊ! ಹುಡುಗರ ರೂಪ ಹೇಗಿದೆಯೊ ಹಾಗೆಯೆ ಸ್ವಭಾವ! ಅವರು ಯಾವ ಗಿಡದ ತೊಪ್ಪಲು? ಮುಪ್ಪಿನಲ್ಲಿ ಅವ ರಿಂದ ಯಾವ ಆಶ್ರಯವೂ ಸಿಕ್ಕಲಿಕ್ಕಿಲ್ಲ, ಸಾಯುವಾಗ ಒಂದು ಹನಿ ನೀರನ್ನೂ ಅವರು ಬಾಯಲ್ಲಿ ಬಿಡಲಿಕ್ಕಿಲ್ಲ! ಹೋದೊಡನೆಯೆ ಅವನು ಅವ ರೆಲ್ಲರನ್ನೂ ಕಸಬರಿಗೆ ತೆಗೆದುಕೊಂಡು ಓಡಿಸಿಬಿಡುವ—ಆ ಮೇಲೆ ಅವರ ಹೆಸರು—ಇತ್ಯಾದಿ ಇತ್ಯಾದಿ.

"ಅಭಯಾಳನ್ನು ಇದೇ ದಿನ ರಾತ್ರಿ ನೀವು ಕರೆದುಕೊಂಡು ಹೋಗು ವಿರಾ?" ಎಂದು ನಾನು ಕೇಳಿದೆ. ಅವನು ಆಶ್ಚರ್ಯದಿಂದ ಅವಾಕ್ಕಾಗಿ "ಭೇಷ್! ಇಷ್ಟು ದಿನ ಕಣ್ಣಿಂದ ನೋಡಿರಲಿಲ್ಲ. ಆದುದರಿಂದ ಹೇಗಾದರೂ ಇದ್ದೆ, ಆಕೆಯನ್ನು ಕಣ್ಣಾರೆ ಕಂಡೂ ಕಣ್ಮರೆ ಮಾಡಿ ಇಡಲಾ? ಒಬ್ಬಳೇ ಇಷ್ಟು ದೂರ, ಇಷ್ಟು ಕಷ್ಟ ಸಹಿಸಿ, ಕೇವಲ ನನಗಾಗಿ ಬಂದಿರುವಳು! ಒಂದು ಬಾರಿ ಯೋಚಿಸಿಯಾದರೂ ನೋಡಿರಿ ಈ ಮಾತನ್ನು!" ಎಂದು ನುಡಿದ.

"ನೀವು ಇಬ್ಬರನ್ನೂ ಮನೆಯಲ್ಲಿ ಒಟ್ಟಿಗೇ ಇಡುವಿರಾ?"

"ಇಲ್ಲ ಈಗ ಸದ್ಯಕ್ಕೆ ಪ್ರೋಮದ ಪೋಸ್ಟ ಮಾಸ್ತರರ ಮನೆಯಲ್ಲಿ ಇಡುವೆ ಅವರ ಹೆಂಡತಿಯೊಡನೆ ಆನಂದದಿಂದ ಇರುವಳು. ಆದರೆ ಒಂದೆ- ರಡು ದಿವಸ ಮಾತ್ರ. ಆಕೆಗಾಗಿ ಒಂದು ಮನೆಯನ್ನು ಹಿಡಿದು, ಮನೆಯ ಲಕ್ಷ್ಮಿಯನ್ನು ಮನೆಗೆ ಕರೆದುಕೊಂಡು ಹೋಗುವೆ."

ಅಭಯಾಳ ಗಂಡ ಹೊರಟು ಹೋದ. ನಾನು ದಿನದ ಕೆಲಸದಲ್ಲಿ ತೊಡಗಲು ಫೈಲುಗಳನ್ನು ಎದುರಿಗೆ ಎಳೆದುಕೊಂಡೆ.

ಅವುಗಳ ಕೆಳಗಿದ್ದ ಅಭಯಾಳ ಕಾಗದದ ಮೇಲೆ ನನ್ನ ದೃಷ್ಟಿಯು ಹೋಯಿತು. ಬಳಿಕ ಆಕೆಯು ಬರೆದ ಎರಡು ಸಾಲುಗಳನ್ನು ನಾನೆಷ್ಟೋ ಸಲ ಓದಿದೆ; ಇನ್ನೂ ಎಷ್ಟು ಸಲ ಓದುತ್ತಿದ್ದೆನೋ ಹೇಳಲಾರೆ. ಇಷ್ಟರಲ್ಲಿ 'ಪ್ಯೂನ'ನು ಬಂದು "ಬಾಬೂಜೀ, ತಮ್ಮ ಮನೆಗೆ ಯಾವುವಾದರೂ ಕಾಗದ ಪತ್ರಗಳನ್ನು ಮುಟ್ಟಿಸಬೇಕೆ?" ಎಂದ ನಾನು ಬೆಚ್ಚಿ ಕತ್ತೆತ್ತಿ ನೋಡಿದೆ—ವದುರಿಗಿನ ಗಡಿಯಾರದಲ್ಲಿ ನಾಲ್ಕೂವರೆ ಬಾರಿಸಿತ್ತು ಕಾರಕೂನರು ತಮ್ಮ ತಮ್ಮ ದೈನಿಕ ಕಾರ್ಯಗಳನ್ನು ಮುಗಿಸಿಕೊಂಡು ತಮ್ಮ ತಮ್ಮ ಮನೆಗಳಿಗೆ ಹೋಗಿ ಬಿಟ್ಟಿದ್ದರು